ಅಕ್ಟೋಬರ್ 27, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1956
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ತಮ್ಮ ಸ್ನೇಹಿತನನ್ನು ಅತ್ಯಂತ ಕ್ರೂರವಾಗಿ ಕೊಲೆ ಮಾಡಿದ್ದ

# ರೌಡಿಯನ್ನು ಬರ್ಬರವಾಗಿ ಕೊಂದರು!





## ಮಾನಸಿಕ ಅಸ್ವಸ್ಥ ಮಹಿಳೆಯನ್ನು ಕೊಂದು ಶವದೊಂದಿಗೆ ಸಂಭೋಗ ಮಾಡಿದ ಆಟೋ ಡ್ರೈವರ್!

## ಬಿಜೆಪಿ ಮುಖಂಡನ ಕೊಂದವರಿಗೆ ಜೀವಾವಧಿ ಶಿಕ್ಷೆ










## ಮಗನ ಸ್ನೇಹಿತನೊಂದಿಗೆ ತಾಯಿ ಅನೈತಿಕ ಸಂಬಂಧ ಬೆಳೆಸಿದ್ದಕ್ಕೆ ಪತಿ ಇಬ್ಬರನ್ನೂ ಕೊಂದು ಹಾಕಿದ...!

# ಅಂಡರ್‌ವರ್ಲ್ಡ್ ನಿಗೂಢ ಸತ್ಯಗಳು

## ಅಮರ್ ಆಳ್ವ ಹತ್ಯೆ ಯಾಕಾಯಿತು?



(ಹಿಂದಿನ ಸಂಚಿಕೆಯಿಂದ)

**ಭಾಯಿ...** ಮರ್ ಆಳ್ವಾ ಕಾ ಗೇಮ್ ಬಜ್ ಗಯಾ... ಮಂಗ್ಳೂರು ಮೇ...

ದುಬೈನ ತಮ್ಮ ವೈಭವೋಪೇತ ಬಂಗಲೆ ಒಳಗಿನ ಕಪ್ಪು ಗ್ರಾನೈಟು ಹೊದೆಸಿದ ವಿಶಾಲವಾದ ಟೇಬಲ್ ಎದುರುಗಡೆಯ ಸಿಂಹಾಸನದಂತಹ ಸೋಫಾದಲ್ಲಿ ರಿಲ್ಯಾಕ್ಸ್ ಆಗಿ ಕುಳಿತಿದ್ದರು ಅಶೋಕ್ ಶೆಟ್ಟಿಫಿ. ಏದುಸಿರುಬಿಡುತ್ತಾ ಬಂದು ಸುದ್ದಿ ಮುಟ್ಟಿಸಿದವನನ್ನೊಮ್ಮೆ ದಿಟ್ಟಿಸಿ ನೋಡಿದರು. ಅವರ ಕಣ್ಣುಗಳೇ ಹಾಗೆ. ಅದರಲ್ಲಿ ಸಂತೋಷ, ಸಂಭ್ರಮ, ಆತಂಕ, ಕುತೂಹಲ, ಯಾವುದೂ ಇರುವುದಿಲ್ಲಫಿ. ಹೂಂ. ಅಂದಷ್ಟೇ ಹೇಳಿ ಸುಮ್ಮನಾದರು.

ವಿಷಯ ಇದಕ್ಕೂ ಮೊದಲೇ ಅವರಿಗೆ ಬಂದಿತ್ತು, ಕೊಲೆಯಾದ ಕೇವಲ ಏಳು ನಿಮಿಷಗಳಲ್ಲಿ ಹಂತಕರ ಪೈಕಿ ಒಬ್ಬನಾದ ಬಾಲೇಶ್ ಫೋನ್ ಮಾಡಿ 'ಅಶೋಕಣ್ಣಫಿ, ಗೇಮ್ ಸಕ್ಸಸ್' ಅಂತ ದುಬೈಗೆ ಫೋನ್ ಮಾಡಿದ್ದಫಿ. ಆಗಷ್ಟೇ ಅಶೋಕ್ ಶೆಟ್ಟಿ ಕೊನೆಯ ಪೆಗ್ ಕುಡಿದು ಗ್ಲಾಸ್ ಕೆಳಗಿಟ್ಟಿದ್ದರು. ತಕ್ಷಣ ಅಮರ್ ಆಳ್ವಾನದೊಂದು ಅಳಿಸಲಾಗದ ಚಿತ್ರ ಕಣ್ಣ ಮುಂದಿನಿಂದ ಕದಲಿ ಹೋದ ಹಾಗಾಯಿತು.

'ಸದ್ಯ ಪೊಲೀಸರ ಕೈಗೆ ಸಿಗಬೇಡಿ. ಉಳಿದ ವ್ಯವಸ್ಥೆ ತನ್ನಿಂದ ತಾನೇ ಆಗುತ್ತದೆ. ಮೊದಲು ನೀನು ಮುಂಬೈಗೆ ಹೊರಟು ಬಾ' ಅಂತಷ್ಟೇ ಹೇಳಿ ಫೋನ್ ರಿಸೀವರ್ ಕೆಳಗಿಟ್ಟರು. ಅವರ ಸ್ವಭಾವವೇ ಹಾಗೆ. ಯಾರೊಂದಿಗೂ ಹೆಚ್ಚು ಮಾತನಾಡುವವರಿಲ್ಲಫಿ. ದುಡ್ಡಿನ ವಿಷಯ ಮತ್ತು ಇಂಥವರನ್ನು 'ತೆಗೆಯಬೇಕು' ಅನ್ನುವ ವಿಷಯ ಬಂದಾಗ ಮಾತ್ರ ಯಾರನ್ನೂ ನಂಬುವುದಿಲ್ಲಫಿ. ಕೇವಲ ಒಂದು ಫೋನ್ ಮಾಡುತ್ತಾರೆ ಅಷ್ಟೇಫಿ. ಅದು ಮರಣದಂಡನೆಯ ಜಡ್ಜ್‌ಮೆಂಟ್. ಫಲಿತಾಂಶ ಮರುದಿನದ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತದೆ.

ಅಶೋಕ್ ಶೆಟ್ಟಿ ಕೆಲಸದ ರೀತಿಯೇ ವಿಚಿತ್ರಫಿ. ಅವರ್‍ಯಾವತ್ತೂ ಬೀದಿಯಲ್ಲಿ ನಿಂತು ಬಡಿದಾಡಲಿಲ್ಲಫಿ. ತಲವಾರು, ರಿವಾಲ್ವರ್ ಹಿಡಿದು ಅಬ್ಬರಿಸಲಿಲ್ಲಫಿ. ಕತ್ತಲ ಮೂಲೆಯೊಂದರಲ್ಲಿ ಕುಳಿತು ಏನು ಮಾಡಬೇಕು ಅನ್ನುವುದರ ಬಗ್ಗೆ ಪಕ್ಕಾ ಪ್ಲಾನ್ ತಯಾರು ಮಾಡಿಬಿಟ್ಟರೆ ಮುಗಿಯಿತು. ಅಂದುಕೊಂಡ ಕೆಲಸ ಮುಗಿದೇ ಹೋಗುತ್ತಿತ್ತುಫಿ. ಉಡುಪಿ ಮೂಲದ ಈ ಬಂಟರ ಯುವಕನಿಗೆ ಆ ಹೊತ್ತಿಗಾಗಲೇ ದುಬೈಫಿ, ಮುಂಬೈಫಿ, ಬೆಂಗಳೂರು ಮತ್ತು ಮಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಸಾಕಷ್ಟು ಕಾಂಟಾಕ್ಟ್‌ಗಳೂ ಬೆಳೆದಿತ್ತುಫಿ.

ಅಮರ್ ಹತ್ಯೆಯ ವಿಷಯ ತಿಳಿಯುತ್ತಿದ್ದಂತೆ ಮತ್ತೊಮ್ಮೆ ವಿಸ್ಕಿ ಗ್ಲಾಸನ್ನು ತುಟಿಗಟ್ಟಿಕೊಂಡು ತನ್ನಷ್ಟಕ್ಕೆ ತಾನೇ 'ಚಿಯರ್ಸ್' ಹೇಳಿಕೊಂಡರು. ಹಳೆಯದೆಲ್ಲ ಒಮ್ಮೆಗೇ ನೆನಪಾದಂತಾಯಿತು. ತನ್ನ ಅಗೋಚರ ಸಾಮ್ರಾಜ್ಯದ ವಿರುದ್ಧ ತೊಡೆ ತಟ್ಟಿದ ಏಕೈಕ ಗಂಡಸು ಅಮರ್ ಈಗಿಲ್ಲಫಿ. ಆತನ ಹತ್ಯೆ ನಡೆಸುವುದೇನು ಅವರಿಗೆ ದೊಡ್ಡ ವಿಷಯ ಆಗಿರಲೂ ಇಲ್ಲಫಿ. ಆದರೆ ಕೊಲೆ ಮಾಡುವುದೆಂದರೆ ಕೇವಲ ಶತ್ರುವನ್ನು ಸಾಯಿಸುವುದಲ್ಲಫಿ. ಕಣ್ಣಿಗೆ ಕಾಣದ ಅಗೋಚರ ಶತ್ರುವಿಗೂ ಸಾವಿನ ಭೀಕರತೆಯ ಅರಿವಾಗಬೇಕು. ಹಾಗೆ ಸಾಯಿಸಬೇಕು. ಇದು ಅವರು ನಂಬಿಕೊಂಡಿದ್ದ ಸತ್ಯಫಿ. ಅಮರ್ ಹತ್ಯೆಯಲ್ಲಿ ಇದು ಸಾಬೀತಾಗಿತ್ತುಫಿ. ಮಂಗಳೂರು ಅಂಡರ್‌ವರ್ಲ್ಡ್‌ನ ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ರಿವಾಲ್ವರ್‌ಗಳು ಅಬ್ಬರಿಸಿತ್ತುಫಿ. ಕ್ರೈಂನ ಸ್ವರೂಪವೂ ಬದಲಾಗಿತ್ತುಫಿ. ಹರಿದ ರಕ್ತದ ಧಾರೆಯೂ ದೊಡ್ಡದಿತ್ತುಫಿ.

ಆವತ್ತು ದಿನಾಂಕ 14 ಜುಲೈ 1992 ಸಮಯ ಸಂಜೆ 7.35. ಇಷ್ಟಕ್ಕೂ ಅವತ್ತೇನಾಯಿತೆಂದರೆ... ವೆನ್ಲಾಕ್ ಆಸ್ಪತ್ರೆಯ ಎದುರಿನ ತಾಜ್‌ಮಹಲ್ ಹೋಟೆಲ್ ರೂಮ್‌ನಿಂದ ಕೆಳಗಿಳಿದ ನಾಲ್ವರು ಹಂತಕರು ಕಾರನ್ನು

## ಪ್ರತೀಕಾರದ ಏಟಿಗೆ ಉಸಿರು ಚೆಲ್ಲಿದ ಅಮರ್

ಅಲ್ಲೇ ಸಮೀಪದಲ್ಲಿರಿಸಿ ಮಿಲಾಗ್ರಿಸ್ ಚರ್ಚ್ ಆವರಣದ ಗೋಡೆಯ ಹಿಂದೆ ಅಡಗಿ ಕುಳಿತರು. ಎಲ್ಲರೂ ಬ್ಯಾಗ್‌ಗಳಿಂದ ರಿವಾಲ್ವರ್‌ಗಳನ್ನು ತೆಗೆದು ಅಸೆಂಬಲ್ ಮಾಡಿಕೊಂಡರು. ಮುಂಬೈ ಶೂಟರ್ ಬಾಲೇಶ್‌ನ ಕೈ ಆ ಹೊತ್ತಿಗಾಗಲೇ ಯುಎಸ್ ಕಾರ್ಬೈನ್ ಟ್ರಿಗರ್ ಸವರುತ್ತಿತ್ತುಫಿ. ಸ್ವಲ್ಪ ಹೊತ್ತಿನಲ್ಲಿ ರಸ್ತೆಯ ಇನ್ನೊಂದು ಬದಿಯಲ್ಲಿದ್ದ ಸೂಪರ್ ಬಜಾರ್ ಎದುರು ಅಮರ್ ಆಳ್ವ ಜಿಪ್ಸಿ ವಾಹನದಲ್ಲಿ ಬಂದು ಇಳಿಯುತ್ತಿರುವುದು ಕಾಣಿಸಿತು. ತನ್ನ ಭಾವ ರಂಜನ್ ಪೂಂಜ, ಸ್ನೇಹಿತರಾದ ಕೇದಾರ್‌ನಾಥ್, ಮಂಜುನಾಥ್ ಶೆಟ್ಟಿಫಿ, ಜಗನ್ನಾಥ ಶೆಟ್ಟಿಫಿ, ವಿಜಯ್ ನಾಯಕ್, ರಮೇಶ್ ಭಟ್, ಬಾಲಕೃಷ್ಣ ರೈಫಿ, ಸಚಿತ್ ಕುಮಾರ್, ಸುದರ್ಶನ್ ಮತ್ತಿತರೊಂದಿಗೆ ಲೋಕಾಭಿರಾಮವಾಗಿ ಅಮರ್ ಹರಟೆ ಹೊಡೆಯುತ್ತಿರುವುದನ್ನು ಆವರಣದ ಒಳಗೆ ಅಡಗಿ ಕುಳಿತ ಹಂತಕರು ಗಮನಿಸಿದರು.

ಸಣ್ಣಗೆ ಮಳೆ ಹನಿಯುತ್ತಿರುವ ಸದ್ದಿನ ನಡುವೆಯೇ 'ಫೈಯರ್...' ಅಂತ ಯತೀಶ್ ಮೆಲ್ಲನೆ, ಅರಚುವ ಹೊತ್ತಿಗಾಗಲೇ ನಾಲ್ವರು ಹಂತಕರು ನಿಧಾನವಾಗಿ ರಸ್ತೆ ದಾಟಲಾರಂಭಿಸಿದರು. ಇದೇನಿದು ಯಾರೋ ಅಪರಿಚಿತ ವ್ಯಕ್ತಿ ಹತ್ತಿರ ಬರುತ್ತಿರುವ ಹಾಗಿದೆಯಲ್ಲಫಿ? ಅಂತ ಅಮರ್ ಅಂದುಕೊಳ್ಳುವಷ್ಟರಲ್ಲಿ ಎಡಗಡೆಯ ಬಳಿ ಮತ್ತೆ ಮೂವರ ಆಕೃತಿ ಕಾಣಿಸಿಕೊಂಡಿತು. ಎಲ್ಲರ ಕೈಗಳಲ್ಲೂ ರಿವಾಲ್ವರ್‌ಗಳಿತ್ತುಫಿ. ತಕ್ಷಣ ಅಮರ್‌ಗೆ ಗೊತ್ತಾಗಿ ಹೋಯಿತು. ಇನ್ನು ತಾನು ಬದುಕಿ ಹೊರಬೀಳುವುದಿಲ್ಲಫಿ! ಇನ್ನೊಂದೇ ಕ್ಷಣ ಅವಕಾಶ ದೊರೆತಿದ್ದರೂ ಅಮರ್, ಯತೀಶ್‌ನೆಡೆಗೆ ನುಗ್ಗಿ ಬಿಡುತ್ತಿದ್ದರೇನೋ. ಆದರೆ ಯತೀಶ್ ಅವರಿಗಿಂತ ಚಿಕ್ಕವನು. ದೇಹ ವೇಗವಾಗಿ ಮಾತು ಕೇಳಿತ್ತುಫಿ. ಮತ್ತು ಅದೇ ಹೊತ್ತಿಗೆ ಯತೀಶ್ ರಿವಾಲ್ವರ್ ಟ್ರಿಗರ್ ಎಳೆದಾಗಿತ್ತುಫಿ. ತಕ್ಷಣ ಅಮರ್ ಸೊಂಟದಲ್ಲಿದ್ದ ಬಂದೂಕಿನ ಕಡೆಗೆ ಕೈಚಾಚಲಿಲ್ಲಫಿ. ಎದುರುಗಡೆ ಇದ್ದ ರಸ್ತೆಯತ್ತ ಓಡುವ ಪ್ರಯತ್ನ ಮಾಡಿದರು. ಅಷ್ಟರಲ್ಲಿ ಯತೀಶ್ ಹಾರಿಸಿದ ಮೊದಲ ಗುಂಡು ಹೊಟ್ಟೆಯ ಎಡಬದಿಗೆ ತಗುಲಿತು. ಇದರ ಬೆನ್ನಲ್ಲೇ ಉಳಿದ ಮೂವರು ಹಂತಕರು ಯದ್ವಾತದ್ವಾ ಗುಂಡು ಹಾರಾಟ ನಡೆಸಿದರು. ಸಂಜೆಯ 7.35ರ ಹೊತ್ತಿಗೆ ಮಂಗಳೂರಿನ ಮಿಲಾಗ್ರಿಸ್ ಚರ್ಚ್ ಪರಿಸರ ಅದುರಿ ಹೋಗಿತ್ತುಫಿ. ಏನಾಗುತ್ತಿದೆ ಅನ್ನುವುದು ಅಲ್ಲಿದ್ದವರಿಗೆ ಗೊತ್ತಾಗುವ ಮೊದಲೇ ನಾಲ್ಕು ಮಂದಿ ಹಂತಕರ ರಿವಾಲ್ವರ್‌ಗಳಿಂದ ಗುಂಡುಗಳು ಪ್ರವಾಹದಂತೆ ನುಗ್ಗಿ ಬಂತು.

ಯತೀಶ್ ಹಾರಿಸಿದ ಮೊದಲ ಗುಂಡು ಅಮರ್ ಹೊಟ್ಟೆಗೆ ತಾಗಿದರೆ, ಎರಡನೆಯ ಗುಂಡು ಸೂಪರ್ ಬಜಾರ್‌ನ ಕಂಬಕ್ಕೆ ತಾಗಿತು. ಶಬ್ದ ಎಷ್ಟು ಭೀಕರವಾಗಿತ್ತೆಂದರೆ ಅದು ಅಮರ್‌ನ ಇಡೀ ಗುಂಪನ್ನೇ ಚದುರಿಸಿಬಿಟ್ಟಿತು. ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಓಡತೊಡಗಿದರು. ಇನ್ನೇನು ಹಂತಕರು ಮೂರನೇ ಬಾರಿ ಗುಂಡು ಹಾರಿಸಬೇಕೆನ್ನುವಷ್ಟರಲ್ಲಿ ಸಾವು ಬೆನ್ನು ಹತ್ತುತ್ತಿದೆ ಎಂಬುದು ಖಚಿತವಾಗುತ್ತಿದ್ದಂತೆಯೇ ಅಮರ್ ಒಂದೇ ನೆಗೆತಕ್ಕೆ ರಸ್ತೆಯ ಹೋಟೆಲ್ ಮೋತಿ ಮಹಲ್ ಇಳಿಜಾರಿನ ರಸ್ತೆಯ ಕಡೆ ಓಡತೊಡಗಿದರು. ಅಷ್ಟರಲ್ಲಾಗಲೇ ಅವರ ಪಕ್ಕೆಲುಬಿಗೆ ಮತ್ತೊಂದು ಗುಂಡು ಬಿತ್ತುಫಿ. ಕನಿಷ್ಠ 20 ಅಡಿ ಓಡಿರಬಹುದೇನೋ. ನೋವು ತಾಳಲಾರದೆ ಕುಸಿದುಬಿದ್ದರು. ನೋಡಿದರೆ ಎದುರಿಗೆ ನಿಂತಿತ್ತು ಹಂತಕರ ತಂಡ. ಮೊದಲು ಕಂಡದ್ದೆ ಯತೀಶ್. ಕೈಯಲ್ಲಿ ಅದೇ ಅನಾಹುತಕಾರಿ ರಿವಾಲ್ವರ್ ಇತ್ತುಫಿ.

ಅಲ್ಲೇ ಸ್ವಲ್ಪ ದೂರದಲ್ಲಿ ನಿಂತಿದ್ದ ಹಂತಕ ಬಾಲೇಶ್ ಯಾರೂ ಹತ್ತಿರ ಬರಬಾರದೆಂಬ ಮುನ್ನೆಚ್ಚರಿಕೆಯಿಂದ ಯುಎಸ್ ಕಾರ್ಬೈನ್‌ನಿಂದ ಸತತವಾಗಿ ಗುಂಡು ಹಾರಿಸುತ್ತಲೇ ಇದ್ದಫಿ.

ಇತ್ತ ಹೊಟ್ಟೆಗೆ ಬಿದ್ದ ಗುಂಡೇಟಿನ ಗಾಯದಿಂದ ಅಮರ್ ರಸ್ತೆಯಲ್ಲೇ ಕುಸಿದುಬಿದ್ದಾಗಿತ್ತುಫಿ. ಮಂಗಳೂರು ಭೂಗತ ಲೋಕದ ಅನಭಿಷಿಕ್ತ ದೊರೆ ಅಮರ್ ತನ್ನ ರಕ್ಷಣೆಗಾಗಿ ಒಂದೇ ಒಂದು ಆಯುಧವಿಲ್ಲದೆ, ಸ್ನೇಹಿತರ ಪಡೆಯಿಲ್ಲದೆ, ತನ್ನದೇ ಏರಿಯಾದಲ್ಲಿ ನಿರಾಯುಧರಾಗಿ ಹಂತಕರ ಕೈಗೆ ಸಿಕ್ಕಿಬಿದ್ದಿದ್ದನು. ಸಾವೆಂಬುದು ಕೆಲವೇ ಹೆಜ್ಜೆಗಳ ದೂರದಲ್ಲಿತ್ತುಫಿ. ಅದೇ ಹೊತ್ತಿಗೆ ತನ್ನಲ್ಲಿದ್ದ ರಿವಾಲ್ವರನ್ನು ರೀಲೋಡ್ ಮಾಡಿಕೊಂಡು ಎದುರಿಗೆ ಬಂದು ನಿಂತುಬಿಟ್ಟಿದ್ದ ಯತೀಶ್ ಶೆಟ್ಟಿಫಿ.



ಅಮರ್ ಆಳ್ವ

ತಾನು ದ್ವೇಷಿಸುತ್ತಿದ್ದ ಅಮರ್ ಮುಖ ಯತೀಶ್‌ಗೆ ಸ್ಪಷ್ಟವಾಗಿ ಕಾಣುತ್ತಿತ್ತುಫಿ. ಒಮ್ಮೆಲೇ ತಾಯಿ, ಸಹೋದರಿಗಾದ ಅವಮಾನ ನೆನಪಾಯಿತೇನೋ. ಸಿಟ್ಟು ಮತ್ತು ಅವಮಾನಗಳ ನೆನಪಿನಿಂದ ಕುದಿಯುತ್ತಿದ್ದಫಿ. ಆಕ್ರೋಶವೆಂಬುದು ಆತನ ಸಣ್ಣ ಕರುಳಿನ ಆಳದಿಂದ ಹುಟ್ಟಿಬಂದಂತಿತ್ತುಫಿ. ದಾರಿ ಮಧ್ಯದಲ್ಲಿ ನಿಸ್ಸಹಾಯಕರಾಗಿ ಬಿದ್ದಿದ್ದ ಅಮರ್ ಮೇಲೆ ಒಂದೇ ಅಡಿ ದೂರದಲ್ಲಿದ್ದು ನಿಂತು ಮತ್ತೆರಡು ಗುಂಡು ಹಾರಿಸಿದ. ಈ ವೇಳೆ ಶ್ರೀಕರ್, ಮುರಳಿ ಕೂಡ ರಿವಾಲ್ವರ್ ಟ್ರಿಗರ್ ಅದುಮತೊಡಗಿದರು. ಮೊದಲ ಗುಂಡು ಎದೆಯ ಬಲಭಾಗಕ್ಕೆ ಬಿತ್ತುಫಿ. ನಂತರದ್ದು ಕುತ್ತಿಗೆ ಮೊಣಕೈಫಿ, ಪಕ್ಕೆಲುಬುಗಳನ್ನು ಹರಿದು ಹಾಕಿತ್ತುಫಿ. ತೀರಾ ಹತ್ತಿರದಿಂದ ಹಂತಕರು ಹಾರಿಸಿದ ಇನ್ನೆರಡು ಗುಂಡುಗಳು ಸರಿಯಾಗಿ ಅಮರ್ ಎದೆಯ ಕವಾಟವನ್ನು ಸೀಳಿ ಹಾಕಿತು. ಮತ್ತಿಬ್ಬರು ಹಾರಿಸಿದ ಬುಲೆಟ್ ತಲೆ, ಕುತ್ತಿಗೆ ಭಾಗಕ್ಕೆ ಬಿತ್ತುಫಿ.

ಕೈಯಲ್ಲಿದ್ದ ರಿವಾಲ್ವರ್‌ಗಳ ಗುಂಡುಗಳು ಖಾಲಿಯಾಗುವ ತನಕ ಹಂತಕರೆಲ್ಲರೂ ಪಾಯಿಂಟ್ ಬ್ಲಾಂಕ್ ರೇಂಜಿನಲ್ಲಿ ಗುಂಡು ಹಾರಿಸುತ್ತಲೇ ಇದ್ದರು. ಈ ನಡುವೆ ಶ್ರೀಕರ್ ಬ್ಯಾಗ್‌ನಿಂದ ತಲವಾರು ತೆಗೆದು ಅಮರ್ ಎಡಗಾಲಿನ ತೊಡೆ ತುಂಡರಿಸಿಬಿಟ್ಟಿದ್ದಫಿ. ಭೂಗತ ಲೋಕದ ದೊಡ್ಡ ಆಲದ ಮರವನ್ನು ಉರುಳಿಸಿಬಿಟ್ಟ ಹಂತಕರು ಅಲ್ಲಿಂದ ಪರಾರಿಯಾಗಲು ತಯಾರಿ ನಡೆಸಿದರು.

ಮಿಲಾಗ್ರಿಸ್ ಪರಿಸರದ ಗಾಳಿಯಲ್ಲೆಲ್ಲಾ ಬಂದೂಕಿನ ಗಂಧಕ ಬೆರೆತ ವಾಸನೆ. ಕೆಲಸ ಮುಗಿದಾದ ನಂತರ ಹಂತಕರ ಪೈಕಿ ಶ್ರೀಕರ ತಲೆಯೆತ್ತಿ ಒಮ್ಮೆ ಸುತ್ತಲಿನ ಪರಿಸರವನ್ನು ಗಮನಿಸಿದ. ಅದೇ ದಾರಿಯಾಗಿ ಹೋಗುತ್ತಿದ್ದವನೊಬ್ಬ ಶ್ರೀಕರ್ ಹಾಗೆ ನೋಡಿದ ತಕ್ಷಣ ಎರಡೂ ಕೈಗಳನ್ನು ಮೇಲಕ್ಕೆತ್ತಿದ. ಕೊಲೆ ನಡೆದ ಕೆಲವೇ ಅಡಿ ದೂರದಲ್ಲಿ ನಿಂತಿದ್ದ ಮತ್ತೊಬ್ಬ ವ್ಯಕ್ತಿ ಒಬ್ಬ ಅದ್ಯಾವುದನ್ನು ನಂಬಲಾಗದ ಸ್ಥಿತಿಯಲ್ಲೇ ಹಿಂದಿಂದಕ್ಕೆ ನಡೆದು ಹೋಗತೊಡಗಿದ್ದಫಿ.

ಇಷ್ಟೆಲ್ಲಾ ಗುಂಡು ಹಾರಾಟ ನಡೆದ ವೇಳೆ ಬಾಲೇಶ ಹಾರಿಸಿದ ಯದ್ವತದ್ವಾ ಗುಂಡುಗಳ ಪೈಕಿ ಒಂದು ಗುಂಡು ಯತೀಶ್ ಹೊಟ್ಟೆ ಸೀಳಿ ಹಾಕಿತ್ತುಫಿ. ಉಳಿದ ಗುಂಡುಗಳು ಅಮರ್ ಸ್ನೇಹಿತರಿಗೂ ಬಿದ್ದಿದ್ದವು. 'ನಾನಿನ್ನೂ ಬದುಕುವುದು ಕಷ್ಟ ತಕ್ಷಣ ಆಸ್ಪತ್ರೆಗೆ ಸೇರಿಸಿಬಿಡಿ' ಅಂತ ಯತೀಶ್ ಹೇಳುತ್ತಿದ್ದಂತೆಯೇ ಹಂತಕಲ್ಲೊಬ್ಬನಾದ ಮುರಳಿ ಅದೇ ರಸ್ತೆಯಾಗಿ ಬರುತ್ತಿದ್ದ ರಿಕ್ಷಾ ಚಾಲಕನೊಬ್ಬನನ್ನು ರಿವಾಲ್ವರ್ ತೋರಿಸಿ ಬೆದರಿಸಿ ನಿಲ್ಲಿಸಿದ. ಕಾರಿನವರೆಗೆ ರಿಕ್ಷಾದಲ್ಲಿ ಹೋಗಿ ಅಲ್ಲಿಂದ ಪರಾರಿಯಾಗುವುದು ಹಂತಕರ ಪ್ಲಾನ್ ಆಗಿತ್ತುಫಿ. ಆದರೆ ಯತೀಶ್ ಬಿಟ್ಟು ಉಳಿದವರ್‍ಯಾರಿಗೂ ಡ್ರೈವಿಂಗ್ ಗೊತ್ತಿರಲಿಲ್ಲಫಿ. ಗುಂಡು ಬಿದ್ದ ಯತೀಶನಿಗೆ ಡ್ರೈವಿಂಗ್ ಸಾಧ್ಯವಾಗುತ್ತಿರಲಿಲ್ಲಫಿ. ಹಾಗಾಗಿ ಆರೋಪಿಗಳು ರಿಕ್ಷಾದಲ್ಲಿ ಪರಾರಿಯಾಗುವುದು ಅನಿವಾರ್ಯವಾಯಿತು.

ಸುತ್ತಲಿನವರಿಗೆ ಏನಾಯಿತೆಂಬುದು ಗೊತ್ತಾಗುವುದರೊಳಗೆ ಡಾನ್ ಅಮರ್ ಆಳ್ವ ಸತ್ತು ಹೋಗಿದ್ದರು. ಮಂಗಳೂರು ಮಹಾನಗರ ಹಿಂದೆ ಯಾವತ್ತೂ ಕಂಡಿರದ, ಮುಂದ್ಯಾವತ್ತೂ ಕಾಣದ ಅಂಡರ್‌ವರ್ಲ್ಡ್‌ನ ಸುಂದರ ರೂಪಿ ಯುವಕನ ಶವ ಫಳ್ನೀರ್ ರಸ್ತೆ ಮಧ್ಯದಲ್ಲಿ ಅನಾಥವಾಗಿ ಬಿದ್ದಿತ್ತುಫಿ.

ತಕ್ಷಣ ಅವರನ್ನು ಸಿಟಿ ಆಸ್ಪತ್ರೆಗೆ ದಾಖಲಿಸಲಾಯಿತು. ಕೊಂಚ ಹೊತ್ತಿನ ನಂತರ ಒಬ್ಬ ಜೂನಿಯರ್ ಡಾಕ್ಟರ್ ಬಂದು ಘೋಷಿಸಿದ.

ಹೀ ಇಸ್ ಡೆಡ್.

ಅಮರ್ ಸ್ನೇಹಿತರ ಪೈಕಿ ಮಂಜುನಾಥ ಶೆಟ್ಟಿನಿಂದ ಮರುದಿನ ಪೊಲೀಸರು ದೂರು ದಾಖಲಿಸಿಕೊಂಡರು. ಅದರಲ್ಲಿ ಮುತ್ತಪ್ಪ ರೈ ಹೆಸರಿತ್ತುಫಿ. ಶಿರ್ವಾದ ಯತೀಶ್ ಶೆಟ್ಟಿಫಿ, ಕಾಪುವಿನ ಶ್ರೀಕರ, ಸುರತ್ಕಲ್‌ನ ಮುರಳಿ ಹಾಗೂ ಕೆಂಚನಕೆರೆಯ ಬಾಲಕೃಷ್ಣ ಶೆಟ್ಟಿ ಯಾನೆ ಬಾಲೇಶ್ ಎಂಬುವರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿತ್ತುಫಿ.

ಮಂಗಳೂರು ಭೂಗತ ಲೋಕದ ಇತಿಹಾಸದ ಅತ್ಯಂತ ಮುಖ್ಯ ಅಧ್ಯಾಯ ಅಂದರೆ ಅದು ಅಮರ್ ಆಳ್ವ ಕೊಲೆ ಪ್ರಕರಣ. ಆವತ್ತು ಮಿಲಾಗ್ರಿಸ್ ಚರ್ಚ್ ಮುಂದೆ ಹಾರಿದ ಗುಂಡುಗಳು ಅಂಡರ್‌ವರ್ಲ್ಡ್‌ನ ದಿಕ್ಕನ್ನೇ ಬದಲಿಸಿತು. ಮಂಗಳೂರು ಕತ್ತಲ ಲೋಕದ ಸಿಹಂಆಸನ ಏಕಾಏಕಿ ಖಾಲಿಯಾಗಿಸಿತ್ತುಫಿ.

ಅಮರ್ ಸಾವಿಗೆ ಅಂಡರ್‌ವರ್ಲ್ಡ್ ತತ್ತರಿಸಿ ಹೋಗಿತ್ತುಫಿ. ಮಂಗಳೂರು ಒಂದೇ ಅಲ್ಲಫಿ. ಇಡೀ ಕರ್ನಾಟಕದ ಪಾತಕ ಪ್ರಾಪಂಚ ಬೆಚ್ಚಿಬಿದ್ದಂತಾಗಿತ್ತುಫಿ. ಅಮರ್ ಆಳ್ವಾ ಮೃತರಾಗಿದ್ದಾರೆಂದು ಘೋಷಣೆಯಾದ ನಂತರ ಒಂದು ಚಿಕ್ಕ ಫಾರ್ಮಾಲಿಟಿಯಂತಹ ಪೋಸ್ಟ್ ಮಾರ್ಟಂ ನಡೆಯಿತು. ಶವಸಂಸ್ಕಾರಕ್ಕೆ ಸಿದ್ಧತೆ ನಡೆಸಲಾಯಿತು.

ಡಾನ್ ಅಮರ್ ಅಂತ್ಯ ಸಂಸ್ಕಾರ ಬಹುಶಃ ಯಾವ ರಾಜನಿಗೂ ನಡೆದಿರಲಿಕ್ಕಿಲ್ಲಫಿ. ಹಾಗೆ ನಡೆಯಿತು. ವಿವಿಧ ಗ್ಯಾಂಗ್‌ಸ್ಟರ್‌ಗಳ ಕಡೆಯವರು ತಮ್ಮ ಕಡೆಯಿಂದ ಮುಖ್ಯರಾದವರನ್ನು ಕಳಿಸಿ ಗೌರವ ಸೂಚಿಸಿದ್ದರು. ಅಮರ್‌ರಿಂದ ಉಪಕೃತನದ ಪ್ರತೀ ಮನುಷ್ಯನು ಅಲ್ಲಿದ್ದಫಿ. ಬಂದೋಬಸ್ತಿನ ನೆಪದಲ್ಲಿ ಹಲವು ಪೊಲೀಸ್ ಅಧಿಕಾರಿಗಳು ಬಂದು ಕೊನೆಯ ಗೌರವ ಸಲ್ಲಿಸಿ ಹೋದರು. ಮಂಗಳೂರಿನ ಕೆಲವು ಏರಿಯಾಗಳಲ್ಲಿ ಜನ ತಾವಾಗಿಯೇ ಅಂಗಡಿ ಮುಚ್ಚಿದರು.

ಇಷ್ಟೆಲ್ಲಾ ಆಗಿ ಇನ್ನೇನು ಅಮರ್ ಚಿತೆಗೆ ಬೆಂಕಿ ಇಡಬೇಕೆನ್ನುವಷ್ಟರಲ್ಲಿ ಅಲ್ಲೇ ಬದಿಯಲ್ಲಿ ನಿಂತಿದ್ದ ಇಬ್ಬರು

☞ 10

# ಫ್ರೆಂಡ್ ಅಂತ ಮನೆಗೆ ಕರ್ಕೊಂಡು ಬಂದ್ರೆ, ಅಮ್ಮನ್ನ ಬುಟ್ಟಿಗೆ ಹಾಕೊಂಡ: ಅಪ್ಪ ಇಬ್ಬರ ಕಥೆ ಮುಗಿಸಿದ!







**ಬೆಂ**ಗಳೂರಿನಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ವಾಸವಿದ್ದ ಕುಟುಂಬದಲ್ಲಿ ಮಗನ ಸ್ನೇಹಿತನೊಂದಿಗೆ ತಾಯಿ ಅನೈತಿಕ ಸಂಬಂಧ ಬೆಳೆಸಿದ್ದಕ್ಕೆ ಪತಿ ಇಬ್ಬರನ್ನು ಕೊಲೆ ಮಾಡಿ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಆಂಧ್ರ ಪ್ರದೇಶ ರಾಜ್ಯದಿಂದ ಗಾರೆ ಕೆಲಸಕ್ಕೆಂದು ಬಂದು ನಿರ್ಮಾಣ ಹಂತದ ಕಟ್ಟಡದಲ್ಲಿ ವಾಸವಿದ್ದ ಕುಟುಂಬದಲ್ಲಿ ಮಗನೊಂದಿಗೆ ಸ್ನೇಹ ಬೆಳೆಸಿಕೊಂಡ ಯುವ ಫ್ರೆಂಡ್‌ಶಿಪ್ ನೆಪದಲ್ಲಿ ಅವರ ಮನೆಗೆ ಹೋಗಿದ್ದಾನೆ. ಆಗ ಅವರ ಅಮ್ಮನನ್ನೇ ಬುಟ್ಟಿಗೆ ಬೀಳಿಸಿಕೊಂಡು ಅನೈತಿಕ ಸಂಬಂಧ ಬೆಳೆಸಿದ್ದಾನೆ. ಇಬ್ಬರೂ ಒಟ್ಟಿಗೆ ರತಿಕ್ರೀಡೆಯಲ್ಲಿ ತೊಡಗಿದ್ದಾಗ ರೆಡ್ ಹ್ಯಾಂಡ್ ಆಗಿ ಹಿಡಿದ ಅಪ್ಪ ಇಬ್ಬರನ್ನೂ ಕೊಲೆ ಮಾಡಿ ಇದೀಗ ಆತನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಹೌದು, ಬೆಂಗಳೂರಿನ ಆರ್‌ಬಿಐ ಲೇಔಟ್ ಸಮೀಪದ ಸೋಮೇಶ್ವರ ಬಡಾವಣೆಯಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ನಿನ್ನೆ ಈ ಘಟನೆ ನಡೆದಿದೆ. ಯುವಕ (ಮಗನ ಸ್ನೇಹಿತ) ಗಣೇಶ್ ಕುಮಾರ್ (20), ಅಮ್ಮ ಫೈತಮ್ಮ (40) ಕೊಲೆಯಾದವರಾಗಿದ್ದಾರೆ. ಇನ್ನು ಇವರಿಬ್ಬರನ್ನು ಕೊಲೆ ಮಾಡಿ ತಾನೂ ನೇಣಿಗೆ ಶರಣಾದ ಅಪ್ಪ ಗೊಲ್ಲಬಾಬು (45) ಆಗಿದ್ದಾನೆ. ಗೊಲ್ಲಬಾಬು ಮತ್ತು ಫೈತಮ್ಮ ಅಲಿಯಾಸ್ ಲಕ್ಷ್ಮಿ ಆಂಧ್ರಪ್ರದೇಶ ಮೂಲದ ದಂಪತಿಯಾಗಿದ್ದು, ಕಳೆದ ಕೆಲವು ವರ್ಷಗಳಿಂದ ನಗರದಲ್ಲಿ ಗಾರೆ ಕೆಲಸ ಮಾಡಿಕೊಂಡು ನಿರ್ಮಾಣ ಹಂತದ ಕಟ್ಟಡಗಳಲ್ಲಿಯೇ ವಾಸ ಮಾಡುತ್ತಿದ್ದರು. ಆದರೆ, ಈ ಬಾರಿ ಬಂದಾಗ ಪತ್ನಿಯ ಅನೈತಿಕ ಸಂಬಂಧಕ್ಕೆ ಬೇಸತ್ತು ಗಂಡನೇ ಇಬ್ಬರನ್ನು ಕೊಲೆ ಮಾಡಿ, ತಾನೂ ಜೀವ ಬಿಟ್ಟಿರುವ ಪ್ರಸಂಗ ನಡೆದಿದೆ.

### ಘಟನೆಯ ಹಿನ್ನೆಲೆಯೇನು ಗೊತ್ತಾ?

ಬೆಂಗಳೂರಿನಲ್ಲಿ ವಿವಿಧ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಗೊಲ್ಲಬಾಬು ಮತ್ತು ಫೈತಮ್ಮ ದಂಪತಿ ತಮ್ಮ ಮಗನೊಂದಿಗೆ ನಿರ್ಮಾಣ ಹಂತದ ಕಟ್ಟಡಗಳಲ್ಲಿಯೇ ವಾಸಕ್ಕೆ ಇರುತ್ತಿದ್ದರು. ಕೇವಲ 2 ತಿಂಗಳ ಹಿಂದಷ್ಟೇ ಕೊಣನಕುಂಟೆ ನಿರ್ಮಾಣ ಹಂತದ ಬಿಲ್ಡಿಂಗ್ ಕೆಲಸಕ್ಕೆ ಬಂದು ಅಲ್ಲಿಯೇ ವಾಸವಾಗಿದ್ದರು. ಇವರಿಗಿಂತ ಮೊದಲೇ ಗಾರೆ ಕೆಲಸಕ್ಕೆ ಬಂದು ಇದೇ ಕಟ್ಟಡದ ಇನ್ನೊಂದು ಶೆಡ್ನಲ್ಲಿ ವಾಸವಿದ್ದ ಗಣೇಶ ಕುಮಾರ್ ಇವರ ಮಗನನ್ನು ಪರಿಚಯ ಮಾಡಿಕೊಂಡಿದ್ದಾನೆ. ಇವರಿಬ್ಬರೂ ಕೆಲಸ ವೇಳೆ ಟೀ, ಕಾಫಿ ಕುಡಿಯಲು ಹಾಗೂ ತಿಂಡಿ ತಿನ್ನಲು ಸಂಜೆ ಜೊತೆಗೆ ಹೋಗುತ್ತಿದ್ದರು. ಜೊತೆಗೆ, ಕೆಲವೊಮ್ಮೆ ರಾತ್ರಿಯೂ ಇಬ್ಬರೂ ಒಟ್ಟಿಗೆ ತಿರುಗಾಡಲು ಹೋಗುತ್ತಿದ್ದರು. ಇವರಿಬ್ಬರ ಸ್ನೇಹ ತೀವ್ರ ಆಪ್ತತೆ ಹೆಚ್ಚಾದಾಗ ಗಣೇಶನನ್ನು ತಮ್ಮ ಶೆಡ್ಗೆ ಕರೆದೊಯ್ದು, ತಾಯಿಯನ್ನು ಪರಿಚಯ ಮಾಡಿಕೊಟ್ಟಿದ್ದಾನೆ. ಇಬ್ಬರೂ ಒಟ್ಟಿಗೆ ಊಟವನ್ನು ಮಾಡಿದ್ದಾರೆ.

ಗಣೇಶಕುಮಾರ್ ತನ್ನ ಸ್ನೇಹಿತನ ಮನೆಗೆ ಬರುವುದನ್ನು ಹೆಚ್ಚು ಮಾಡಿದ್ದಾನೆ. ಆಗ ಮಗನಿಗೆ ನಿನ್ನ ಸ್ನೇಹಿತ ಅನಗತ್ಯವಾಗಿ ಮನೆಗೆ ಬರುತ್ತಿದ್ದು, ಇದನ್ನು ಕಡಿಮೆ ಮಾಡುವಂತೆ ಅಪ್ಪ ಗೊಲ್ಲಬಾಬು ಸೂಚಿಸಿದ್ದಾರೆ. ಆದರೆ, ಅಪ್ಪನ ಮಾತಿನ ಒಳಮರ್ಮ ಮಗನಿಗೆ ಅರ್ಥವಾಗಿಲ್ಲ. ದಿನಕಳೆದಂತೆ ಸ್ನೇಹಿತನ ಅಮ್ಮನ ಮೇಲೆ ಕಣ್ಣು ಹಾಕಿದ್ದ ಗಣೇಶ ಅನೈತಿಕ ಸಂಬಂಧವನ್ನೂ ಬೆಳೆಸಿದ್ದಾನೆ. ಇದರ ಸುಳಿವು ಹಿಡಿದ ಗೊಲ್ಲಬಾಬು ನೀನು ಮನೆಗೆ ಬರಬೇಡ ಎಂದು ಖಡಕ್ ಎಚ್ಚರಿಕೆಯನ್ನೂ ರವಾನಿಸಿದ್ದಾರೆ. ಗೊಲ್ಲಬಾಬು ಎಚ್ಚರಿಕೆಯನ್ನೂ ಗಣೇಶ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಗೊಲ್ಲಬಾಬು ಮತ್ತು ಫೈತಮ್ಮ ದಂಪತಿಯ ಮಗ ಕಳೆದ ಎರಡು ದಿನಗಳ ಹಿಂದೆ ಊರಿಗೆ ಹೋಗಿದ್ದಾನೆ. ಈ ವೇಳೆ ಸೀದಾ ಸ್ನೇಹಿತ ಮನೆಗೆ ತೆರಳಿ ಆತನ ಅಮ್ಮನೊಂದಿಗೆ ರತಿಕ್ರೀಡೆಯಲ್ಲಿ ತೊಡಗಿದ್ದಾನೆ. ಆದರೆ, ಈ ಬಗ್ಗೆ ಅನುಮಾನವಿದ್ದ ಗೊಲ್ಲಬಾಬು ಇವರಿಬ್ಬರು ಏಕಾಂತದಲ್ಲಿ ಇರುವಾಗಲೇ ಶೆಡ್‌ನೊಳಗೆ ಹೋಗಿದ್ದು, ಇಬ್ಬರನ್ನು ನೋಡಿ ತೀವ್ರ ಕೋಪಗೊಂಡಿದ್ದಾನೆ. ಆಗ ಇಬ್ಬರನ್ನೂ ಅಲ್ಲಿಯೇ ಇದ್ದ ಕಟ್ಟಡ ನಿರ್ಮಾಣಕ್ಕೆ ಬಳಸುವ ಕಟ್ಟಿಗೆಯನ್ನು ಹಿಡಿದು ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ. ನಂತರ, ನನ್ನ ಕುಟುಂಬವೇ ನಾಶವಾಗಿ ಹೋಯಿತು. ಮರ್ಯಾದೆ ಹೋದಮೇಲೆ ತಾನು ಬದುಕಿದ್ದಾರೂ ಫಲವೇನು ಎಂದು ತಾನು ಕೂಡ ಅದೇ ಕಟ್ಟದ ಕಿಟಕಿಯೊಂದಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಘಟನೆಯ ನಂತರ ಮಾಲೀಕರ ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದ ಕೋಣನಕುಂಟೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಮೃತದೇಹ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಘಟನೆ ಕುರಿತಂತೆ ತನಿಖೆ ಕೈಗೊಂಡಿದ್ದಾರೆ.



☯

# ಅಂಚೆ ಇಲಾಖೆ ಮೂಲಕ ಬೆಂಗಳೂರಿಗೆ ಬಂತು ವಿದೇಶಿ ಡ್ರಗ್ಸ್: 21 ಕೋಟಿ ರೂ ಮೌಲ್ಯದ ಡ್ರಗ್ಸ್ ವಶಕ್ಕೆ

**ಬೆಂ**ಗಳೂರು ಬೆಳೆದಂತೆಲ್ಲಾ ಕ್ರೈಂ ಕೂಡ ಅಷ್ಟೇ ವೇಗವಾಗಿ ಜಾಸ್ತಿ ಆಗುತ್ತಿದೆ. ಅದರಲ್ಲೂ ಪ್ರಮುಖವಾಗಿ ಮಾದಕ ವಸ್ತುಗಳ ನಶಾಲೋಕ ಶರವೇಗದಲ್ಲಿ ಬೆಳೆಯುತ್ತಿದೆ. ಬರೋಬ್ಬರಿ 21 ಕೋಟಿ ರೂ. ಮೌಲ್ಯದ ವಿವಿಧ ಬಗೆಯ ಐಷಾರಾಮಿ ಡ್ರಗ್ಸ್ ಬೆಂಗಳೂರಿಗೆ ಸರಬರಾಜು ಆಗುತ್ತಿದೆ ಎಂಬುವುದು ಸಿಸಿಬಿ ಪೊಲೀಸ್ ತನಿಖೆಯಿಂದ ಬಯಲಾಗಿದೆ.





ಅದು ದೇಶದ ಮಹಾನಗರಗಳಿಗೆ ಡ್ರಗ್ಸ್ ಸರಬರಾಜು ಮಾಡುವ ಬೃಹತ್ ಜಾಲ. ಸರ್ಕಾರಿ ಸಂಸ್ಥೆಯನ್ನೇ ಬಳಸಿಕೊಂಡು ಮಾದಕವಸ್ತುಗಳನ್ನ ಸರಬರಾಜು ಮಾಡುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ. ಹಾಗಾದರೆ ಪೊಲೀಸರ ಬಲೆಗೆ ಬಿದ್ದ ಆ ಜಾಲ ಯಾವುದು, ಸಿಕ್ಕ ಡ್ರಗ್ಸ್ ಎಷ್ಟು ಎಂದು ಕೇಳಿದರೆ ಶಾಕ್ ಆಗುವುದಂತೂ ನಿಜ.

21 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶಕ್ಕೆ

ಬೆಂಗಳೂರು ಬೆಳೆದಂತೆಲ್ಲಾ ಕ್ರೈಂ ಕೂಡ ಅಷ್ಟೇ ವೇಗವಾಗಿ ಜಾಸ್ತಿ ಆಗುತ್ತಿದೆ. ಅದರಲ್ಲೂ ಪ್ರಮುಖವಾಗಿ ಮಾದಕ ವಸ್ತುಗಳ ನಶಾಲೋಕ ಶರವೇಗದಲ್ಲಿ ಬೆಳೆಯುತ್ತಿದೆ. ಹಾಗಾಗಿ ಡ್ರಗ್ಸ್ ನಿಯಂತ್ರಣ ಮಾಡುವುದಕ್ಕೆ ಬೆಂಗಳೂರು ಪೊಲೀಸರು ಇನ್ನಿಲ್ಲದ ಪ್ರಯತ್ನ ನಡೆಸಿದ್ದಾರೆ. ಆದರೆ ಪೊಲೀಸರು ಎಷ್ಟೆ ಪ್ರಯತ್ನ ನಡೆಸಿದ್ರೂ, ಒಂದಲ್ಲೊಂದು ಮಾರ್ಗದಲ್ಲಿ ಮಾದಕ ವಸ್ತುಗಳು ಬೆಂಗಳೂರು ಸೇರುತ್ತಿದೆ. ಹೀಗೆ ಕಳೆದ ಸೆಪ್ಟೆಂಬರ್‌ನಲ್ಲಿ ನಗರದ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಎರಡು ಡ್ರಗ್ಸ್ ಕೇಸ್‌ಗಳು ವರದಿಯಾಗಿದ್ದವು. ಆ ಎರಡು ಪ್ರಕರಣಗಳ ಬೆನ್ನತ್ತಿದ ಪೊಲೀಸರಿಗೆ ಮಾದಕ ಲೋಕದ ಸಮುದ್ರವೇ ಸಿಕ್ಕಿದೆ.





ಅಂದಹಾಗೇ ಎಲ್ಲಾ ಡ್ರಗ್ಸ್ ಕೂಡ ವಿದೇಶಗಳಿಂದ ನಗರಕ್ಕೆ ಸರಬರಾಜು ಆಗುತ್ತಿದ್ದು, ಪೊಲೀಸರ ಪರಿಶೀಲನೆ ವೇಳೆ ಅದು ಭಾರತೀಯ ಅಂಚೆ ಇಲಾಖೆ ಮೂಲಕ ಬಂದಿರುವುದು ಗೊತ್ತಾಗಿದೆ. ಬಳಿಕ ಪ್ರಕರಣದ ಜಾಡು ಹಿಡಿದ ಸಿಸಿಬಿ ಪೊಲೀಸರು, ಕಸ್ಟಮ್ಸ್ ಅಧಿಕಾರಗಳ ಸಹಯೋಗದೊಂದಿಗೆ ಚಾಮರಾಜಪೇಟೆಯಲ್ಲಿರುವ ವಿದೇಶಿ ಪೋಸ್ಟ್ ಆಫೀಸ್‌ನಲ್ಲಿ ಪರಿಶೀಲನೆ ಮಾಡಿದ್ದಾರೆ. ಶ್ವಾನದಳದ ಸಹಾಯದಿಂದ ಸುಮಾರು 3500 ಪೋಸ್ಟ್‌ಗಳನ್ನ ಪರಿಶೀಲನೆ ನಡೆಸಿದಾಗ ಅದರಲ್ಲಿ ಯುಸ್, ಯುಕೆ, ಬೆಲ್ಜಿಯಂ, ಥೈಲ್ಯಾಂಡ್, ನೆದರಲ್ಯಾಂಡ್ ಹಾಗೂ ಇತರೆ ದೇಶಗಳಿಂದ ಬಂದಿರುವ 606 ಪೋಸ್ಟ್‌ಗಳಲ್ಲಿ ಬರೋಬ್ಬರಿ 21 ಕೋಟಿ ರೂ. ಮೌಲ್ಯದ ವಿವಿಧ ಬಗೆಯ ಐಷಾರಾಮಿ ಡ್ರಗ್ಸ್‌ಗಳು ಬಂದಿರುವುದು ಗೊತ್ತಾಗಿದೆ.

☯

**ಮಾನಸಿಕ ಅಸ್ವಸ್ಥ ಮಹಿಳೆಯೊಬ್ಬಳು ರಾತ್ರಿ ಮನೆಯಿಂದ ಹೊರ ಹೋದವಳು ಪುನಃ ಮನೆಗೆ ಬರಲಾಗದೆ ರಸ್ತೆಯಲ್ಲಿ ಸುತ್ತಾಡುತ್ತಿದ್ದಾಗ ಆಕೆಯನ್ನು ನೋಡಿದ ಆಟೋ ಡ್ರೈವರ್‌ಗೆ ಲೈಂಗಿಕ ಸಂಭೋಗ ಮಾಡುವ ಸಲುವಾಗಿ ಮನೆಗೆ ಬಿಡುವುದಾಗಿ ನಂಬಿಸಿ ಆಟೋದಲ್ಲಿ ಬೇರೆ ಕಡೆಗೆ ಕರೆದುಕೊಂಡು ಹೋಗುತ್ತಿದ್ದಾಗ, ಆಕೆಗೆ ಅನುಮಾನ ಬಂದು, ಆಟೋದಿಂದ ಜಿಗಿದು, ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದಾಗ, ಕೋಪಗೊಂಡ ಆಟೋ ಡ್ರೈವರ್ ಕಲ್ಲಿನಿಂದ ತಲೆಗೆ ಹೊಡೆದ ಪರಿಣಾಮ, ಪ್ರಜ್ಞೆ ತಪ್ಪಿ ಬಿದ್ದವಳನ್ನು ಆಟೋದಲ್ಲಿ ಹಾಕಿ ಲೈಂಗಿಕ ಸಂಭೋಗ ಮಾಡಿದನಲ್ಲದೆ, ಅಲ್ಲಿಂದ ನಿರ್ಜನ ಪ್ರದೇಶಕ್ಕೆ ಸಾಗಿಸಿ ಮಹಿಳೆಯನ್ನು ನೆಲದ ಮೇಲೆ ಹಾಕಿಕೊಂಡು ಮತ್ತೆ ಲೈಂಗಿಕ ಸಂಭೋಗ ಮಾಡಿ, ಪ್ರಜ್ಞೆ ಬರದೇ ಇದ್ದಾಗ ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದ ವಿಕೃತಕಾಮಿ ಆಟೋ ಡ್ರೈವರ್‌ನನ್ನು ಮುಳಬಾಗಿಲು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.**


ಆರೋಪಿ ಆಟೋ ಚಾಲಕ ಸೈಯ್ಯದ್ ಸುಹೇಲ್


# ಮುಳಬಾಗಿಲು: ಮಾನಸಿಕ ಅಸ್ವಸ್ಥ ಮಹಿಳೆಯನ್ನು ಕೊಂದು ಶವದೊಂದಿಗೆ ಸಂಭೋಗ ಮಾಡಿದ ಆಟೋ ಡ್ರೈವರ್!

ಕೋಲಾರ

✍ ಕೋಲಾರ ಮಂಜು


ಸುಶೀಲಮ್ಮ ಬದುಕಿದ್ದಾಗ

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಮುಳಬಾಗಿಲು ನಗರದ ಪಳ್ಳಿಗರಪಾಳ್ಯದ ವಾಸಿ ಎಲೆಕ್ಟ್ರಿಕಲ್ ಕೆಲಸ ಮಾಡುವ ಶಂಕರಪ್ಪ ಉರುಫ್ ಮೈಕ್ ಶಂಕರಪ್ಪ ಇವರು ಕಳೆದ 28 ವರ್ಷಗಳ ಹಿಂದೆ ಸುಶೀಲಮ್ಮ ಎಂಬುವವರನ್ನು ಮದುವೆಯಾಗಿದ್ದು, ಇವರಿಗೆ ಮಂಜುಳಾ, ರೇವಂತ್‌ಕುಮಾರ್, ಶ್ರಾವಣಿ ಮತ್ತು ರಾಜೇಶ್ ಎಂಬ ನಾಲ್ಕು ಮಕ್ಕಳಿರುತ್ತಾರೆ. 2001 ಡಿಸೆಂಬರ್ 12ರಂದು ಕೊನೆ ಮಗ ರಾಜೇಶ್ ಹುಟ್ಟಿದ್ದು, ಬಾಣಂತಿಯಾಗಿದ್ದ ಸುಶೀಲಮ್ಮನಿಗೆ ಆ ಸಮಯದಲ್ಲಿ ಸನ್ನಿಯಾಗಿ ಮಾನಸಿಕ ಅಸ್ವಸ್ಥರಾದರು. ಆಗ ಶಂಕರಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರು. ಸರಿ ಹೋಗಲಿಲ್ಲ. ದಿನಕಳೆದಂತೆ ಹೆಂಡತಿ ಸುಶೀಲಮ್ಮನ ಮಾನಸಿಕ ಸ್ಥಿತಿ ಹದಗೆಡುತ್ತಾ ಬಂದಿತು. ಆ ಸಂದರ್ಭದಲ್ಲಿ ಚಿಕ್ಕ ಮಗುವಿನ ಆರೈಕೆ ಮತ್ತು ಪೋಷಣೆಯ ಜವಾಬ್ದಾರಿಯನ್ನು ಗಂಡ ಶಂಕರಪ್ಪನವರು ವಹಿಸಿಕೊಂಡು, ಲಾಲನೆ, ಪಾಲನೆ ಮಾಡುವ ಮೂಲಕ ತನ್ನ ಮಕ್ಕಳನ್ನು ಸಾಕಿ ಬೆಳೆಸಿದರು. ಆದರೆ ಹೊಟ್ಟೆಪಾಡಿಗಾಗಿ ಕೆಲಸ ಮಾಡಬೇಕು, ಮನೆ ಮತ್ತು ನಾಲ್ಕು ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ ಹೆಂಡತಿ ಸುಶೀಲಮ್ಮನವರನ್ನು ಮಗುವಿನಂತೆ ನೋಡಿಕೊಳ್ಳಬೇಕಾಗಿರುವುದರಿಂದ ಮನೆಗೆ ಹೆಣ್ಣಿನ ಅವಶ್ಯಕತೆ ಇದ್ದು, ಸಂಬಂಧಿಕರು ಮತ್ತು ಬಂಧುಗಳು, ಮಕ್ಕಳು ಮತ್ತು ಮುಗ್ಧ ಮನಸ್ಸಿನ ಸುಶೀಲಮ್ಮನನ್ನು ನೋಡಿಕೊಳ್ಳಲು ಎರಡನೇ ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸಿದರು. ಆಗ ಒಲ್ಲದ ಮನಸ್ಸಿನಿಂದ ಶಂಕರಪ್ಪನವರು ಕಳೆದ 14 ವರ್ಷದ ಹಿಂದೆ ಅಮರಾವತಿ ಎಂಬುವವರನ್ನು ಮದುವೆಯಾಗಿದ್ದು, ಎರಡನೇ ಹೆಂಡತಿಯಾಗಿ ಮನೆಗೆ ಬಂದ ಅಮರಾವತಿ ರವರು ತಾಳಿಕಟ್ಟಿದ ಗಂಡನನ್ನು ನೋಡಿಕೊಳ್ಳುವುದರ ಜೊತೆಗೆ ಅಕ್ಕ ಸುಶೀಲಮ್ಮ ಮತ್ತು ಅವರ ಮಕ್ಕಳನ್ನು ತನ್ನ ಮಕ್ಕಳಂತೆ ನೋಡಿಕೊಂಡಿದ್ದರು. ಇದರ ಪ್ರತಿಫಲವಾಗಿ ಇವರಿಗೆ ಎರಡು ಮಕ್ಕಳಾಗಿದ್ದು, ಅಕ್ಕ ಸುಶೀಲಮ್ಮನ ನಾಲ್ಕು ಮಕ್ಕಳ ಜೊತೆಗೆ ತನ್ನ ಮಕ್ಕಳಾದ ಸ್ನೇಹ ಮತ್ತು ಧನೀಶ್‌ರೊಂದಿಗೆ ಸುಖವಾಗಿ ಜೀವನ ಸಾಗಿಸುತ್ತಿರುತ್ತಾರೆ.



ಎಸ್ಪಿ ಬಿ. ನಿಖಿಲ್


ಎಎಸ್ಪಿ ರವಿಶಂಕರ್

ಇದರ ನಡುವೆ ಮಾನಸಿಕ ಅಸ್ವಸ್ಥರಾದ ಸುಶೀಲಮ್ಮನ ಖಾಯಿಲೆ ಹೆಚ್ಚಾಗುತ್ತಾ ಹೋಗುತ್ತದೆ. ಆಗ ಶಂಕರಪ್ಪನವರು ಕೋಲಾರ ಮೆಡಿಕಲ್ ಕಾಲೇಜು ಆಸ್ಪತ್ರೆ ಸೇರಿದಂತೆ ಸಾಕಷ್ಟು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದರು. ಸರಿ ಹೋಗದ ಕಾರಣ ಬೆಂಗಳೂರಿನ ನಿಮ್ಹಾನ್ಸ್, ರಾಮಯ್ಯ ಆಸ್ಪತ್ರೆ ಸೇರಿದಂತೆ ಇತರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದು, ವಾಸಿಯಾಗಿರಲಿಲ್ಲ. ಮಾನಸಿಕ ಅಸ್ವಸ್ಥರಾದ ಸುಶೀಲಮ್ಮನವರನ್ನು ಒಂದು ಕಡೆ ಹಿಡಿದಿಟ್ಟುಕೊಳ್ಳುವುದು ಕಷ್ಟವಾಗಿ ಕೊಠಡಿಯಲ್ಲಿ ಕಡಿ ಹಾಕಿದರು. ತಪ್ಪಿಸಿಕೊಂಡು ಹೊರಗೆ ಹೋಗುತ್ತಿದ್ದರು. ಇದನ್ನು ನೋಡಿದ ಅಕ್ಕಪಕ್ಕದ ಮನೆಯವರು ಹಗ್ಗದಿಂದ ಬಿಗಿದು, ಕಬ್ಬಿಣದ ಚೈನ್‌ನಿಂದ ಕಟ್ಟಿ ಹಾಕಿ ಎಂದು ಒತ್ತಾಯಿಸುತ್ತಿದ್ದರು. ಆದರೆ ಗಂಡ ಶಂಕರಪ್ಪನವರಿಗೆ ಹೆಂಡತಿ ಸುಶೀಲಮ್ಮನವರನ್ನು ಬಂಧನದಲ್ಲಿಡಲು ಇಷ್ಟವಿರಲಿಲ್ಲ. ಎಲ್ಲರಂತೆ ಸ್ವಾತಂತ್ರವಾಗಿ ಮನೆಯಲ್ಲಿ ತಿರುಗಾಡಿಕೊಂಡಿರಲೆಂದು ಬಿಟ್ಟಿದ್ದರು. ಸುಶೀಲಮ್ಮನು ಸಹ ಮನೆಯಲ್ಲಿ ಮತ್ತು ಅಕ್ಕಪಕ್ಕದವರ ಜೊತೆ ಚೆನ್ನಾಗಿಯೇ ಇರುತ್ತಿದ್ದಳು. ತಲೆಕೆಟ್ಟಾಗ, ಮನೆಯವರ ಕಣ್ಣು ತಪ್ಪಿಸಿ ಹೊರಗೆ ಹೋಗಿ ರಸ್ತೆಯಲ್ಲಿ ತಿರುಗಾಡಿಕೊಂಡು ಸ್ವಲ್ಪ ಹೊತ್ತಿನ ನಂತರ ಮತ್ತೆ ಮನೆಗೆ ಬರುತ್ತಿದ್ದರು. ಕೆಲವೊಂದು ಸಾರಿ ಮನೆ ಗುರುತು ಸಿಗದೇ ಹೋದಾಗ ಮನೆಯನ್ನು ಹುಡುಕಿಕೊಂಡು ಎಷ್ಟೋ ದೂರ ಹೋಗಿ ಮತ್ತೆ ಬರಲಾಗದೆ ಕಷ್ಟಪಡುತ್ತಿದ್ದರು. ಆಗ ಶಂಕರಪ್ಪ ಮತ್ತು ಮಕ್ಕಳು ಹುಡುಕಿಕೊಂಡು ಹೋಗಿ ಸುಶೀಲಮ್ಮನವರನ್ನು ಮನೆಗೆ ಕರೆದುಕೊಂಡು ಬರುತ್ತಿದ್ದರು. 50 ವರ್ಷದ ಸುಶೀಲಮ್ಮನವರನ್ನು ಗಂಡ ಸೇರಿದಂತೆ ಮನೆಯವರೆಲ್ಲರೂ ಮಗುವಿನಂತೆ ನೋಡಿಕೊಂಡಿದ್ದರು.


ಕೊಲೆಯಾದ ಸುಶೀಲಮ್ಮಳ ಮೃತದೇಹ


ಡಿವೈಎಸ್ಪಿ ಡಿ. ನಂದಕುಮಾರ್


ಪಿಐ ಎನ್. ರಾಜಣ್ಣ

### ಸುಶೀಲಮ್ಮನ ಮೇಲೆ ರೇಪ್ ಅಂಡ್ ಮರ್ಡರ್

ಶಂಕರಪ್ಪನವರು ಸೆಪ್ಟೆಂಬರ್ 25ರಂದು ಬೆಳಿಗ್ಗೆ 6 ಗಂಟೆಗೆ ಮುಳಬಾಗಿಲು ನಗರ ಪೊಲೀಸ್ ಠಾಣೆಗೆ ಹಾಜರಾಗಿ ನನ್ನ ಹೆಂಡತಿ ಸುಶೀಲಮ್ಮ (50)ನವರನ್ನು ನೋಡಲು ಅವರ ತಂಗಿ ಅಮಲರವರು ನೆನ್ನೆ ಮಧ್ಯಾಹ್ನ ಮನೆಗೆ ಬಂದಿದ್ದರು. ಎಲ್ಲರೂ ಒಟ್ಟಿಗೆ ಊಟ ಮಾಡಿದ ನಂತರ ಅಕ್ಕನ ಜೊತೆ ಅಮಲ ಮಾತನಾಡಿಕೊಂಡಿದ್ದರು. ಸಂಜೆ 5 ಗಂಟೆ ಸಮಯದಲ್ಲಿ ಬೇತಮಂಗಲದಲ್ಲಿರುವ ಸಂಬಂಧಿಕರ ಮನೆಗೆ ಹೋಗಿ ನಾಳೆ ಬೆಳಿಗ್ಗೆ ಬರುವುದಾಗಿ ಹೇಳಿದರು. ಆಗ ನಾನು ಸೆಪ್ಟೆಂಬರ್ 26ರಂದು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ವೈದ್ಯರನ್ನು ಸಂಪರ್ಕಿಸಲು ಸಮಯ ಕೊಟ್ಟಿದ್ದಾರೆ. ಸುಶೀಲಮ್ಮನನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಬೇಕು, ನೀನು ಜೊತೆಯಲ್ಲಿ ಬರುವಂತೆ ತಿಳಿಸಿದೆನು. ಅದಕ್ಕೆ ಅಮಲ ಬರುತ್ತೇನೆಂದು ಹೇಳಿ ಬೇತಮಂಗಲಕ್ಕೆ ಹೊರಟಳು. ಹೆಂಡತಿ ಸುಶೀಲಮ್ಮ ಪ್ರತಿದಿನ ಬೆಳಿಗ್ಗೆ 11 ಗಂಟೆಗೆ ಮತ್ತು ಸಂಜೆ 6 ಗಂಟೆಗೆ ಊಟ ಮಾಡುತ್ತಿದ್ದಳು. ರಾತ್ರಿ 8 ಗಂಟೆಗೆಲ್ಲಾ ಮಲಗಿಬಿಡುತ್ತಿದ್ದಳು. ಸೆಪ್ಟೆಂಬರ್ 24ರಂದು ಸಂಜೆ ಊಟವಾದ ಮೇಲೆ ನನಗೆ ಟೀ ಕುಡಿಯಬೇಕೆನಿಸುತ್ತಿದೆಂದು ಹೇಳಿದಳು. ಆಗ ನಾನು ಅವರಿಗೆ 20 ರೂ. ಕೊಟ್ಟು ಟೀ ಕುಡಿದುಕೊಂಡು ಬೇಗ ಬಾ ಎಂದು ಹೇಳಿದೆನು. ಅದರಂತೆ ಸುಶೀಲಮ್ಮ ಮನೆ ಪಕ್ಕದಲ್ಲಿರುವ ಹೋಟೆಲ್‌ಗೆ ಹೋಗಿ ಟೀ ಕುಡಿದುಕೊಂಡು ಜೊತೆಗೆ ಎಲೆ, ಅಡಿಕೆಯನ್ನು ತೆಗೆದುಕೊಂಡು ಮನೆಗೆ ವಾಪಸ್ಸು ಬಂದು, ಹಾಸಿಗೆ ಮೇಲೆ ಕುಳಿತುಕೊಂಡು ತಂದಿದ್ದ ಎಲೆ, ಅಡಿಕೆಯನ್ನು ಜಿಗಿಯುತ್ತಾ ಕುಳಿತುಕೊಂಡಿದ್ದರು. ಕಾಮಸಮುದ್ರ ಗ್ರಾಮದಲ್ಲಿನ ನಮ್ಮ ಸಂಬಂಧಿಕರ ಮನೆಯಲ್ಲಿ ಸಂಜೆ 7 ಗಂಟೆಗೆ ಕಾರ್ಯಕ್ರಮವೊಂದಿದ್ದು ಅದಕ್ಕೆ ನಾನು ಹೋಗಲೇಬೇಕಾಗಿದ್ದರಿಂದ ರಾತ್ರಿ 8 ಗಂಟೆಗೆ ಎರಡನೇ ಹೆಂಡತಿ ಅಮರಾವತಿ ಹಾಗೂ ಮಕ್ಕಳಿಗೆ ಸುಶೀಲಮ್ಮನು ಹೊರಗಡೆ ಹೋಗದಂತೆ ನೋಡಿಕೊಳ್ಳಿ ಎಂದು ದ್ವಿಚಕ್ರ ವಾಹನದಲ್ಲಿ ಕಾಮಸಮುದ್ರ ಗ್ರಾಮಕ್ಕೆ ಹೋಗಿದ್ದೆನು. ರಾತ್ರಿ 10 ಗಂಟೆ ಸಮಯದಲ್ಲಿ ಸಂಬಂಧಿಕರ ಮನೆಯ ಕಾರ್ಯಕ್ರಮದಲ್ಲಿದ್ದಾಗ ನನ್ನ ಮಗ ಫೋನ್ ಮಾಡಿ ಅಮ್ಮ ಕಾಣಿಸುತ್ತಿಲ್ಲ. ನಾವೆಲ್ಲರೂ ಮನೆಯ ಸುತ್ತಮುತ್ತಲ್ಲೆಲ್ಲ ನೋಡಿದೆವು. ಆದರೆ ಅವರ ಸುಳಿವೇ ಇಲ್ಲ. ಬೇಗ ಮನೆಗೆ ಬನ್ನಿ ಎಂದು ಕರೆದರು. ಅದಕ್ಕೆ ನಾನು ದೂರ ಎಲ್ಲಿಯೂ ಹೋಗಿರುವುದಿಲ್ಲ. ಅಲ್ಲಿಯೇ ಹತ್ತಿರದಲ್ಲಿ ಸುತ್ತಾಡುತ್ತಿರುತ್ತಾರೆ. ನೀವುಗಳು ಹುಡುಕುತ್ತಿರಿ ನಾನು ಬೇಗ ಬಂದು ಬಿಡುತ್ತೇನೆಂದು ಹೇಳಿ ಕಾರ್ಯಕ್ರಮದಲ್ಲಿ

☞ 5

4 ☞

ಊಟ ಮಾಡದೆ ತಕ್ಷಣ ಅಲ್ಲಿಂದ ಹೊರಟು ಮನೆಗೆ ಬಂದು ಮಕ್ಕಳನ್ನು ಜೊತೆಗೆ ಕರೆದುಕೊಂಡು ನಮ್ಮ ಏರಿಯಾ ಸುತ್ತಮುತ್ತಲೆಲ್ಲ ಹುಡುಕಾಡಿದ್ದೆವು. ಆದರೆ ಸುಶೀಲಮ್ಮನ ಸುಳಿವೇ ಇಲ್ಲ. ರಾತ್ರಿ 12 ಗಂಟೆಯವರೆಗೂ ನಗರದ ಮುಖ್ಯರಸ್ತೆಗಳಲ್ಲಿ ಹುಡುಕಾಡಿದ ನಂತರ ಬೆಳಿಗ್ಗೆ ಬೇಗ ಎದ್ದು ಹುಡುಕಾಟ ನಡೆಸೋಣ ಎಂದು ಎಲ್ಲರೂ ಮನೆಗೆ ಬಂದು ಮಲಗಿಕೊಂಡೆವು. ಬೆಳಿಗ್ಗೆ 5 ಗಂಟೆ ಎದ್ದು ನಾನು ಮತ್ತು ಮಕ್ಕಳು ಎರಡು ತಂಡಗಳಾಗಿ ಮಾಡಿಕೊಂಡು ಊರೆಲ್ಲ ಹುಡುಕಾಡಿದೆವು. ಸುಶೀಲಮ್ಮ ಸಿಗದೇ ಇದ್ದಾಗ ನಿಮ್ಮ ಬಳಿಗೆ ಬಂದಿದ್ದೇವೆ. ದಯವಿಟ್ಟು ಹುಡುಕಿ ಕೊಡಿ ಎಂದು ಹೇಳುತ್ತಿದ್ದಾಗ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಯಾರೋ ಫೋನ್ ಮಾಡಿ ಕೋಲಾರ ರಸ್ತೆ ತಂಬಿಹಳ್ಳಿ ಬಳಿ ಮಾನಸಿಕ ಅಸ್ವಸ್ಥ ಮಹಿಳೆಯೊಬ್ಬಳು ತಿರುಗಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ತಾವು ಹೋಗಿ ನೋಡಿ ಎಂದು ಹೇಳಿದರು. ಕೂಡಲೇ ತಂಬಿಹಳ್ಳಿಗೆ ಹೋಗಿ ಹುಡುಕಾಡಿದ್ದೆವು. ಸುಶೀಲಮ್ಮ ಸಿಗಲಿಲ್ಲ. ನಂತರ ಮನೆಗೆ ಬಂದು ಅಲ್ಲಿಯೇ ಸುತ್ತಮುತ್ತ ಹುಡುಕಾಡುತ್ತಿರುವಾಗ ಬೆಳಿಗ್ಗೆ 9 ಗಂಟೆ ಸಮಯದಲ್ಲಿ ನಗರ ಠಾಣೆ ಪೊಲೀಸರು ಫೋನ್ ಮಾಡಿ ಹೈದರಿ ನಗರದ ಮೊಬಿನ್ ರವರ ಜಮೀನಿನಲ್ಲಿ ಯಾರದೋ ಒಂದು ಹೆಣ್ಣಿನ ಮೃತದೇಹ ಪತ್ತೆಯಾಗಿದೆ ತಾವು ಬಂದು ನೋಡುವಂತೆ ತಿಳಿಸಿದರು. ಕೂಡಲೇ ಸ್ಥಳಕ್ಕೆ ಹೋಗಿ ನೋಡಲಾಗಿ ಇದು ಸುಶೀಲಮ್ಮನ ಮೃತದೇಹವಾಗಿದ್ದು, ನನ್ನ ಹೆಂಡತಿಯ



ಮೃತ ಸುಶೀಲಮ್ಮನ ಮನೆ

ಶವವೆಂದು ತಿಳಿಸಿದೆನಲ್ಲದೆ ಹೆಂಡತಿಯ ಸಾವಿನ ವಿಚಾರದಲ್ಲಿ ಅನುಮಾನವಿದ್ದು, ನನ್ನ ಹೆಂಡತಿ ಸಾವಿನ ನಿಖರವಾದ ಕಾರಣವನ್ನು ವೈದ್ಯಕೀಯ ಪರೀಕ್ಷೆಯಿಂದ ತಿಳಿದುಕೊಂಡು ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ದೂರು ನೀಡಿದರು. ಶವದ ಮೇಲಿನ ಗಾಯದ ಗುರುತುಗಳು ಪತ್ತೆಯಾಗಿದ್ದು, ಅದು ಅಲ್ಲದೆ ತಲೆ ಹಾಗ ಕಿವಿಯಲ್ಲಿ ರಕ್ತ ಬಂದಿದ್ದು, ಹಾಗಾಗಿ ಸುಶೀಲಮ್ಮನ ಸಾವಿನ ಬಗ್ಗೆ ಅನುಮಾನಗೊಂಡ ಪೊಲೀಸರು, ಶಂಕರಪ್ಪ ನೀಡಿದ ದೂರಿನ ಮೇರೆಗೆ ಅನುಮಾನಸ್ಪದ ಸಾವು ಎಂದು ಠಾಣಾ ಯುಡಿಆರ್ ಸಂಖ್ಯೆ 22/2024 ಕಲಂ 194(3) (ಜಡ) ಬಿಎನ್‌ಎಸ್ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ಡಿ. ನಂದಕುಮಾರ್, ಪಿಐ ಎನ್. ರಾಜಣ್ಣ, ಬೆರಳಚ್ಚು ತಜ್ಞರು, ಶ್ವಾನದಳ ಹಾಗೂ ಪೊಲೀಸ್ ಸಿಬ್ಬಂದಿ ಹಾಜರಾಗಿ ಸ್ಥಳ ಪರಿಶೀಲಿಸಿದ ಮೇಲೆ ಪಂಚರ ಸಮಕ್ಷಮದಲ್ಲಿ ಪಂಚನಾಮೆ ನಡೆಸಿದ ಮೇಲೆ ಮೃತದೇಹವನ್ನು ಮುಳಬಾಗಿಲು ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು. ಅಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು.

### ಸಿಸಿ ಕ್ಯಾಮರಾಗಳಲ್ಲಿ ಸುಳಿವು ಪತ್ತೆ

ಮೃತ ಸುಶೀಲಮ್ಮನ ಸಾವು ಆಕಸ್ಮಿಕವೋ ಅಥವಾ ಕೊಲೆಯಾದ ಎಂದು ಪತ್ತೆ ಮಾಡಲು ಎಸ್ಪಿ ಬಿ. ನಿಖಿಲ್ ಮತ್ತು ಡಿವೈಎಸ್ಪಿ ಡಿ. ನಂದಕುಮಾರ್‌ರವರ ಮಾರ್ಗದರ್ಶನದಲ್ಲಿ ನಗರ ಪೊಲೀಸ್ ಠಾಣೆಯ ಪಿಐ ಎನ್. ರಾಜಣ್ಣನವರ ನೇತೃತ್ವದಲ್ಲಿ ಹೆಡ್‌ಕಾನ್ಸ್‌ಟೇಬಲ್ ಬಿ.ಎಸ್. ಚಲಪತಿ ಪೊಲೀಸ್ ಕಾನ್ಸ್‌ಟೇಬಲ್‌ಗಳಾದ ಟಿ. ಮಧು, ರವಿ ನಾಯಕ್, ರಾಮಾಂಜಿ, ಎಂ.ಬಿ. ಪ್ರಶಾಂತ್, ಪ್ರಭು ಮುಂತಾದವರ ತಂಡವನ್ನು ರಚಿಸಲಾಗಿದ್ದು, ಶಂಕರಪ್ಪನ ಹೆಂಡತಿ ಮಾನಸಿಕ ಅಸ್ವಸ್ಥಳೆಂಬ ಕಾರಣಕ್ಕೆ ಗಂಡನೇ ಆಕೆಯನ್ನು ಕೊಂದು ಶವವನ್ನು ನಿರ್ಜನ ಪ್ರದೇಶಕ್ಕೆ ತಂದು ಹಾಕಿ ಹೆಂಡತಿ ನಾಪತ್ತೆಯಾಗಿದ್ದಾಳೆ. ಎಲ್ಲಾ ಕಡೆ ಹುಡುಕಾಡಿದರೂ ಸಿಗಲಿಲ್ಲ. ಅದಕ್ಕೆ ಸುಶೀಲಮ್ಮನನ್ನು ಹುಡುಕಿ ಕೊಡುವಂತೆ ದೂರು ನೀಡಿ ನಾಟಕವಾಡುತ್ತಿರಬೇಕೆನ್ನುವ ಅನುಮಾನದಿಂದ ಮೊದಲಿಗೆ ಸಾಕ್ಷಿಗಳನ್ನು ಹುಡುಕಲು ಶಂಕರಪ್ಪನ ಮನೆ ಸುತ್ತಮುತ್ತ ಇರುವವರನ್ನು ವಿಚಾರಣೆ ಮಾಡಿದರಲ್ಲದೆ ನಗರದಲ್ಲಿನ 125ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳನ್ನು ಪರಿಶೀಲಿಸುತ್ತಾರೆ. ಅದರಲ್ಲಿ ಎಪಿಎಂಸಿ ಮಾರ್ಕೆಟ್ ಬಳಿ ಇರುವ ಸಿಸಿ ಕ್ಯಾಮರಾವನ್ನು ಪರಿಶೀಲಿಸುತ್ತಿದ್ದಾಗ ರಾತ್ರಿ 1.15 ಗಂಟೆ ಸಮಯದಲ್ಲಿ ರಸ್ತೆ ಪಕ್ಕದಲ್ಲಿ ಕುಳಿತಿದ್ದ ಮಹಿಳೆಯೊಬ್ಬರನ್ನು ಆಟೋದಲ್ಲಿ ಹತ್ತಿಸಿಕೊಂಡು ರಾಷ್ಟ್ರೀಯ ಹೆದ್ದಾರಿ 75ರ ರಸ್ತೆ ಕಡೆಗೆ ಹೋಗುತ್ತಾರೆ. ಮತ್ತೆ ರಾತ್ರಿ 2 ಗಂಟೆಗೆ ಎಪಿಎಂಸಿ ಮಾರ್ಕೆಟ್ ರಸ್ತೆ ಮೂಲಕ ನಗರದ ಮುಖ್ಯರಸ್ತೆ ಕಡೆಗೆ ಹೋಗುತ್ತಿರುವ ಆಟೋ ಬಗ್ಗೆ ಅನುಮಾನ ಬಂದು, ಆಟೋ ಯಾರಿಗೆ ಸೇರಿದ್ದು, ಡ್ರೈವರ್ ಯಾರು, ಆಟೋದಲ್ಲಿ ಹತ್ತಿಸಿಕೊಂಡು ಹೋದ ಮಹಿಳೆ ಯಾರು, ಹೈವೇಗೆ ಹೋದ ಆಟೋ ಮತ್ತೆ ವಾಪಸ್ಸು ಇದೇ ಮಾರ್ಗವಾಗಿ ಎಲ್ಲಿಗೆ ಹೋಯಿತು, ಆಟೋದಲ್ಲಿ ಡ್ರೈವರ್ ಜೊತೆಗೆ ಮತ್ತೆ ಯಾರಾದರ ಇದ್ದರಾ? ಎನ್ನುವುದರ ಬಗ್ಗೆ ಅನುಮಾನಿಸಿದ ಪೊಲೀಸರಿಗೆ ಒಂದು ಮಹತ್ವದ ಸುಳಿವು ಸಿಕ್ಕಿತು. ಎಪಿಎಂಸಿ ಮಾರ್ಕೆಟ್‌ನ ಸಿಸಿ ಕ್ಯಾಮರಾದಲ್ಲಿನ ತುಣುಕುಗಳನ್ನು ಹಿಡಿದು ತನಿಖೆ ಕೈಗೊಂಡಾಗ ಕೊಲೆಗಾರನ ಸುಳಿವು, ಪೊಲೀಸರಿಗೆ ಇದೊಂದು ಕೊಲೆ ಅನ್ನೋದು ಖಚಿತವಾಯಿತು. ಸಿಸಿ ಕ್ಯಾಮರಾದಲ್ಲಿ ಸಿಕ್ಕ ದೃಶ್ಯದಲ್ಲಿ ಆಟೋ ಮೇಲಿದ್ದ ಕೆಲವು ಗುರುತುಗಳನ್ನು ಹಿಡಿದು ಆಟೋಗಾಗಿ ಹುಡುಕಾಟ ನಡೆಸಿದಲ್ಲದೆ ಆರ್‌ಟಿಓ ಮೂಲಕ ಆಟೋ ಮತ್ತು ಅದರ ಮಾಲೀಕ ಯಾರೆಂದು ಪತ್ತೆ ಮಾಡಲಾಯಿತು. ಹೈದರಿನಗರದ ವಾಸಿ ಚಾಂದ್ ಪಾಷ ಅಲಿಯಾಸ್ ಡಬ್ಬಾ ಚಾನ್ ಇವರ ಸೈಯ್ಯದ್ ಸುಹೇಲ್ ಎಂದು ತಿಳಿದು


ಮೃತಳ ಗಂಡ ಶಂಕರಪ್ಪ


ಹೆಚ್‌ಸಿ ಬಿ.ಎಸ್. ಚಲಪತಿ, ಪಿಸಿಗಳಾದ ಟಿ. ಮಧು, ರವಿ ನಾಯಕ್, ಪಿ. ರಾಮಾಂಜಿ ಹಾಗೂ ಎಂ.ಬಿ. ಪ್ರಶಾಂತ್

ಬಂದಿದ್ದು, ಪಿಐ ರಾಜಣ್ಣನವರ ನೇತೃತ್ವದ ಕ್ರೈಂ ತಂಡವು ಅವನ ಬಂಧನಕ್ಕಾಗಿ ಬಲೆ ಬೀಸಿದರು. ಆದರೆ ಅಷ್ಟೊತ್ತಿಗಾಗಲೇ ಸೈಯ್ಯದ್ ಸುಹೇಲ್ ತಲೆಮರೆಸಿಕೊಂಡಿದ್ದನು. ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಅಕ್ಟೋಬರ್ 7ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಮುರುಗಮಲ್ಲ ದರ್ಗಾದಲ್ಲಿ ಅವಿತುಕೊಂಡಿರುವುದನ್ನು ತಿಳಿದು ಅಲ್ಲಿಗೆ ಹೋಗಿ ಸೈಯ್ಯದ್ ಸುಹೇಲ್‌ನನ್ನು ಬಂಧಿಸಿ ಮುಳಬಾಗಿಲು ನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಯಾರೂ ಊಹಿಸದ ರೀತಿಯಲ್ಲಿ ಆಘಾತಕಾರಿ ಅಂಶವೊಂದು ಬಯಲಿಗೆ ಬಂದಿತು.

### ಶವದೊಂದಿಗೆ ಎರಡು ಬಾರಿ ಸಂಭೋಗ

ಆಟೋ ಡ್ರೈವರ್ ಆಗಿರುವ ನಾನು ಸೆಪ್ಟೆಂಬರ್ 24ರಂದು ರಾತ್ರಿ ಎಪಿಎಂಸಿ ಮಾರ್ಕೆಟ್ ಮುಂದೆ ಹೋಗುತ್ತಿದ್ದಾಗ ರಸ್ತೆ ಪಕ್ಕದ ಕಲ್ಲಿನ ಮೇಲೆ ಮಹಿಳೆಯೊಬ್ಬಳು ಕುಳಿತುಕೊಂಡಿದ್ದಳು. ಆಟೋಗಾಗಿ ಕಾದಿರಬೇಕೆಂದು ಹತ್ತಿರಕ್ಕೆ ಹೋಗಿ ಎಲ್ಲಿಗೆ ಹೋಗಬೇಕೆಂದು ಕೇಳಿದೆ, ಪಾಳ್ಯಕ್ಕೆ ಎಂದಳು. ಯಾರೋ ಅಪರಿಚಿತಳಂತೆ ಕಾಣುತ್ತಿದ್ದಾಳೆ. ಈಕೆಯೊಂದಿಗೆ ಲೈಂಗಿಕ ಸಂಭೋಗ ಮಾಡಿದರೂ ಕೇಳುವವರು ಯಾರು ಇಲ್ಲ. ಅದಕ್ಕೆ ಮಾತನಾಡಿಸುವ ಪ್ರಯತ್ನ ಮಾಡಿದೆ. ಆದರೆ ಮಾತನಾಡದೆ ಮೌನವಾಗಿದ್ದವಳು ಸ್ವಲ್ಪ ಸಮಯದ ನಂತರ ರಸ್ತೆ ಪಕ್ಕದಲ್ಲಿಯೇ ನಡೆದುಕೊಂಡು ಹೋಗುತ್ತಿದ್ದಳು. ಆಗ ನಾನು ಆಟೋದಲ್ಲಿ ಹಿಂಬಾಲಿಸಿಕೊಂಡು ಹೋಗಿ ಆಕೆಗೆ ನನ್ನ ಮೇಲೆ ನಂಬಿಕೆ ಬರುವಂತೆ ಮಾತನಾಡಿಸುತ್ತಾ, ಎಲ್ಲಿ ಇರುವುದು ನಿಮ್ಮ ಮನೆ, ನಾನು ಆಟೋದಲ್ಲಿ ಕರೆದುಕೊಂಡು ಹೋಗಿ ನಿಮ್ಮ ಮನೆಯಲ್ಲಿ ಬಿಡುತ್ತೇನೆ ಹೆದರಬೇಡಿ ಎಂದು ಹೇಳಿದಕ್ಕೆ ಆಟೋದಲ್ಲಿ ಬಂದು ಕುಳಿತುಕೊಂಡಳು. ಆಗ ಅಲ್ಲಿಂದ ಊರಿನೊಳಕ್ಕೆ ಹೋಗದೆ ರಾಷ್ಟ್ರೀಯ ಹೆದ್ದಾರಿ 75ರ ರಸ್ತೆ ಪಕ್ಕದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಈಕೆಯೊಂದಿಗೆ ಲೈಂಗಿಕ ಸಂಭೋಗ ಮಾಡಬೇಕೆಂದು ನೆನೆಯುತ್ತಾ ಖುಷಿಯಾಗಿ ಆಟೋ ಚಾಲನೆ ಮಾಡಿಕೊಂಡು ಹೋಗುತ್ತಿರುವುದನ್ನು ನೋಡಿದ ಮಹಿಳೆ ಹಿಂದಿನಿಂದ ನನ್ನ ತಲೆಯನ್ನು ಹಿಡಿದುಕೊಂಡು ಜೋರಾಗಿ ಕೂಗಾಡುತ್ತಾ ಇರುವಾಗ ನನಗೆ ಭಯವಾಗಿ ಆಟೋವನ್ನು ನಿಲ್ಲಿಸಲು ಬ್ರೇಕ್ ಹಾಕುತ್ತಿದ್ದಂತೆ ಆಟೋ ನಿಲ್ಲುವುದಕ್ಕೆ ಮೊದಲೇ ಆಟೋದಿಂದ ರಸ್ತೆ ಪಕ್ಕಕ್ಕೆ ಜಿಗಿದು ಕೆಳಗೆ ಬಿದ್ದವಳು ಮೇಲೆ ಎದ್ದು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಮಣ್ಣು ತೆಗೆದು ನನ್ನ ಮೇಲೆ ಎಸೆದಳು. ಮಣ್ಣು ನನ್ನ ತಲೆ ಮತ್ತು ಕಣ್ಣಿನ ಒಳಗೆ ಬಿದ್ದು ನೋವಾಯಿತು. ಇದರಿಂದ ನನಗೆ ಕೋಪ ಬಂದು ಅಲ್ಲಿ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ತಲೆಗೆ ಬಲವಾಗಿ ಹೊಡೆದೆನು. ಬಿದ್ದ ಏಟಿಗೆ ಸದ್ದಿಲ್ಲದೆ ಪ್ರಜ್ಞೆ ತಪ್ಪಿ ಅಲ್ಲಿಯೇ ಬಿದ್ದುಬಿಟ್ಟಳು. ತಕ್ಷಣ ಆಕೆಯನ್ನು ಆಟೋದಲ್ಲಿ ಹಾಕಿ ಪ್ರಜ್ಞೆ ಬಂದುಬಿಟ್ಟರೆ ಗಲಾಟೆ ಮಾಡುತ್ತಾಳೆಂದು ನನ್ನ ಕಾಮತೃಷೆ ತೀರಿಸಿಕೊಳ್ಳಲು ಲೈಂಗಿಕ ಸಂಭೋಗ ಮಾಡಿದೆ. ನಂತರ ಅಲ್ಲಿಂದ ಹೈದರಿನಗರದ ಖಾಲಿ ಜಮೀನಿನ ಬಳಿಗೆ ಹೋಗಿ ಆಕೆಯನ್ನು ಆಟೋದಿಂದ ಕೆಳಗೆ ಇಳಿಸಿ, ನೆಲದ ಮೇಲೆ ಮಲಗಿಸಿ ಪ್ರಜ್ಞೆ ಬರುವುದಕ್ಕೆ ಮುನ್ನ ಇಲ್ಲಿಂದ ಹೋಗಬೇಕೆಂದುಕೊಂಡಿದ್ದೆ. ಆದರೆ ಆಕೆಗೆ ಪ್ರಜ್ಞೆ ಬಾರದೆ ಇರುವುದನ್ನು ನೋಡಿ ಆಟೋ ಒಳಗೆ ಸರಿಯಾಗಿ ಲೈಂಗಿಕ ಸುಖ ಪಡೆಯಲಾಗಲಿಲ್ಲ. ಈಗ ತೃಪ್ತಿಯಾಗಿ ಮಾಡಬಹುದೆಂದು, ಪ್ರಜ್ಞಾಹೀನಳಾದ ಮಹಿಳೆ ಮೇಲೆ ಮತ್ತೆ ಲೈಂಗಿಕ ಸಂಭೋಗ ಮಾಡಿದ್ದೆನು. ನಂತರ ಇಷ್ಟು ಹೊತ್ತಾದರೂ


ಆರೋಪಿಗೆ ಸೇರಿದ್ದ ಆಟೋ

ಪ್ರಜ್ಞೆ ಬಾರದೆ ಇರುವುದನ್ನು ನೋಡಿ ಭಯವಾಗಿ ಆಕೆಯನ್ನು ಅಲ್ಲಿಯೇ ಬಿಟ್ಟು ಆಟೋದೊಂದಿಗೆ ರಾತ್ರಿ ಮನೆ ಸೇರಿಕೊಂಡೆನು. ಮನೆಯಲ್ಲಿ ಮಲಗಿದ್ದ ನನಗೆ ನಿದ್ದೆಯೇ ಬರಲಿಲ್ಲ. ಕಾರಣ ಆಕೆ ಬದುಕಿದ್ದಾಳೋ ಅಥವಾ ಸತ್ತಿದ್ದಾಳೋ ಎನ್ನುವ ಭಯದಲ್ಲಿ ಕಾಲ ಕಳೆಯುತ್ತಿದ್ದಂತೆ ಬೆಳಗಾಯಿತು. ಹೈದರಿನಗರದ ಮೊಬಿನ್‌ರವರಿಗೆ ಸೇರಿದ ಬೀಡು ಬಿಟ್ಟಿರುವ ಜಮೀನಿನಲ್ಲಿ ಯಾವುದೋ ಒಂದು ಹೆಣ್ಣಿನ ಮೃತದೇಹ ಬಿದ್ದಿರುವ ಬಗ್ಗೆ ಬೆಳಿಗ್ಗೆ 9 ಗಂಟೆಗೆಲ್ಲ ಊರೆಲ್ಲ ಹರಡಿತ್ತು. ಈ ವಿಚಾರ ತಿಳಿಯುತ್ತಿದ್ದಂತೆ ಭಯವಾಗಿ ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಮುರಗಮಲ್ಲ ದರ್ಗಾಕ್ಕೆ ಹೋಗಿ ನನಗೆ ಗೊತ್ತಿರುವವರ ಮನೆಯಲ್ಲಿ ತಲೆಮರೆಸಿಕೊಂಡು ಇದ್ದೆನು. ಹದಿನಾಲ್ಕು ದಿನಗಳ ನಂತರ ಪೊಲೀಸರು ನನ್ನನ್ನು ಹುಡುಕಿಕೊಂಡು ಬಂದು ನನ್ನನ್ನು ವಶಕ್ಕೆ ಪಡೆದರು. ನಾನು ಮಾನಸಿಕ ಅಸ್ವಸ್ಥಳ ಮೇಲೆ ದೌರ್ಜನ್ಯದಿಂದ ಲೈಂಗಿಕ ಸಂಭೋಗ ಮಾಡಿರುವುದಲ್ಲದೆ ಆಕೆ ಸಾವಿಗೆ ಕಾರಣನಾಗಿರುವುದು ತಪ್ಪಾಗಿರುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾನೆ.

ಆರೋಪಿ ಕಾಮ ಪಿಶಾಚಿ ಸೈಯ್ಯದ್ ಸುಹೇಲ್ ನಿಂದ ಹೇಳಿಕೆ ಪಡೆದ ನಂತರ ಮೃತಳನ್ನು ಆಟೋಕ್ಕೆ ಹತ್ತಿಸಿಕೊಂಡ ಸ್ಥಳ, ಮಾರಣಾಂತಿಕವಾಗಿ ಹಲ್ಲೆ ಮಾಡಿ ಕಲ್ಲಿನಿಂದ ಹೊಡೆದು ಆಟೋದಲ್ಲಿ ಸಂಭೋಗ ಮಾಡಿದ ಸ್ಥಳ ಹಾಗೂ ಹೈದರಿನಗರದ ಬೀಡಾಡಿ ಜಮೀನಿನಲ್ಲಿ ಮತ್ತೊಂದು ಸಾರಿ ಸಂಭೋಗ ಮಾಡಿ ಶವವನ್ನು ಎಸೆದು ಹೋಗಿದ್ದ ಸ್ಥಳಗಳಿಗೆ ಕರೆದುಕೊಂಡು ಹೋಗಿ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಆರೋಪಿ ಸೈಯ್ಯದ್ ಸುಹೇಲ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ತಾಯಿ ವಯಸ್ಸಿನ ಮಹಿಳೆ ಮೇಲೆ ಲೈಂಗಿಕ ಸಂಭೋಗ ಮಾಡುವ ಉದ್ದೇಶದಿಂದ ಮಾನಸಿಕ ಅಸ್ವಸ್ಥಳು ಎನ್ನುವುದನ್ನು ನೋಡದೆ ಅಮಾನುಷವಾಗಿ ಕೊಂದು ಶವದೊಂದಿಗೆ ಲೈಂಗಿಕ ಸಂಭೋಗ ಮಾಡಿ ತನ್ನ ವಿಕೃತಿ ಮೆರೆದಿರುವ ಕಾಮುಕ ಸೈಯ್ಯದ್ ಸುಹೇಲ್‌ಗೆ ಕಾನೂನಿನಡಿಯಲ್ಲಿ ಉಗ್ರಶಿಕ್ಷೆಯಾಗಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ಕ್ರೈಂ ಪ್ರಪಂಚ

# ಕ್ರೈಂ ಅಂಡ್ ಡಿಸ್ಕವರಿ...

ಅವನೊಬ್ಬ ಹೋಟೆಲ್ ಕೆಲಸಗಾರ. ಅವನ ಹೆಸರು ಶ್ರೀರಂಗ...! ಪ್ರಾಯ ಇಪ್ಪತ್ತೈದು.

ಅಪ್ಪ-ಅಮ್ಮ ಇಲ್ಲದೆ ಅನಾಥನಾಗಿದ್ದ ಅವನನ್ನು ತಾತ ಕೆಲವು ವರ್ಷ ಸಾಕಿದ್ದರು. ಅವರು ಸತ್ತ ಮೇಲೆ ಸಂಬಂಧಿಕರು ಇವನ ಹತ್ತಿರ ಸಹ ಬರಲಿಲ್ಲಘಿ.

ಕೆಟ್ಟು ಪಟ್ಟಣ ಸೇರು ಎಂಬಂತೆ ಅವನು ಬೆಂಗಳೂರಿಗೆ ಬಂದನು. ಎಸ್ ಎಸ್ಎಲ್ಸಿ ಫೇಲ್ ಆಗಿದ್ದ ಇವನಿಗೆ ಯಾವ ಕಂಪನಿಯವರು ಕೆಲಸ ಕೊಡುತ್ತಾರೆ. ಹೋಟೆಲ್ ಸೇರಿಕೊಂಡ. ಸರ್ವೀಸ್ ಜಾಸ್ತಿಯಾದಂತೆ ಅವನ ಸಂಬಳ ಸಹ ಜಾಸ್ತಿ ಆಯಿತು. ಅವನಿಗೆ ಯಾವ ದುರಾಭ್ಯಾಸಗಳಿರಲಿಲ್ಲಘಿ. ಆದರೆ ಒಂದೇ ಒಂದು ವೀಕ್‌ನೆಸ್ ಇತ್ತುಘಿ. ಅದು ಸಿನಿಮಾ ಹುಚ್ಚುಘಿ. ಹಾಗಂತ ಎಲ್ಲರ ಸಿನಿಮಾಗಳನ್ನು ನೋಡುತ್ತಿರಲಿಲ್ಲಘಿ. ಅವನ ಫೇವರೇಟ್ ಹೀರೋಯಿನ್ ಅಂದರೆ ಪದ್ಮಿನಿ...!

ಸಿನಿಮಾ ಹೆಸರು ಮಾನ್ವಿತಾ!

ಇದುವರೆಗೂ ಸುಮಾರು ಇಪ್ಪತ್ತು ಸಿನಿಮಾಗಳಲ್ಲಿ ನಟಿಸಿ ಪ್ರಖ್ಯಾತಳಾಗಿದ್ದಾಳೆ. ಹೆಸರಿನ ಜೊತೆ ವಿಪರೀತ ಹಣ ಸಹ ಮಾಡಿದ್ದಾಳೆ. ಅವಳ ಸಿನಿಮಾ ಎಂದರೆ ವಿಪರೀತ ಕ್ರೇಜ್.

ಭಾನುವಾರ ಹೋಟೆಲ್‌ಗೆ ರಜಾ.

ಬೆಂಗಳೂರಿನ ಯಾವ ಬಡಾವಣೆಯಲ್ಲೇ ಇವಳ ಸಿನಿಮಾ ಇರಲಿ ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತಿದ್ದನು. ಕೆಲವೊಂದು ಸಲ ದಿನದ ನಾಲ್ಕು ಶೋಗಳನ್ನು ಅವಳ ಸಿನಿಮಾ ನೋಡಿದ್ದಾನೆ.

ಅವಳ ಸೌಂದರ್ಯ ಎಂದರೆ ಕ್ರೇಜ್. ಅವಳು ಸಹಜ ಅಭಿನೇತ್ರಿಘಿ. ಕೆಲವು ಸಿನಿಮಾಗಳಲ್ಲಿ ತುಂಬಾ ಧಾರಾಳವಾಗಿ ತನ್ನ ಸೌಂದರ್ಯ ತೋರಿಸಿದ್ದಾಳೆ ಮತ್ತು ಇತ್ತೀಚಿಗಿನ ಎರಡು ಸಿನಿಮಾಗಳಲ್ಲಿ ಚುಂಬನದ ದೃಶ್ಯಗಳಲ್ಲಿ ಕೂಡಾ ಸಹಕರಿಸಿದ್ದಾಳೆ.

ಈಗಲೂ ಅವಳಿಗೆ ಬೇಡಿಕೆ ಇದೆ. ಅವಳ ಕಾಲ್ ಶೀಟ್ ಪಡೆಯಲು ಪ್ರೊಡ್ಯೂಸರ್‌ಗಳು ಅವಳು ಕೇಳಿದಷ್ಟು ಹಣವನ್ನು ಸೂಟ್‌ಕೇಸ್‌ನಲ್ಲಿ ತುಂಬಿಸಿಕೊಂಡು ರೆಡಿಯಾಗಿ ಕಾಯುತ್ತಿದ್ದರು.

ಸಿನಿಮಾ ಇಂಡಸ್ಟ್ರಿಯಲ್ಲಿ ಇವಳ ಕ್ಯಾರೆಕ್ಟರ್ ಒಡಕು ಸುದ್ದಿ ಹರಡಿದೆ ಎಂದು ಹೇಳಬಹುದು. ಅವಳು ಸರಿ ಇಲ್ಲಘಿ. ಪದ್ಮಿನಿ ನೈಟ್ ಕ್ವೀನ್! ಅವಳು ರಾತ್ರಿ ರಾಣಿ ಆಟ ಆಡಿ ಆಸ್ತಿ ಮಾಡಿದ್ದಾಳೆ. ಅವಳು ಎಲ್ಲರಿಗೂ ಸಹ ಸಿಗೋಲ್ಲಘಿ. ಪ್ರಭಾವಶಾಲಿ ರಾಜಕಾರಣಿಗಳು, ಟಾಪ್ ಪ್ರೊಡ್ಯೂಸರ್‌ಗಳ ಪಾಲಿಗೆ ಮಾತ್ರ ರತಿ ರಾಣಿಯಾಗಿ ಸಹಕರಿಸುತ್ತಾಳೆ.

ಆದರೆ ಇದು ಬಹಿರಂಗ ಆಗಿಲ್ಲಘಿ. ಯಾರೂ ಸಹ ಈ ವಿಚಾರವಾಗಿ ಅವಳ ಎದುರಿಗೆ ಆಗಲಿ ಅಥವಾ ಅವಳ ಮನೆಯವರ ಎದುರಿಗೆ ಆಗಲಿ ಮಾತಾಡೋಲ್ಲಘಿ.

ಇದು ಓಪನ್ ಸೀಕ್ರೇಟ್! ಶ್ರೀರಂಗ ಎಂಬ ಹೋಟೆಲ್ ಕೆಲಸಗಾರನಿಗೆ ಈ ಆಸೆ ಬಂದಿತ್ತುಘಿ.

ಅವಳು ನನಗೆ ಸಿಗುತ್ತಾಳ? ಹಣ ಎಲ್ಲಿಂದ ತರಲಿ? ಲಕ್ಷಣಗಳ ಲೆಕ್ಕದಲ್ಲಿ ಒಂದು ರಾತ್ರಿಗೆ ಅವಳು ಡಿಮ್ಯಾಂಡ್ ಮಾಡುತ್ತಾಳೆ ಅಂತ ವದಂತಿ ಹರಡಿದ್ದರಿಂದ ಆ ಆಸೆ ಮರೆತಿದ್ದನು. ಈ ಶ್ರೀರಂಗ ಅವಳಿಗೆ ಪರಮಾಪ್ತ ಮತ್ತು ಅಂತರಂಗದ ಆತ್ಮೀಯ ಆಗಿದ್ದನು. ಇದೇ ವಿಶೇಷತೆ!

ಆ ಘಟನೆ ಏನು?

ಅವಳ ಕೋಪಕ್ಕೆ ಬಲಿಯಾಗಿ ಕಪಾಳ ಸೇವೆ ಮಾಡಿಸಿಕೊಂಡಿದ್ದ ಕಾಲೇಜಿನ ಶ್ರೀಮಂತ ವಿದ್ಯಾರ್ಥಿ ಕೆರಳಿದ್ದನು. ಸೇಡು ತೀರಿಸಿಕೊಳ್ಳಲು ಅವಳ ಮೇಲೆ ಆ್ಯಸಿಡ್ ಅನ್ನು ಪ್ರಯೋಗ ಮಾಡಿದ್ದನು.

ಶ್ರೀರಂಗ ಆಕಸ್ಮಿಕವಾಗಿ ಅಲ್ಲಿಗೆ ಬಂದು ಈ ದೃಶ್ಯ ನೋಡಿದ್ದನು. ಗಾಳಿಯ ವೇಗದಲ್ಲಿ ನುಗ್ಗಿ ಅವಳನ್ನು ಅಪಾಯದಿಂದ ಕಾಪಾಡಿದ್ದನು.

ಸ್ವಲ್ಪ ಎಡವಟ್ಟಾಗಿದ್ದರೂ ಅವಳ ಮುದ್ದಾದ ಮುಖ ಸುಟ್ಟುಕರಕಲಾಗಿರುತ್ತಿತ್ತುಘಿ. ಶ್ರೀರಂಗ ಆ ವಿದ್ಯಾರ್ಥಿಗೆ ಚೆನ್ನಾಗಿ ಬಡಿದು ಬುದ್ಧಿ ಕಲಿಸಿದ್ದನು.

ಆ ದಿನದಿಂದ ಅವಳು ಬದಲಾಗಿದ್ದಳು ಮತ್ತು ಆತ್ಮೀಯಳಾಗಿದ್ದಳು.

ಡ್ರೈವರ್ ಮತ್ತು ಭಾವ-ಡೈರೆಕ್ಟರ್ ಆಗಿದ್ದ ತಂಗವೇಲನ್ ಎದುರಿಗೆ ಶ್ರೀರಂಗನನ್ನು ತಬ್ಬಿಕೊಂಡಿದ್ದಳು ಮತ್ತು ಅವನ ಕೆನ್ನೆಗೆ ಮುತ್ತಿಟ್ಟಿದ್ದಳು.

ತಂಗವೇಲನ್ ಕೆರಳಿದ್ದನು.

ಹುಚ್ಚುಘಿ, ಹುಚ್ಚಾಗಿ ಆಡಿದ್ದನು.

ಏಕಾಂತದಲ್ಲಿ ಅವಳು ತಂಗವೇಲನ್‌ಗೆ ಹೇಳಿದ್ದಳು- ಆ ಹೋಟೆಲ್ ಕೆಲಸಗಾರ ನನ್ನ ಅಭಿಮಾನಿ ಬರದೆ ಇದ್ದಿದ್ದರೆ, ಬಂದು ಕಾಪಾಡದೆ ಇದ್ದಿದ್ದರೆ ನಾನು ಸುಟ್ಟುಕರಕಲಾಗಿರುತ್ತಿದ್ದೆಘಿ. ಆಮೇಲೆ ಸಿನಿಮಾ ರಂಗದ ವಿಚಾರ ಇರಲಿ. ನನ್ನಿಂದ ನಿಮಗೆ ಆಗುತ್ತಿರುವ ಸಂಪಾದನೆಗೆ ಕಲ್ಲು ಬೀಳುತ್ತಿತ್ತುಘಿ. ಆ ರಂಗನಿಗೆ ನಾನು ಈ ರೀತಿ ಥ್ಯಾಂಕ್ಸ್ ಹೇಳಿದ್ದೀನಿ ಎಂದು ಹೆದರುತ್ತಲೇ ಹೇಳಿದ್ದಳು.

ಹೆದರಿಕೆಗೆ ಕಾರಣ ಏನು?

ಭಯ... ಅಕ್ಕನ ಗಂಡ ಮತ್ತು ಇವಳ ಸಿನಿಮಾಗಳ ಡೈರೆಕ್ಟರ್ ಮತ್ತು ಕಂಟ್ರೋಲರ್ ಆಗಿರುವ ತಂಗವೇಲನ್‌ಗೆ ಎದುರಾಗಿ ಮಾತನಾಡುವುದಿಲ್ಲಘಿ.

ಮತ್ತೊಂದು ದಿನ!

''ನಾನೊಂದು ತೀರ್ಮಾನ ಮಾಡಿದ್ದೀನಿ.''

''ತೀರ್ಮಾನ... ಏನದು? ನಿನಗೆ ಆ ಫ್ರೀಡಮ್ ಇಲ್ಲಘಿ. ಯಾರನ್ನ ಕೇಳಿ ನೀನು ಈ ತೀರ್ಮಾನ ಮಾಡಿರುವೆ?''

ಅವಳು ಅದಕ್ಕೆ ಉತ್ತರಿಸಲಿಲ್ಲಘಿ. ಆದರೆ ಬೇರೆ ಮಾತಾಡಿದಳು. ''ನಾಳೆಯಿಂದ ಶ್ರೀರಂಗ ನನ್ನ ಕಾರಿನ ಡ್ರೈವರ್ ಆಗಿರುತ್ತಾನೆ'' ಎಂದು ಹೇಳಿ ಅಲ್ಲಿಂದ ರೂಮಿಗೆ ಹೋಗಿದ್ದಳು.

ತಂಗವೇಲನ್ ಕೋಪದಿಂದ ಈಗ ಅವಳ ಕಡೆ ನೋಡುತ್ತಾ ಹಲ್ಲು ಕಡಿದನು. ಅದೇ ಸಮಯಕ್ಕೆ ಅಲ್ಲಿಗೆ ಅಕ್ಕ ಬಂದಳು ಮತ್ತು ತಮ್ಮ ಜಗನ್‌ಬಾಬು ಬಂದು ''ಏನದು ಗಲಾಟೆ'' ಎಂದನು.

ಅಕ್ಕ ಮಧುರ ಎಲ್ಲಾ ಹೇಳಿದಳು.

ಜಗನ್‌ಬಾಬು ''ಯಾಕೋ ಇವಳು ಬಾಲ ಬಿಚ್ಚುತ್ತಿದ್ದಾಳೆ. ಪ್ರಾರಂಭತದಲ್ಲೇ ಕಟ್ ಮಾಡದಿದ್ದರೆ ತೊಂದರೆ ಆಗುತ್ತೆಘಿ. ನಾನು ಡ್ರೈವರ್ ರೀತಿ ಇರುವಾಗ, ಆ ಹೋಟೆಲ್ ಕೆಲಸಗಾರ ಯಾಕೆ ಬೇಕು?''

ಅಕ್ಕ ಮಧುರ ''ಈಗ ವಿರೋಧ ಮಾಡ್ಬೇಡಿ. ಟೈಂ ನೋಡಿಕೊಂಡು ಹೋಟೆಲ್ ಕೆಲಸಗಾರರಿಗೆ ಬುದ್ಧಿ ಕಲಿಸಿದರಾಯಿತು'' ಎಂದಳು.

ಡ್ರೈವರ್ ಆಗಿರುವ ಶ್ರೀರಂಗನಿಗೆ ಪರಮಾನಂದವಾಗಿದೆ. ತನ್ನ ಮೆಚ್ಚಿನ ನಟಿಯನ್ನು ಪ್ರತಿದಿವಸ ಆಗಾಗ ಹತ್ತಿರದಿಂದ ನೋಡುವಂತ ಅವಕಾಶ ದೊರೆತಿದೆ. ಅವನು ತುಂಬಾ ಸಿನ್ಸಿಯರ್ ಆಗಿ ಅವಳ ಕಾರಿನ ಡ್ರೈವರ್ ಮತ್ತು ಬಾಡಿಗಾರ್ಡ್ ಆಗಿ ಕೆಲಸ ಮಾಡುತ್ತಿದ್ದಾನೆ.

ದಿನಗಳು ಉರುಳುತ್ತಿವೆ.

ಶ್ರೀರಂಗ ಎಲ್ಲಾ ಗಮನಿಸುತ್ತಿದ್ದಾನೆ. ಲಕ್ಷಲಕ್ಷ ಪ್ರೇಕ್ಷಕರ ಮೆಚ್ಚಿನ ನಟಿ ಆಗಿರುವ ಈಕೆಗೆ ಸುಖ-ನೆಮ್ಮದಿ ಇಲ್ಲಘಿ.

ಮುಖ್ಯವಾಗಿ ಫ್ರೀಡಮ್ ಇಲ್ಲಘಿ.

ಅವಳನ್ನು ತವರಿಗೆ ಹೇಗೆ ಬೇಕೋ ಹಾಗೆ ಬಳಸಿಕೊಳ್ಳುತ್ತಿದ್ದಾನೆ. ಅವಳ ಸಂಪಾದನೆ ಮೇಲೆ ಅವಳಿಗೆ ಯಾವ ಅಧಿಕಾರ ಇಲ್ಲಘಿ. ಈ ನಟಿಯ ಬದುಕಿನ ಹಿನ್ನೆಲೆಯಲ್ಲಿ ಏನೋ ನಿಗೂಢತೆ ಅಡಗಿದೆ.

ಶ್ರೀರಂಗ ಬಂಗಲೆಯ ಔಟ್‌ಹೌಸ್‌ನಲ್ಲಿ ಮಲಗಿದ್ದಾನೆ. ಡ್ರೈವರ್ ಕೆಲಸಕ್ಕೆ ಸೇರಿದ ಮೇಲೆ ಅವನ ವಾಸ್ತವ್ಯ ಈ ಬಂಗಲೆಯಲ್ಲಿ ಆಗಿದೆ.

ರಾತ್ರಿ ಹತ್ತೂವರೆ.

ಫೋನ್ ಕಾಲ್ ಬಂದಿತು.

ಪದ್ಮಿನಿ ಫೋನ್ ಮಾಡಿದ್ದಾಳೆ.

ಸಾಮಾನ್ಯವಾಗಿ ರಾತ್ರಿ ವೇಳೆ ಫೋನ್ ಮಾಡುತ್ತಿರಲಿಲ್ಲಘಿ. ಈಗ ಮಾಡಿದ್ದಾಳೆ ಅಂದರೆ ಬೇರೆ ಏನೋ ಬಲವಾದ ಕಾರಣ ಇದೆ.

ಆ ಕಾರಣ ಏನು?

''ಹಲೋ... ಹೇಳಿ ಮೇಡಂ.''

ಅಳುವಿನ ಧ್ವನಿ ಕೇಳಿಸಿತು.

ಪದ್ಮಿನಿ ಮೆಲು ಧ್ವನಿಯಲ್ಲಿ ಅಳುತ್ತಿದ್ದಾಳೆ. ಇವನು ಗಾಬರಿಯಿಂದ ''ಮೇಡಂ... ಯಾಕೆ... ಯಾಕೆ... ಏನಾಯ್ತು'' ಎಂದು ಕೇಳಿದನು.

''ನನ್ನನ್ನು ಕಾಪಾಡುತ್ತೀಯ ರಂಗ'' ಎಂದು ಆರ್ತಳಾಗಿ ಕೇಳಿದಳು.

''ಹೆದರಬೇಡಿ ಮೇಡಂ. ನಿಮ್ಮನ್ನು ನೆರಳಿನ ರೀತಿ ಹಿಂಬಾಲಿಸಿ ಕಾಪಾಡ್ತೀನಿ.''

''ನನಗ್ಯಾಕೋ ನಾನು ಬದುಕ್ತೀನಿ... ಹೆಚ್ಚು ದಿವಸ ಬದುಕ್ತೀನಿ ಅನ್ನೋ ನಂಬಿಕೆ ನನಗಿಲ್ಲಘಿ.''

ಶ್ರೀರಂಗ ಗಾಬರಿಯಿಂದ ''ಯಾಕೆ ಹೀಗೆಲ್ಲಾ ಮಾತಾಡ್ತಾ ಇದ್ದೀರ. ನಿಮಗ್ಯಾಕೆ ಸಾವಿನ ಭಯ ಬಂದಿದೆ ಅಂತ ಹೇಳಿ.''

ಅವಳು ಮತ್ತಷ್ಟು ಭಾವುಕಳಾಗಿ ''ನಾನು ಪಂಜರದ ಪಕ್ಷಿಘಿ. ನನ್ನನ್ನು ಭಾವ ಅಂದರೆ ಡೈರೆಕ್ಟರ್ ಆಗಿರೋ ತಂಗವೇಲನ್ ನನ್ನನ್ನು ತನ್ನ ಆಕ್ಟೋಪಸ್ ಹಿಡಿತದಲ್ಲಿ ಇಟ್ಟುಕೊಂಡಿದ್ದಾನೆ. ನಾನು ಕೆಲವು ಸನ್ನಿವೇಶಗಳಲ್ಲಿ ಅಸಹ್ಯಕರವಾದ ವ್ಯವಹಾರದಲ್ಲಿ ಪಾಲ್ಗೊಳ್ಳುತ್ತಿರೋದು ಭಾವನಿಂದ ಮತ್ತು ನನ್ನ ಅಕ್ಕ ಮಧುರವತಿಯ ತಮ್ಮನಿಂದ ಇನ್ನು ನನ್ನ ಸ್ವಂತ ಅಕ್ಕನಿಗೆ ಆಂತರ್ಯದಲ್ಲಿ ನನ್ನ ಮೇಲೆ ದ್ವೇಷ, ಕೋಪ ಇದೆ. ಅಸೂಯೆ ಅವಳ ಅಂತರಾಳದಲ್ಲಿ ಹೆಪ್ಪುಗಟ್ಟಿದೆ.''

ಶ್ರೀರಂಗ ಉದ್ವೇಗದಿಂದ ''ಅಂದರೆ ನಿಮ್ಮ ಸುತ್ತಲು ಶತ್ರುಗಳು ಮೃತ್ಯು ಪಂಜರ ನಿರ್ಮಿಸಿದ್ದಾರೆ ಅಂತೀರ?''

''ಹೌದು... ಹೌದು ಶ್ರೀರಂಗ.''

''ಈ ರಾಜ್ಯದಲ್ಲಿ ಮಾತ್ರವಲ್ಲಘಿ. ಬೇರೆ ಬೇರೆ ರಾಜ್ಯಗಳಲ್ಲಿ ಸಹ ಲಕ್ಷಾಂತರ ಮಂದಿ ಅಭಿಮಾನಿಗಳಿದ್ದಾರೆ. ನೀವು ಆ ನರಕದಲ್ಲಿ ಯಾಕಿರಬೇಕು? ಎಲ್ಲಾ ಬಂಧನ ಕಿತ್ತೆಸೆದು ಹೊರಗೆ ಬನ್ನಿಘಿ. ಆಮೇಲೆ ನೀವು ನಿರಾತಂಕ ಮತ್ತು ನೆಮ್ಮದಿಯಿಂದ ಇರಬಹುದು.''

ಅವಳು ನಿಟ್ಟುಸಿರು ಬಿಡುತ್ತಾ ''ಅದು ಸಾಧ್ಯವಿಲ್ಲ ಶ್ರೀರಂಗ'' ಎಂದಳು.

''ಅರೆ.... ಯಾಕೆ ಮೇಡಂ.

''ನನ್ನ ಭಾವ ಆಗಿರೋ ಆ ರಾಕ್ಷಸ ಸನ್ನಿವೇಶ ಸೃಷ್ಟಿ ಮಾಡಿ ಶಾಶ್ವತವಾಗಿ ಜೈಲು ಸೇರುವಂತೆ ಸಾಕ್ಷಿಘಿ, ಆಧಾರ ಸೃಷ್ಟಿ ಮಾಡಿದ್ದಾನೆ.''

''ಅಂದರೆ... ಅಂದರೆ...''

''ಶ್ರೀಮಂತ ಉದ್ಯಮಿಯ ಹತ್ತಿರ ನನ್ನನ್ನು ವೇಶ್ಯೆಯನ್ನಾಗಿ ಕಳಿಸಿದ್ದಘಿ. ತಂತ್ರಗಾರಿಕೆಯಿಂದ ಕೊಲೆ ಮಾಡಿಸಿ ವೀಡಿಯೋ ಕವರೇಜ್ ಮಾಡಿದ್ದಾನೆ. ಆಗ ಅಲ್ಲಿ ನಾನೊಬ್ಬಳೇ ಡೆಡ್‌ಬಾಡಿ ಹತ್ತಿರ ಇದ್ದೆಘಿ.'

''ಓ... ಅರ್ಥವಾಯಿತು ಬಿಡಿ.''

''ಹಾಗಾಗಿ ಈ ರಾಕ್ಷಸರ ನರಕದಲ್ಲಿ ಯಾವ ಸುಖ ಅನುಭವಿಸದೆ ನರಳುತ್ತಿದ್ದೇನೆ. ಜಲಿಗೆ ಕಳಿಸುತ್ತೇನೆ ಅಂತ ಭಾವ ಬ್ಲಾಕ್‌ಮೇಲ್ ಮಾಡಿ ಹೆದರಿಸುತ್ತಿದ್ದಾನೆ. ಹಾಗಾಗಿ ಆಸ್ತಿಯೆಲ್ಲಾ ತನ್ನ ಹೆಂಡತಿ ಮತ್ತು ತನ್ನ ಹೆಸರಿಗೆ ನನ್ನಿಂದ ಬರೆಸಿಕೊಂಡಿದ್ದಾನೆ.''

''ನಿಜವಾಗಿ ಇದು ದುರಂತ.''

''ಶ್ರೀರಂಗ... ನನ್ನ ಸಾವನ್ನು ಕೆಲವರು ಬಯಸುತ್ತಿದ್ದಾರೆ. ನನಿಂದ ಬಲವಂತವಾಗಿ ಅಸಹ್ಯಕರ ಕೆಲಸಗಳನ್ನು ಮಾಡಿಸುತ್ತಿದ್ದಾನೆ. ನನ್ನ ಸಾವಿನಿಂದ ಕೆಲವರಿಗೆ ಲಾಭ ಇದೆ. ಹೇಳು ನಾನ್ಯಾಕೆ ಬದುಕಿರಲಿ?''

ಅವನು ಭಾವುಕನಾಗಿ ''ಸಾವಿನ ಬಗ್ಗೆ ಮಾತಾಡಿ ನನಗೆ ಭಯ, ಆತಂಕ ಉಂಟು ಮಾಡಬೇಡಿ. ನಿಮ್ಮನ್ನು ಕಾಪಾಡುವುದರ ಜೊತೆಗೆ ಆ ನರಕದಿಂದ ಬಿಡುಗಡೆ ಮಾಡಿಸುತ್ತೀನಿ. ನೀವು ಧೈರ್ಯವಾಗಿರಿ.''

''ಹೇಗೆ... ಹೇಗೆ ಸಾಧ್ಯಘಿ?''

''ನಿಮ್ಮನ್ನು ಬ್ಲಾಕ್‌ಮೇಲ್ ಮಾಡಿ ಹೆದರಿಸುತ್ತಿರುವ ರಹಸ್ಯ ದಾಖಲೆಗಳನ್ನು ನಿನ್ನ ಭಾವನಿಂದ ವಶಪಡಿಸಿಕೊಳ್ತೀನಿ.''

''ಅದು ಸಾಧ್ಯವಿಲ್ಲಘಿ. ಆ ತಂಗವೇಲನ್ ಮಹಾ ಕ್ರಿಮಿನಲ್. ತುಂಬಾ ಬುದ್ಧಿವಂತ. ಅವನು ಆ ದಾಖಲೆಗಳನ್ನು ರಹಸ್ಯ ಜಾಗದಲ್ಲಿ ಇಟ್ಟಿರುತ್ತಾನೆ. ಅದು ಸುಲಭವಾಗಿ ಸಿಗೋಲ್ಲಘಿ. ನೀನು ಇಂತಹ ಸಾಹಸ ಮಾಡುತ್ತಿದ್ದೀಯ ಅಂತ ಗೊತ್ತಾದರೆ ನಿನ್ನನ್ನು ಉಳಿಸೋಲ್ಲಘಿ.''

ಶ್ರೀರಂಗ ನಗಾಡಿದನು.

''ಆ ಕ್ರಿಮಿನಲ್ ಡೈರೆಕ್ಟರ್‌ನ ಯಾವ ರೀತಿಯಲ್ಲಿ ಆಟ ಆಡಿಸಿ, ನಿಮ್ಮ ಸ್ವಾತಂತ್ರ್ಯಕ್ಕೆ ಅಗತ್ಯವಾಗಿರೋ ಆ ಸಾಕ್ಷಿಘಿ, ಆಧಾರಗಳನ್ನು ತಂದು ಕೊಡುತ್ತೇನೆ.''

ಅವಳು ಪುಳುಕಗೊಂಡಳು.

''ಬಟ್... ಬೀ ಕೇರ್‌ಫುಲ್.''

●●●

ಟಬ್ ಬಾತ್ ಮಾಡುತ್ತಿದ್ದಾಳೆ. ಟಬ್‌ನ ತುಂಬಾ ಸೋಪಿನ ನೊರೆ ತುಂಬಿದೆ. ವಳು ತೊಂಭತ್ತು ಭಾಗ ಬೆತ್ತಲಾಗಿ ಸೋಪಿನ ನೊರೆಯಲ್ಲಿ ಮುಳುಗಿದ್ದಾಳೆ. ಆಗ ಫೋನ್ ಕಾಲ್ ಬಂದಿತು.

ಅದು ಅನ್‌ನೋನ್ ನಂಬರ್.

ಅಟೆಂಡ್ ಮಾಡಿ ಮಾತಾಡಿದಳು.

ಕರ್ಕಶ ಧ್ವನಿ ಕೇಳಿಸಿತು.

''ಪದ್ಮಿನಿ... ನಾನೊಬ್ಬ ನಿನ್ನ ಅಭಿಮಾನಿ ಆಗಿದ್ದೆಘಿ. ಎಲ್ಲರ ಎದುರಿಗೆ ನನ್ನ ಕೆನ್ನೆಗೆ ಹೊಡೆದು ಅವಮಾನ ಮಾಡಿ ಮುಖದ ಮೇಲೆ ಕ್ಯಾಕರಿಸಿ ಉಗಿದುಬಿಟ್ಟೆಘಿ. ನನ್ನ ಗೆಳೆಯರೆಲ್ಲಾ ಗೇಲಿ ಮಾಡುತ್ತಿದ್ದಾರೆ. ನಾನು ಸೇಡು ತೀರಿಸಿಕೊಳ್ಳುತ್ತೀನಿ. ಇದು ಸತ್ಯಘಿ.

ಅವಳು ಗಾಬರಿಯಿಂದ ''ಓ... ನನ್ನನ್ನು ಕೊಲೆ ಮಾಡ್ತೀಯ? ನಿನ್ನಿಂದ ಸಾಧ್ಯವೆ?''

''ನನಗೆ ಅಸಾಧ್ಯ ಎಂಬುದಿಲ್ಲಘಿ. ಕೊಲೆ ಮಾಡೋಲ್ಲಘಿ. ಅದಕ್ಕಿಂತ ಭಯಂಕರ ರೀತಿಯಲ್ಲಿ ಸೇಡು ತೀರಿಸಿಕೊಳ್ತೀನಿ. ಬದುಕಿರೋ ತನಕ ನೀನು ನರಳುವ ಹಾಗೆ ಮಾಡ್ತೀನಿ.''

''ಅಂದರೆ... ಅಂದರೆ...''

''ನಿನ್ನ ಸೌಂದರ್ಯ ಹಾಳಾಗುತ್ತೆಘಿ.''

ಅವಳು ಬೆಚ್ಚಿಬಿದ್ದಳು.

ಅವನು ಕೋಪದಿಂದ ''ನಿನ್ನ ಮುಖ, ದೇಹದ ಕೆಲವು ಭಾಗ ಸುಟ್ಟುಕರಕಲಾಗುತ್ತೆಘಿ. ಇದು ಸತ್ಯಘಿ.''

ಅವಳು ನಡುಗುತ್ತಿದ್ದಾಳೆ.

ಇಡೀ ಶರೀರ ಬೆವರುತ್ತಿದೆ.

●●●

ಸುದ್ದಿ ಮಾಧ್ಯಮಗಳಲ್ಲಿ ಈ ಸುದ್ದಿ ಅಬ್ಬರದ ಪ್ರಚಾರ ಪಡೆಯಿತು. ಟಿ.ವಿ. ಚಾನಲ್‌ಗಳಲ್ಲಿ ಈ ಸುದ್ದಿಯನ್ನು ರಂಗು ಮತ್ತು ರೋಚಕತೆ ಬೆರೆಸಿ ಅಬ್ಬರದ ಪ್ರಚಾರ ಮಾಡುತ್ತಿದ್ದಾರೆ.

ಪ್ರಖ್ಯಾತ ನಟಿ ಪದ್ಮಿನಿಗೆ ಕಂಕಣ ಭಾಗ್ಯ ಕೂಡಿ ಬಂದಿದೆ. ಅವಳ ಭಾವಿ ಪತಿ ಯಾರು? ಡೈರೆಕ್ಟರ್, ಪ್ರೊಡ್ಯೂಸರ್ ಆಗಿರುವ ಅವಳ ಭಾವ ತಂಗವೇಲನ್.

ಅವಳ ಹೇಳಿಕೆ ನೀಡಿದ್ದಾಳೆ.

''ನಾನು ಸಿನಿಮಾರಂಗದಲ್ಲಿ ಎಂತಹ ಉತ್ತುಂಗದ ಮಟ್ಟ ಏರುತ್ತಿರಲು ನನ್ನ ಭಾವ ಕಾರಣ. ಹಾಗಾಗಿ ನಾನು ಅವರನ್ನು ಇಷ್ಟಪಟ್ಟು ಮದುವೆ ಆಗುತ್ತಿದ್ದೇನೆ.''

☞ 10

# ಬಿಜೆಪಿ ಮುಖಂಡನ ಕೊಂದವರಿಗೆ ಜೀವಾವಧಿ ಶಿಕ್ಷೆ


ಹತ್ಯೆಯಾದ ಬಾಲಚಂದ್ರ

**ಬಿಜೆಪಿ ಪಕ್ಷದಲ್ಲಿ ಕಾರ್ಯಕರ್ತನಾಗಿ ಬಳಿಕ ಹಂತ ಹಂತವಾಗಿ ಪಕ್ಷ ಸಂಘಟನೆ ಮಾಡುತ್ತಾ ಕೊಡಗು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಸಂಪಾಜೆಯ ಬಾಲಚಂದ್ರ ಕಳಗಿಯನ್ನು ಐದು ವರ್ಷಗಳ ಹಿಂದೆ ಥೇಟ್ ಸಿನಿಮಾದಲ್ಲಿ ಬರುವ ದೃಶ್ಯದಂತೆ ಹತ್ಯೆಗೈಯ್ಯಲಾಗಿತ್ತು. ಪ್ರಕರಣದ ಹಂತಕರ ಪೈಕಿ ಇಬ್ಬರಿಗೆ ಇದೀಗ ಕೊಡಗು ಜಿಲ್ಲಾ ಒಂದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಂಡ ಸಹಿತ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.**


ಜೀವಾವಧಿ ಶಿಕ್ಷೆಗೊಳಗಾದ ಹಂತಕರು

**ಕೊಡಗು**

✍ ಬಿ.ಎಂ. ಲವಕುಮಾರ್

ಐದು ವರ್ಷದ ಬಳಿಕ ಮೃತ ಬಾಲಚಂದ್ರ ಕಳಗಿ ಕುಟುಂಬಕ್ಕೆ ನ್ಯಾಯ ಸಿಕ್ಕಿದಂತಾಗಿದೆ. ಆದರೆ ಒಬ್ಬ ನಾಯಕನಾಗಿ ಬೆಳೆಯಬೇಕಾಗಿದ್ದ ಕಳಗಿಯ ಕುಟುಂಬ ಇವತ್ತಿಗೂ ನೆನಪಿಸಿಕೊಂಡು ಕಣ್ಣೀರಿಡುತ್ತಿದೆ. ಸದ್ಯ ಈ ಪ್ರಕರಣದಲ್ಲಿ ಹತ್ಯೆಗೈದ ಆರೋಪ ಸಾಕ್ಷ್ಯಾಧಾರಗಳಿಂತ ಸಾಬೀತಾದ ಹಿನ್ನಲೆಯಲ್ಲಿ ಆರೋಪಿಗಳಾದ ಕಲ್ಲುಗುಂಡಿ ನಿವಾಸಿ ಹರಿಪ್ರಸಾದ್ ಹಾಗೂ ಲಾರಿ ಚಾಲಕ ಮಡಿಕೇರಿಯ ಜಯನ್‌ಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ದಂಡವನ್ನು ವಿಧಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವಾದವಿವಾದ ನಡೆದಿತ್ತು. ಇದನ್ನು ಆಲಿಸಿದ ನ್ಯಾಯಾಲಯ ಅಕ್ಟೋಬರ್ 16ರಂದು ಇಬ್ಬರನ್ನು ದೋಷಿಗಳೆಂದು ತೀರ್ಪು ನೀಡಿತ್ತಾದರೂ ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿರಲಿಲ್ಲ. ನಂತರ ಅ. 19 ಶನಿವಾರ ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿದೆ. 10 ಸಾವಿರ ರೂ. ದಂಡದ ಮೊತ್ತವನ್ನು ಮೃತ ಬಾಲಚಂದ್ರ ಕಳಗಿ ಅವರ ಪತ್ನಿಗೆ ನೀಡುವಂತೆಯೂ ಆದೇಶಿಸಿದೆ. ಪ್ರಾಸಿಕ್ಯೂಷನ್ ಪರವಾಗಿ ಸರ್ಕಾರಿ ಅಭಿಯೋಜಕ ದೇವೇಂದ್ರಪ್ಪವಾದ ಮಂಡಿಸಿದ್ದರು.

ಇಷ್ಟಕ್ಕೂ ಏನಿದು ಘಟನೆ ಎಂಬುದರ ಬಗ್ಗೆ ತಿಳಿಯಬೇಕಾದರೆ ಐದು ವರ್ಷಗಳ ಹಿಂದಕ್ಕೆ ಹೋಗಬೇಕಾಗುತ್ತದೆ. ಅದು 2019ರ ಮಾರ್ಚ್ 19. ಮಡಿಕೇರಿ ಬಳಿಯ ತಾಳತ್ ಮನೆ ಎಂಬಲ್ಲಿ ನಡೆದ ಅಪಘಾತದಲ್ಲಿ ಕೊಡಗು ಜಿಲ್ಲಾ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಸಂಪಾಜೆಯ ಬಾಲಚಂದ್ರ ಕಳಗಿ ಸಾವನ್ನಪ್ಪಿದ್ದರು. ಮೇಲ್ನೋಟಕ್ಕೆ ಇದು ಅಪಘಾತ ಎಂಬಂತೆ ಬಿಂಬಿತವಾಗಿತ್ತಾದರೂ ಘಟನೆಯ ಸುತ್ತ ಎದ್ದಿದ್ದ ಅನುಮಾನದ ಹುತ್ತ ಕೊಲೆ ಎಂಬುದನ್ನು ಸಾರಿ ಹೇಳಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ತೀವ್ರ ತನಿಖೆ ನಡೆಸಿದಾಗ ಅದು ಅಪಘಾತವಲ್ಲ ಕೊಲೆ ಎಂಬುದು ಬೆಳಕಿಗೆ ಬಂದಿತ್ತು.




ನಲುವತ್ತೆರಡು ವರ್ಷ ಪ್ರಾಯದ ಬಾಲಚಂದ್ರ ಕಳಗಿ ಅವರು ಬಿಜೆಪಿಯ ಮುಖಂಡ ಅಷ್ಟೇ ಅಲ್ಲ ಕೊಡಗು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯೂ ಕಾರ್ಯನಿರ್ವಹಿಸುತ್ತಿದ್ದರು. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಡಿಭಾಗದಲ್ಲಿ ಬಿಜೆಪಿ ಕಾರ್ಯಕರ್ತನಾಗಿ ಹಲವು ಹುದ್ದೆಗಳನ್ನು ನಿರ್ವಹಿಸುತ್ತಾ ಬಿಜೆಪಿಯಲ್ಲಿ ಪ್ರಭಾವಿ ಮುಖಂಡರಾಗಿ ಸೇವೆ ಸಲ್ಲಿಸುತ್ತಾ ಹಂತಹಂತವಾಗಿ ಮೇಲೇರುತ್ತಾ ಬಂದಿದ್ದರು.

ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಸಂಪಾಜೆ ಗ್ರಾ.ಪಂ. ಅಧ್ಯಕ್ಷರಾಗುವ ಮೂಲಕ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಪಂಚಾಯಿತಿ ಪ್ರಶಸ್ತಿಯನ್ನು ಪಡೆದಿದ್ದರು. ಪಯಸ್ವಿನಿ ಸಹಕಾರ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇಂತಹ ವ್ಯಕ್ತಿ ಮಡಿಕೇರಿಯಲ್ಲಿ ನಡೆದ ಬಿಜೆಪಿ ಸಭೆ ಮುಗಿಸಿಕೊಂಡು ತಮ್ಮ ಮಾರುತಿ ವ್ಯಾನ್(ಕೆಎ.12-ಎನ್-4085) ನಲ್ಲಿ



ಮೂರ್ನಾಡು ನಿಂದ ತಾಳತ್ತಮನೆ ಬೈಪಾಸ್ ರಸ್ತೆ ಮೂಲಕ ಸಂಪಾಜೆಗೆ ತೆರಳುತ್ತಿದ್ದಾಗ ತಾಳತ್ ಮನೆ ಬಳಿ ಎದುರಿನಿಂದ ಬಂದ ಲಾರಿ (ಕೆಎ-12ಎ-6253) ಡಿಕ್ಕಿ ಹೊಡೆದಿತ್ತು. ತಲೆಯ ಭಾಗಕ್ಕೆ ತೀವ್ರವಾದ ಪೆಟ್ಟು ಬಿದ್ದಿದ್ದರಿಂದ ಬಾಲಚಂದ್ರ ಕಳಗಿ ಅವರನ್ನು ಮಡಿಕೇರಿ ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ಮಾಡಲಾಯಿತಾದರೂ ಮಾರ್ಗಮಧ್ಯೆ ಸಾವನ್ನಪ್ಪಿದ್ದರು. ಘಟನೆ ಬಳಿಕ ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಿದ್ದನು.

ಅವತ್ತಿನ ಮಟ್ಟಿಗೆ ಇದೊಂದು ಆಕಸ್ಮಿಕ ಅಪಘಾತ ಎಂದೇ ಅವರ ಕುಟುಂಬ ಸೇರಿದಂತೆ ಜನ ನಂಬಿದ್ದರು. ಆದರೆ ಘಟನೆಯ ಬಳಿಕ ಘಟನೆಯ ಸುತ್ತ ಸಂಶಯಗಳು ಬರಲಾರಂಭಿಸಿದ್ದವು. ಏಕೆಂದರೆ ಬಾಲಚಂದ್ರ ಕಳಗಿಯ ವಾಹನವನ್ನು ಸ್ವಿಫ್ಟ್ ಕಾರು ಹಿಂಬಾಲಿಸಿದ್ದ ವಿಚಾರವೂ ಬೆಳಕಿಗೆ ಬಂದಿತ್ತು. ಜತೆಗೆ ವ್ಯಾನ್ಗೆ ಡಿಕ್ಕಿ ಹೊಡೆದ ಲಾರಿ ಕೂಡ ಮಡಿಕೇರಿಯಿಂದ ಮದೆನಾಡು ಕಡೆಗೆ ಸಂಶಯಾಸ್ಪದವಾಗಿ ಚಲಿಸಿದ್ದು, ಅಲ್ಲಿ ಲಾರಿಯನ್ನು ಚಾಲಕ ತೊಳೆದಿದ್ದು, ಅದಾದ ಬಳಿಕ ಸುಖಾಸುಮ್ಮನೆ ಲಾರಿಯನ್ನು ಅತ್ತಿಂದ ಇತ್ತ ಓಡಿಸಿದ್ದು ಆ ನಂತರ ಖಾಲಿ ಲಾರಿಯನ್ನು ತಾಳತ್ ಮನೆ ಮಾರ್ಗವಾಗಿ ತಂದಿದ್ದು ಎಲ್ಲವೂ ಸಂಶಯವನ್ನು ಹುಟ್ಟು ಹಾಕಿತ್ತು.

ಇನ್ನೊಂದೆಡೆ ಬಾಲಚಂದ್ರ ಕಳಗಿ ಅವರ ವ್ಯಾನನ್ನು ಹಿಂಬಾಲಿಸಿಕೊಂಡ ಬಂದ ಸ್ವಿಫ್ಟ್ ಕಾರು ಮತ್ತು ಅದರಲ್ಲಿದ್ದ ದಂಪತಿ ಸಂಪಾಜೆಯುವರು ಎಂಬುದು ಗೊತ್ತಾಗಿತ್ತು, ಹೀಗಾಗಿ ಒಂದಷ್ಟು ಅನುಮಾನಗಳು ಹುಟ್ಟಲಾರಂಭಿಸುತ್ತಿದ್ದಂತೆಯೇ ಮೃತ ಬಾಲಚಂದ್ರ ಕಳಗಿಯ ಚಿಕ್ಕಪ್ಪ ಜಯರಾಮ್ ಕಳಗಿ ಅವರು ಬಾಲಚಂದ್ರಕಳಗಿ ಅವರೊಂದಿಗೆ ಕೆಲವು ವ್ಯಕ್ತಿಗಳು ವ್ಯವಹಾರಿಕವಾಗಿ ದ್ವೇಷ ಸಾಧಿಸುತ್ತಿರುವ ಕುರಿತು ಪೊಲೀಸರಿಗೆ ಮಾಹಿತಿ ನೀಡಿ ತನಿಖೆಗೆ ಒತ್ತಾಯಿಸಿದ್ದರು.

ಈ ನಡುವೆ ಅವತ್ತಿನ ಜಿಲ್ಲಾ ಬಿಜೆಪಿ ಅಧ್ಯಕ್ಷ ಬಿ.ಬಿ. ಭಾರತೀಶ್ ಸೇರಿದಂತೆ ಬಿಜೆಪಿ ಮುಖಂಡರು ಕೂಡ ಪ್ರಕರಣದ ತನಿಖೆ ನಡೆಸುವಂತೆ ಪೊಲೀಸರನ್ನು ಆಗ್ರಹಿಸಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಆಗಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪನ್ನೇಕರ್ ಅವರು ಡಿವೈಎಸ್ಪಿ ಕೆ.ಎಸ್. ಸುಂದರರಾಜ್ ಮಾರ್ಗದರ್ಶನದಲ್ಲಿ ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಸಿದ್ದಯ್ಯ, ಪೊಲೀಸ್ ಉಪ ನಿರೀಕ್ಷಕ ಚೇತನ್, ಪಿಎಸ್ಐ ಶ್ರವಣ್, ಸಿಬ್ಬಂದಿ ದಿನೇಶ್, ಶಿವರಾಜು, ರವಿ, ಅನಿಲ್, ಮಂಜುನಾಥ್, ಸಿಡಿಆರ್ ವಿಭಾಗದ ರಾಜೇಶ್, ಗಿರೀಶ್ ಹಾಗೂ ಚಾಲಕರಾದ ಸುನಿಲ್ ಮತ್ತು ಅರುಣ್ ಅವರನ್ನೊಳಗೊಂಡ ತಂಡವನ್ನು ರಚಿಸಿ ತನಿಖೆಗೆ ಆದೇಶಿಸಿದ್ದರು.

ಕೂಡಲೇ ಕಾರ್ಯಾಚರಣೆಗಿಳಿದ ತನಿಖಾತಂಡ ವ್ಯಾನ್‌ಗೆ ಡಿಕ್ಕಿಪಡಿಸಿದ ಲಾರಿ ಚಾಲಕ ಮಡಿಕೇರಿಯ ನಿವಾಸಿ ಜಯನ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದರು. ಈ ವೇಳೆ ಆತ ಲಾರಿಯ ಬ್ರೇಕ್‌ನಲ್ಲಿ ಸಮಸ್ಯೆಯಿತ್ತು. ಹೀಗಾಗಿ ನಿಯಂತ್ರಣ ತಪ್ಪಿ ಮಾರುತಿ ವ್ಯಾನ್‌ಗೆ ಡಿಕ್ಕಿ ಹೊಡೆದಿದ್ದಾಗಿ ಹೇಳಿದ್ದನು. ಆದರೆ ಪೊಲೀಸರು ಮಾತ್ರ ಅದನ್ನು ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ಆತನ ಮೊಬೈಲ್ ಫೋನ್ ಕಾಲ್ ಲೀಸ್ಟ್ ಪಡೆದ ಪೊಲೀಸರು ತನಿಖೆ ಆರಂಭಿಸಿದ್ದರು. ಅವತ್ತು ಆತನ ಮೊಬೈಲ್‌ಗೆ ಬಂದ ಕಾಲ್‌ಗಳ ನಂಬರ್‌ಗಳ ಮಾಹಿತಿ ಪಡೆದಿದ್ದರು. ಆಗಲೇ ಪ್ರಕರಣಕ್ಕೊಂದು ತಿರುವು ಸಿಕ್ಕಿತ್ತು.

ಮಡಿಕೇರಿ ನಿವಾಸಿಯಾಗಿರುವ ಚಾಲಕ ಜಯನ್ ಲಾರಿ ಹೊಂದಿದ್ದನಾದರೂ ಅದರ ಮೇಲಿದ್ದ ಸಾಲ ತೀರಿಸಲು ಪರದಾಡುತ್ತಿದ್ದನು. ಹೀಗಾಗಿ ಆತ ಬಾಲಚಂದ್ರ ಕಳಗಿ ಅವರ ಮೇಲೆ ಲಾರಿ ಹರಿಸಿ ಹತ್ಯೆ ಮಾಡಲು ಸುಫಾರಿ ಪಡೆದಿರುವ ಸುಳಿವು ಸಿಕ್ಕಿತ್ತು. ಹೀಗಾಗಿ ಲಾರಿ ಚಾಲಕ ಜಯನ್ಗೆ ಬಾಲಚಂದ್ರ ಕಳಗಿ ಅವರನ್ನು ಕೊಲೆ ಮಾಡಲು ಸುಫಾರಿ ಕೊಟ್ಟವರು ಯಾರು ಎಂಬ ಬಗ್ಗೆ ತನಿಖೆ ತೀವ್ರಗೊಳಿಸಿದಾಗ ಎರಡು ಹೆಸರು ಹೊರ ಬಂದಿತ್ತು. ಅವರೇ ಸಂಪಾಜೆ ನಿವಾಸಿಗಳು ಮತ್ತು ಬಾಲಚಂದ್ರ ಕಳಗಿಯ ವಿರೋಧಿಗಳೂ ಆದ ಸಂಪತ್ ಕುಮಾರ್ ಮತ್ತು ಹರಿ ಪ್ರಸಾದ್

ಇಷ್ಟಕ್ಕೂ ಇವರಿಬ್ಬರು ಬಾಲಚಂದ್ರ ಕಳಗಿಯನ್ನು ಹತ್ಯೆ ಮಾಡಲು ಸುಫಾರಿ ಏಕೆ ನೀಡಿದರು? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದಾಗ ಸಂಪಾಜೆಯಲ್ಲಿ ನಡೆಯುತ್ತಿದ್ದ ಅಕ್ರಮ ಮತ್ತು ಅದರ ತಡೆಗೆ ಬಿಜೆಪಿ ಮುಖಂಡ ಬಾಲಚಂದ್ರ ಕಳಗಿ ಮಾಡುತ್ತಿದ್ದ ಹೋರಾಟ ಎಲ್ಲವೂ ಹೊರಕ್ಕೆ ಬಂದಿತ್ತು. ಸಂಪಾಜೆ ವ್ಯಾಪ್ತಿಯಲ್ಲಿ ತನ್ನದೇ ಆದ ಹೋರಾಟ ಮತ್ತು ಕೆಲಸ ಕಾರ್ಯಗಳಿಂದ ಗುರುತಿಸಿಕೊಂಡಿದ್ದ ಬಾಲಚಂದ್ರ ಕಳಗಿ ಅವರು ಅಕ್ರಮ ದಂಧೆಗಳ ವಿರುದ್ಧ ಸದಾ ಧ್ವನಿ ಎತ್ತುತ್ತಿದ್ದರು. ಇದು ಸಂಪತ್ ಕುಮಾರ್ ಮತ್ತು ಹರಿ ಪ್ರಸಾದ್ಗೆ ನುಂಗಲಾರದ ತುತ್ತಾಗಿತ್ತು. ಅವರಿಬ್ಬರು ಇವರ ವಿರೋಧಿಯಾಗಿದ್ದುಕೊಂಡೇ ತಮ್ಮ ಕಾರ್ಯವನ್ನು ಪೂರೈಸಲು ಹರಸಾಹಸ ಪಡುತ್ತಿದ್ದರಾದರೂ ಅದಕ್ಕೆ ಬಾಲಚಂದ್ರ ಕಳಗಿ ತಣ್ಣೀರೆರಚಿದ್ದರು.




ಹೀಗಾಗಿ ಸಂಪತ್‌ಕುಮಾರ್ ಹಾಗೂ ಹರಿ ಪ್ರಸಾದ್ ಘಟನೆಗೂ ಮುನ್ನ ಎರಡು ವರ್ಷಗಳ ಹಿಂದೆ ಸಂಪಾಜೆಯಲ್ಲಿ ರಿಕ್ರಿಯೇಷನ್ ಕ್ಲಬ್ ತೆರೆಯಲು ಪ್ರಯತ್ನಿಸಿದ್ದರು. ಇದಕ್ಕೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದ ಬಾಲಚಂದ್ರ ಕಳಗಿಯವರು

☞ 11

## ತಮ್ಮ ಸ್ನೇಹಿತನನ್ನು ಅತ್ಯಂತ ಕ್ರೂರವಾಗಿ ಕೊಲೆ ಮಾಡಿದ್ದ

# ರೌಡಿಯನ್ನು ಕೊಡಲಿ ಮತ್ತು ತಲವಾರ್‌ಗಳಿಂದ ಕೊಚ್ಚಿ ಕೊಚ್ಚಿ ಬರ್ಬರವಾಗಿ ಕೊಲೆಗೈದು ಪರಾರಿಯಾಗಿದ್ದ 13 ಜನರ ಬಂಧನ


ಬದುಕಿದ್ದಾಗ ಪಾತಕಿ ಅಶ್ರಫ್ ಅಲಿ ನಗಾರ್ಜಿ

**ಇಲ್ಲಿ ಅತ್ಯಂತ ಬರ್ಬರ ರೀತಿಯಲ್ಲಿ ಕೊಲೆಯಾಗಿ ನೆತ್ತರದ ಮಡುವಿನಲ್ಲಿ ಮಕಾಡೆ ಬಿದ್ದವನೇನು ಸಾಮಾನ್ಯನಲ್ಲ. ಕರ್ನಾಟಕ-ಮಹಾರಾಷ್ಟ್ರದ ಪೊಲೀಸರಿಗೆ ತಲೆ ನೋವಾಗಿದ್ದ 20 ವರ್ಷದ ಪರಮ ಪಾತಕಿ ಮುಸ್ಲಿಂ ತರುಣನಾಗಿದ್ದನು. ಇನ್ನೂ ಅಪ್ರಾಪ್ತನಿದ್ದಾಗಲೇ ಈತನ ಮೇಲೆ ಕೊಲೆ, ಕೊಲೆಗೆ ಯತ್ನ, ಜೀವ ಬೆದರಿಕೆ, ಮೊಬೈಲ್, ಮೋಟಾರ್ ಬೈಕ್ ಕಳ್ಳತನದಂತಹ ಅನೇಕ ಗಂಭೀರ ಪ್ರಕರಣಗಳು ದಾಖಲಾಗಿದ್ದವು. ಈತನ ಕ್ರಿಮಿನಲ್ ಚಟುವಟಿಕೆ ಹೆಚ್ಚಾದಾಗ ಕಳೆದೊಂದು ವರ್ಷದಿಂದ ಈತನನ್ನು ಜಿಲ್ಲೆಯಿಂದಲೇ 'ಗಡಿಪಾರು' ಶಿಕ್ಷೆ ವಿಧಿಸಲಾಗಿತ್ತು. ಕಳೆದ ತಿಂಗಳು ಗಡಿಪಾರು ಶಿಕ್ಷೆ ಅನುಭವಿಸಿ ಮರಳಿ ಬಂದು ಮತ್ತೆ ದಾದಾಗಿರಿ ಮುಂದುವರೆಸಿದ್ದನು. ಪಾತಕಿಯ ಬರ್ಬರ ಕೊಲೆಗೆ ಕಾರಣವನ್ನು ಕೆದುಕುತ್ತ ಹೋದ ಪೊಲೀಸರಿಗೆ ದೊರೆತದ್ದು 'ಕೊಲೆಗೆ-ಕೊಲೆ' ಎಂಬ ಪ್ರತೀಕಾರ. ಸುಮಾರು ಎರಡೂವರೆ ವರ್ಷಗಳ ಹಿಂದೆ ಕ್ಷುಲ್ಲಕ ಕಾರಣಕ್ಕಾಗಿ 21 ವರ್ಷದ ಯುವಕನೊಬ್ಬನನ್ನು ತನ್ನಿಬ್ಬರು ಅಪ್ರಾಪ್ತ ಸ್ನೇಹಿತರು ಮತ್ತು ತನ್ನ ಅಣ್ಣ ಹಾಗೂ ಆತನ ಸ್ನೇಹಿತನೊಂದಿಗೆ ಸೇರಿ ಬರ್ಬರವಾಗಿ ಕೊಲೆ ಮಾಡಿದ್ದ ಪಾತಕಿ. ಅಂದು ಸ್ನೇಹಿತನ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ಆತನ 13 ಜನ ಸ್ನೇಹಿತರು ಸೇರಿಕೊಂಡು 'ನಿನ್ನ ಕೊಲೆಗಡುಕರನ್ನು ಕೊಲೆ ಮಾಡುತ್ತೇವೆ' ಎಂದು ಶಪಥ ಮಾಡಿದ್ದರು. ಅದರಂತೆ ಪ್ರತೀಕಾರ ತೀರಿಸಿಕೊಳ್ಳಲು ಪಾತಕಿ ಮುಸ್ಲಿಂ ತರುಣನನ್ನು 13 ಜನ ಸ್ನೇಹಿತರ ತಂಡ ಏಕಾಏಕಿ ನುಗ್ಗಿ ಬಂದು ಭೀಮನಗರದ ಮುನ್ಸಿಪಲ್ ಹೈಸ್ಕೂಲ್ ಸಮೀಪದ ಬಯಲಿನಲ್ಲಿ ದಿ. 02-10-2024ರಂದು ರಾತ್ರಿ 8.30 ಸುಮಾರಿಗೆ ಮಾರಕಾಸ್ತ್ರಗಳಿಂದ ಕೊಚ್ಚಿ... ಕೊಚ್ಚಿ ಕೊಲೆಗೈದು ಪ್ರತೀಕಾರ ತೀರಿಸಿಕೊಂಡು ಪರಾರಿಯಾದರು. ಪ್ರಕರಣದ ಬೆನ್ನುಬಿದ್ದ ದಾಢಸಿ ಸಿಪಿಐ ಬಿ.ಎಸ್. ತಳವಾರ ಮತ್ತು ಪಿಎಸ್‌ಐಗಳಾದ ಕುಮಾರಿ ಉಮಾದೇವಿ, ಶಿವರಾಜ ನಾಯಿಕವಾಡಿ, ರಮೇಶ್ ಪವಾರ್, ಸಿಬ್ಬಂದಿಗಳು 13 ಜನ ಹಂತಕರ ಪಡೆಯನ್ನು ಬಂಧಿಸಿದ ರೋಚಕ ಘಟನೆ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ನಗರದಿಂದ ವರದಿಯಾಗಿದೆ.**

ಬೆಳಗಾವಿ
✍ ಮನ್ನಾಪೂರ

ಸೇಡು ಮತ್ತು ಅವಮಾನಗಳು ಒಮ್ಮೆ ಮನುಷ್ಯರ ತಲೆಯಲ್ಲಿ ಸೇರಿಕೊಂಡು ಗಿರಕಿ ಹೊಡೆದರೆ ಮುಗಿದೇ ಹೋಯಿತು. ಅವುಗಳು ಅದೆಂತಹ ಅನಾಹುತಗಳನ್ನು ಸೃಷ್ಟಿಸುತ್ತವೆ ಎಂದು ಅದ್ಯಾರೂ ಕೂಡಾ ಊಹಿಸಲಾರದಂತಹದ್ದು. ಇದಕ್ಕೆ ಜೀವಂತ ನಿದರ್ಶನವೆಂಬಂತೆ ಇತ್ತೀಚಿಗೆ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ನಗರದ ದರ್ಗಾಗಲ್ಲಿಯ 20 ವರ್ಷದ ಪಾತಕಿ ಅಶ್ರಫ್ ಅಲಿ, ಶೇರ್ ಅಲಿ ನಗಾರ್ಜಿಯ ಬರ್ಬರ ಕೊಲೆ. ನವರಾತ್ರಿಯ ಹೊಸ್ತಿಲಲ್ಲಿ ನಡೆದ ಈ ಕಗ್ಗೊಲೆ ಇಡೀ ನಿಪ್ಪಾಣಿ ನಗರವನ್ನೇ ನಡುಗಿಸಿತ್ತು.

ಪಾತಕಿ ಅಶ್ರಫ್ ಅಲಿ, ಶೇರ್ ಅಲಿ, ನಗಾರ್ಜಿಯ ಕೊಲೆಯ ಕಾರಣಗಳನ್ನು ಕೆದಕುತ್ತ ಹೋದರೆ ಸಿಗುವುದು ಸೇಡು ಮತ್ತು ಪ್ರತೀಕಾರದ ಪ್ರತಿಜ್ಞೆಯ ವಿವರ. ಇದೇ ಪಾತಕಿ ಅಶ್ರಫ್ ಅಲಿ ಆಗಿನ್ನೂ ಈತನಿಗೆ ಮೀಸೆ ಮೂಡಿರಲಿಲ್ಲ. ಕ್ಷುಲ್ಲಕ ಕಾರಣಕ್ಕಾಗಿ ಮಾನವಿ ಗಲ್ಲಿಯ ನಿಷ್ಪಾಪಿ ತರುಣ, ತಂದೆ-ತಾಯಿಗೆ ಒಬ್ಬನೇ ಮಗನಾಗಿದ್ದ ಅಭಿಷೇಕ ಶಿವಾನಂದ ದತ್ತವಾಡೆಯನ್ನು ತನ್ನಿಬ್ಬರು ಅಪ್ರಾಪ್ತ ಸ್ನೇಹಿತರು ಮತ್ತು ತನ್ನ ಖಾಸಾ ಅಣ್ಣ ಸೈಫ್ ಅಲಿ ಹಾಗೂ ಆತನ ಸ್ನೇಹಿತ ಆಯಾಜ್ ಹಸನ್ ಯಕ್ಸಂಬಿ ಜತೆ ಸೇರಿ ಬರ್ಬರ ರೀತಿಯಲ್ಲಿ ಕೊಲೆ ಮಾಡಿದ್ದ ಪಾತಕಿ. ಆಗಿನ್ನೂ ಅಶ್ರಫ್ ಅಲಿ ಬಾಲಾಪರಾಧಿಯಾಗಿದ್ದನು. ಇದೇ ಇಂದು ಅಶ್ರಫ್ ಅಲಿ ಭೀಕರವಾಗಿ ಕೊಲೆಯಾಗಿದ್ದಾನೆ. ಈತನನ್ನು ಕೊಲೆ ಮಾಡಿದವರ್‍ಯಾರು...?


13 ಜನ ತಂಡದಿಂದ ಬರ್ಬರವಾಗಿ ಕೊಲೆಯಾಗಿರುವ ಅಶ್ರಫ್ ಅಲಿ ಶೇರ್ ಅಲಿ ನಗಾರ್ಜಿ

ಯಾತಕ್ಕಾಗಿ ಕೊಲೆ ನಡೆಯಿತು? ಪಾತಕಿ ಅಶ್ರಫ್ ಅಲಿ ಹಾಗೂ ಅಣ್ಣ ಸೈಫ್ ಅಲಿಯ ಕ್ರಿಮಿನಲ್ ಬ್ಯಾಕ್‌ಗ್ರೌಂಡ್ ಏನು...? ಎನ್ನುವ ಗ್ರೌಂಡ್ ರಿಪೋರ್ಟ್ 'ಪೊಲೀಸ್ ನ್ಯೂಸ್' ವರದಿಯನ್ನು ಓದುಗರಿಗಾಗಿ ಸಿದ್ಧಪಡಿಸಿದೆ

**ಸ್ನೇಹಿತನನ್ನು ಹತ್ಯೆ ಮಾಡಿದ್ದ ಪಾತಕಿ...**

ನಿಪ್ಪಾಣಿಯ ಮಾನವಿ ಗಲ್ಲಿಯಲ್ಲಿ ಅಭಿಷೇಕ ಶಿವಾನಂದ ದತ್ತವಾಡೆ (21 ವ) ತಾಯಿ ಸುನೀತಾಳೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದನು. ತಂದೆ ಶಿವಾನಂದನೊಡನೆ ಈತನ ತಾಯಿ ಜಗಳ ಮಾಡಿಕೊಂಡು ಬಂದು ಬಹಳ ವರ್ಷಗಳಿಂದ ತವರಿನ ಆಶ್ರಯದಲ್ಲಿದ್ದಳು. ಸ್ವಾಭಿಮಾನಿ ಆಗಿದ್ದ ಅಭಿಷೇಕನ ಜತೆಗೆ ಇದೀಗ ಕೊಲೆಯಾದ ಪಾತಕಿ ಅಶ್ರಫ್ ಅಲಿ ನಗಾರ್ಜಿಯ ಗೆಳೆತನವಿತ್ತು. ಇವರಿಬ್ಬರು ಆಗಾಗ ಸೇರುತ್ತಿದ್ದರು. ಇದು ಮೂರು ವರ್ಷಗಳ ಹಿಂದಿನ ಮಾತು. ಅದಾಗಲೇ ಕ್ರಿಮಿನಲ್ ಅಶ್ರಫ್ ಅಲಿ, ಗುಟಕಾ, ಸಾರಾಯಿ, ಗಾಂಜಾ ಸೇವನೆಯಂತಹ ದುಷ್ಟ ಚಟಗಳನ್ನು ಬೆಳೆಸಿಕೊಂಡಿದ್ದನು. ಇದನ್ನರಿತ ಅಭಿಷೇಕ ಶಿವಾನಂದ ದತ್ತವಾಡೆ ಈತನಿಗೆ ಖಡಕ್ ವಾರ್ನಿಂಗ್ ಮಾಡಿದ್ದನು. ಕೆಲ ದಿನಗಳ ನಂತರ ಮಾತಿಗೆ ಮಾತು ಬೆಳೆದು ಅಶ್ರಫ್ ಅಲಿ ಇದ್ದವನು ಅಭಿಷೇಕನ ತಾಯಿ ಮೇಲೆ ಹೊಲಸು ಬೈಗುಳ ಬೈಯ್ದಿದ್ದಾನೆ. ಇದರಿಂದ ಆಕ್ರೋಶಗೊಂಡ ಅಶ್ರಫ್ ಅಲಿಯನ್ನು ಅಭಿಷೇಕ ಥಳಿಸಿದ್ದಾನೆ. ಕೇಳಲು ಬಂದ ಅಶ್ರಫ್‌ನ ಅಣ್ಣ ಸೈಫ್‌ನನ್ನು ಥಳಿಸಿದ್ದಾನೆ.

ಈ ಘಟನೆಯಿಂದ ಅವಮಾನಿತನಾದ ಆಗಿನ್ನು ಮೀಸೆ ಮೂಡದ ಅಶ್ರಫ್ ಅಲಿ, ಅಭಿಷೇಕನ ಕೊಲೆ ಮಾಡಲು ನಿರ್ಧರಿಸಿ ತನ್ನಿಬ್ಬರು ಮೀಸೆ ಮೂಡದ ಸ್ನೇಹಿತರಾದ ಮಹ್ಮದ್ ಸಾದ್ ಜಪರುಲ್ಲಾ ಬಾಗೇವಾಡಿ, ಪ್ರವೀಣ ಅಶೋಕ ಚೌಗುಲೆ ಅವರನ್ನು ಒಪ್ಪಿಸಿದನು. ನಂತರ ತನ್ನ ಅಣ್ಣ ಸೈಫ್ ಅಲಿ ಹಾಗೂ ಆತನ ಸ್ನೇಹಿತನಾಗಿದ್ದ ಜತ್ರಾಟದ ಆಯಾಜ್ ಹಸನ್ ಯಕ್ಸಂಬಿ ಸೇರಿದಂತೆ ಐದು ಜನರು ಸ್ಕೆಚ್ ಹಾಕಿ ದಿನಾಂಕ 04-04-2022 ರಂದು ಬೆಳಗಿನ ಜಾವ 1.30 ಗಂಟೆಗೆ ಅಭಿಷೇಕ ದತ್ತವಾಡೆ ತನ್ನ ಮನೆಯ ಮೆಟ್ಟಿಲು ಏರುವ ಸಂದರ್ಭದಲ್ಲಿ ಹರಿತವಾದ ಚಾಕು, ಕಬ್ಬಿಣದ ರಾಡ್ ಬಳಸಿ ಎದೆ, ಬೆನ್ನು, ಕುತ್ತಿಗೆಗೆ ಭಾರಿ ಗಾಯಗೊಳಿಸಿ ಭೀಕರವಾಗಿ ಕೊಲೆಗೈದು ಪರಾರಿ ಆಗಿದ್ದರು. ಅಭಿಷೇಕ ದತ್ತವಾಡೆ ಕಗ್ಗೊಲೆ ನಿಪ್ಪಾಣಿ ನಗರವನ್ನು ಬೆಚ್ಚಿ ಬಿಳಿಸಿತ್ತು. ಅಂದಿನ ಎಸ್ಪಿ ಲಕ್ಷ್ಮಣ ನಿಂಬರಗಿ, ಹೆಚ್ಚುವರಿ ಎಸ್ಪಿ ಮಹಾನಿಂಗ ನಂದಗಾವಿ, ಡಿವೈಎಸ್ಪಿ ಬಸವರಾಜ ಯಲಿಗಾರ ನಿರ್ದೇಶನದಲ್ಲಿ ಸಿಪಿಐ ಸಂಗಮೇಶ ಶಿವಯೋಗಿ, ಪಿಎಸ್‌ಐ ಕೃಷ್ಣವೇಣಿ ಗುರ್ಲಹೊಸುರ ಮತ್ತು ಸಿಬ್ಬಂದಿಗಳು ಸೇರಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದರು. ಅಶ್ರಫ್ ಅಲಿ, ಮಹ್ಮದ್‌ಸಾದ್, ಪ್ರವೀಣರನ್ನು ರಿಮ್ಯಾಂಡ್ ಹೋಂ ಸೇರಿಸಲಾಗಿತ್ತು. (ಇದೀಗ ಅಭಿಷೇಕ ದತ್ತವಾಡೆ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ) ಇದಿಷ್ಟು ಪಾತಕಿ ಅಶ್ರಫ್ ಅಲಿಯ ಹಳೇಯ ಕಥೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಅಶ್ರಫ್ ಅಲಿಯ ಅಣ್ಣ ಸೈಫ್ ಅಲಿ


**ಶವದ ಮೇಲೆ ಶಪಥ ಮಾಡಿದ್ದ ಸ್ನೇಹಿತರು...**


ಸ್ವಾಭಿಮಾನಿ ತರುಣನಾಗಿದ್ದ ಅಭಿಷೇಕ ಶಿವಾನಂದ ದತ್ತವಾಡೆಯ ಕೊಲೆ ಪ್ರಕರಣ ನಿಪ್ಪಾಣಿ ಪರಿಸರದಲ್ಲಿ ಮಾರ್ದನಿಸಿತ್ತು. ಅಭಿಷೇಕನ ಹತ್ತಾರು ಗೆಳೆಯರು ಇಡೀ ದಿನ ಬಿಕ್ಕಿ... ಬಿಕ್ಕಿ ಅತ್ತಿದ್ದರು. ಅಭಿಷೇಕನ ಅಂತ್ಯ ಸಂಸ್ಕಾರದಂದು ಆತನ ಸ್ನೇಹಿತರಾಗಿದ್ದ 1) ಅತೀಶ ಅಶೋಕ ಬೇಲೆಕರ (27 ವ), ಪಾವಲೆ ಗಲ್ಲಿ ನಿಪ್ಪಾಣಿ, 2) ಓಂಕಾರ ವಿನೋದ ಕಾಟಕರ (26 ವ), ಆಂದೋಲನ ನಗರ, ನಿಪ್ಪಾಣಿ, 3) ರವಿ ಈರಣ್ಣ ಶಿರಗಾಂವೆ (27 ವ), ಹಣಬರಗಲ್ಲಿ, ನಿಪ್ಪಾಣಿ, 4) ರೋಹಿತ ಪ್ರಶಾಂತ ಪಠಾಡೆ (24 ವ), ಸಾಖರವಾದಿ, ನಿಪ್ಪಾಣಿ, 5) ಅಜೀತ ಅಲಿಯಾಸ್ ಅಜಿಂಕ್ಯ (24 ವ) ಅಪ್ಪಾಸಾಹೇಬ ನಾಯಿಕ ಅಕ್ಕೋಳ ರೋಡ, ನಿಪ್ಪಾಣಿ, 6) ಓಂ ದಿಲೀಪ ಕಂದಲೆ (23 ವ), ಕುಂಬಾರಗಲ್ಲಿ, ನಿಪ್ಪಾಣಿ, 7) ಪಾರಸ ಸಂಜಯ ಶ್ರೀಖಂಡೆ (22 ವ), ಜತ್ರಾಟ ವೇಸ್, ನಿಪ್ಪಾಣಿ 8) ಹೃತೀಕ್ ಸದಾಶಿವ ಪಾವಲೆ (25 ವ), ಮಹಾದೇವಗಲ್ಲಿ, ನಿಪ್ಪಾಣಿ, 9) ಅರಬಾಜ್ ರಾಜ ಮಹ್ಮದ್ ಸೈಯದ್ (24 ವ), ಸಾಖರವಾಡಿ, ನಿಪ್ಪಾಣಿ, 10) ಅನಿಕೇತ ಕೃಷ್ಣಾ ಗೋಡಗೇರಿ (22 ವ), ಸಾಸಣೆಗಲ್ಲಿ, ನಿಪ್ಪಾಣಿ, 11) ಅಮೀತ ಅವಿನಾಶ ಮಾನೆ (24 ವ), ಸಿದ್ಧಾರ್ಥನಗರ, ನಿಪ್ಪಾಣಿ, (12) ಶಾಂತನು ಅಶೋಕ ಚೌಗುಲೆ (21 ವ), ಬುದ್ಧನಗರ, ನಿಪ್ಪಾಣಿ, 13) ಗೋಸಾವಿ (24 ವ) ಆಶ್ರಯನಗರ, ನಿಪ್ಪಾಣಿ ಇವರೆಲ್ಲರೂ ಸೇರಿಕೊಂಡು ಒಂದೆಡೆ ಕುಳಿತು ನಮ್ಮ ಸ್ನೇಹಿತ ಅಭಿಷೇಕನನ್ನು ಕೊಲೆ ಮಾಡಿದವರನ್ನು ನಾವು ಕೊಲೆ ಮಾಡಿ ಆತನ ಕೊಲೆಗೆ ಪ್ರತೀಕಾರವನ್ನು ತೀರಿಸಿಕೊಳ್ಳಬೇಕು ಎಂದು ರವಿ ಈರಣ್ಣ ಶಿರಗಾವೆ ಮತ್ತಿತರರು ಪ್ಲ್ಯಾನ್ ಮಾಡಿದರು. ಸ್ನೇಹಿತ ಅಭಿಷೇಕನ ಶವದ ಮುಂತೆ ನಿಂತು ಆತನ 13 ಜನ ಸ್ನೇಹಿತರು ಕೂಡಿ 'ನಿನ್ನ ಕೊಲೆ ಮಾಡಿದವರನ್ನು ನಾವು ಕೊಲೆ ಮಾಡಿಯೇ ತೀರುತ್ತೇವೆ' ಎಂದು ಬಲವಾದ ಶಪಥ ಮಾಡಿದ್ದರು.


ತಮ್ಮ ಸ್ನೇಹಿತ ಅಭಿಷೇಕನ ಕೊಲೆಗೆ ಪ್ರತೀಕಾರ ತೀರಿಸಿಕೊಂಡ ಆರೋಪಿಗಳಾದ ಅತೀಶ ಅಶೋಕ ಬೇಲೆಕರ, ಓಂಕಾರ ವಿನೋದ ಕಾಟಕರ, ರವಿ ಈರಣ್ಣ ಶಿರಗಾಂವೆ, ರೋಹಿತ ಪ್ರಶಾಂತ ಪಠಾಡೆ, ಅಜಿತ ಅ॥ ಅಂಜಿಕ್ಯ ಅಪ್ಪಾಸಾಹೇಬ ನಾಯಿಕ, ಓಂ ದಿಲೀಪ ಕುಂದಲೆ, ಪಾರಸ ಸಂಜಯ ಶ್ರೀಖಂಡೆ, ಹೃತೀಕ್ ಸದಶಿವ ಪಾವಲೆ, ಅರಬಾಜ ರಾಜ ಮಹ್ಮದ್ ಸಯ್ಯದ್, ಅನಿಕೇತ ಕೃಷ್ಣಾ ಘೋಡಗೇರಿ, ಅಮೀತ ಅವಿನಾಶ ಮಾನೆ, ಶಾಂತನು ಅಶೋಕ ಚೌಗುಲೆ

**ಪಾತಕಿ ಅಶ್ರಫ್ ಅಲಿಯ ಹಿನ್ನೆಲೆ...**

ಎಲ್ಲರಂತೆ ಮೈ ಮುರಿದು ದುಡಿದು ತಿಂದಿದ್ದರೆ ಇಂದು ಪಾತಕಿ ಅಶ್ರಫ್ ಒಳ್ಳೆಯವನಾಗಿ ನಮ್ಮ ನಡುವೆ ಬದುಕಿರುತ್ತಿದ್ದನು. ಈತನ ತಂದೆ ಮಾಜಿ ಹೋಮ್ ಗಾಡ್ ನಾಗಿದ್ದು ತನ್ನ ಮಕ್ಕಳಾದ ಸೈಫ್ ಅಲಿ, ಅಶ್ರಫ್ ಅಲಿಯನ್ನು ಒಳ್ಳೆಯ ದಾರಿಯಲ್ಲಿ ಬೆಳೆಸಲಿಲ್ಲ. ದರ್ಗಾ ಗಲ್ಲಿಯ ನಿವಾಸಿಯಾದ ಈತ ಮಕ್ಕಳ ಬಗ್ಗೆ ದುರ್ಲಕ್ಷ ಮಾಡಿದ್ದನು. ಚಿಕ್ಕಂದಿನಲ್ಲಿಯೇ ಪಾತಕಿ ಅಶ್ರಫ್ ಅಲಿ ಮತ್ತು ಅಣ್ಣ ಸೈಫ್ ಅಲಿ ಎಲ್ಲ ದುಶ್ಚಟಗಳನ್ನು ಮೈಗೂಡಿಸಿಕೊಂಡಿದ್ದರು.


ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ


ಸಿಪಿಐ ಬಿ.ಎಸ್. ತಳವಾರ

ಅದಾಗಲೇ ಅಣ್ಣ-ತಮ್ಮ ಸೇರಿ ಗುಟಕಾ, ಸಾರಾಯಿ, ಗಾಂಜಾದ ಚಟ ಬೆಳೆಸಿಕೊಂಡು ಹಣಕ್ಕಾಗಿ ಸಣ್ಣ-ಪುಟ್ಟ ಕಳ್ಳತನ ಆರಂಭಿಸಿದ್ದರು. ಒಂದರ್ಥದಲ್ಲಿ ಹೇಳುವದಾದರೆ ಅಶ್ರಫ್ ಅಲಿ 'ಮನೆಗೆ ಮಗನಾಗಲಿಲ್ಲ ಸ್ಮಶಾನಕ್ಕೆ ಹೆಣವಾಗಲಿಲ್ಲ' ಎಂಬಂತಾಗಿದೆ. ಮೊಬೈಲ್, ಮೋಟಾರ್ ಬೈಕ್ ಕದ್ದು ಮಾರಿ ಬಂದ ಹಣದಿಂದ ಚೈನಿ ಹೊಡೆಯುತ್ತಲೇ ಪಾತಕಲೋಕಕ್ಕೆ ಎಂಟ್ರಿ ಕೊಟ್ಟಿದ್ದ ಅಶ್ರಫ್. ಜಗತ್ತು ಏನೆಂದು ತಿಳಿಯುವ ಮುನ್ನವೇ ಕೊಲೆಯಾಗಿ ಹೋದನು. 'ನೆತ್ತರದಲ್ಲಿ ಕೈ ಹಾಕಿದವನು ಕೊನೆಗೆ ನೆತ್ತರದಲ್ಲಿ ಮಕಾಡೆ ಮಲಗಿದ್ದು ಪಾತಕಲೋಕದ ಪರಮ ಪಾಠವಾಗಿದೆ.'

**ಅಶ್ರಫ್ ಅಲಿಯ ಗಂಭೀರ ಕ್ರೈಂಗಳು...**

ಅಶ್ರಫ್ ಅಲಿಯು ಮೀಸೆ ಚಿಗುರುವುದಕ್ಕೆ ಮೊದಲೇ ಅನೇಕ ಗಂಭೀರ ಪ್ರಕರಣಗಳಲ್ಲಿ ಭಾಗಿಯಾಗಿ ಪೊಲೀಸ್ ರಿಕಾರ್ಡ್‌ನಲ್ಲಿ ಎಂಟ್ರಿ ಆಗಿದ್ದನು. ಮುಂಬೈ ಮಾಫಿಯಾ ಲೋಕದ ನಟೋರಿಯಸ್ ಪಂಟರ್‌ಗಳಂತೆ ತಾನು ಕ್ರಿಮಿನಲ್ ಹೆಸರು ಮಾಡಬೇಕೆಂದು ಇರಾದೆ ಈತನಿಗಿತ್ತು. ನಿಪ್ಪಾಣಿ ನಗರ ಪೊಲೀಸ್ ಠಾಣೆಯಲ್ಲಿ ಕೊಲೆ, ಕೊಲೆಗೆ ಯತ್ನ, ಮೊಬೈಲ್, ಮೋಟಾರ್ ಬೈಕ್, ಜೀವ ಬೆದರಿಕೆ ಸೇರಿದಂತೆ ಅನೇಕ ಗಂಭೀರ ಪ್ರಕರಣಗಳು ಅಶ್ರಫ್ ಅಲಿಯ ಮತ್ತು ಆತನ ಅಣ್ಣನಾದ ಸೈಫ್ ಅಲಿ ಮೇಲಿವೆ. ಇದಲ್ಲದೆ ಕೊಲ್ಲಾಪೂರ, ಸಾಂಗಲಿ ಹಾಗೂ ಕರ್ನಾಟಕದ ಬೆಳಗಾವಿ ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಕೂಡಾ ಅನೇಕ ಗಂಭೀರ ಪ್ರಕರಣಗಳಿವೆ. ಒಂದು ಅರ್ಥದಲ್ಲಿ ಹೇಳುವುದಾದರೆ ಕರ್ನಾಟಕ-ಮಹಾರಾಷ್ಟ್ರ ಪೊಲೀಸರಿಗೆ ತಲೆನೋವಾಗಿ ಪರಿಣಿಸಿದ್ದ ಅಶ್ರಫ್ ಅಲಿ.

**ಒಂದು ವರ್ಷ ಗಡಿಪಾರು ಮಾಡಲಾಗಿತ್ತು...**

ವಿವಿಧ ಅಪರಾಧ ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಬಂದಿದ್ದ ಅಶ್ರಫ್ ಅಲಿ ನಗಾರ್ಜಿ ಇತ್ತೀಚಿಗೆ ಮೇಜರ್ ಆಗಿದ್ದನು. ನಿಪ್ಪಾಣಿ ನಗರ ಮತ್ತು ಪರಿಸರದಲ್ಲಿ ಶಾಂತಿ ಕದಡುವ ಪ್ರಯತ್ನಕ್ಕೆ ಕೈ ಹಾಕಿದ್ದನು. ಜತೆಗೆ ತಾನು ಕೊಲೆ ಮಾಡಿದ್ದ ಅಭಿಷೇಕ ದತ್ತವಾಡೆ ಸ್ನೇಹಿತರ ಜೊತೆಗೆ ಆಗಾಗ ಗುರಾಯಿಸುತ್ತಿದ್ದನು. ಇದೆಲ್ಲವನ್ನು ಅರಿತುಕೊಂಡ ನಿಪ್ಪಾಣಿ ಪೊಲೀಸರು ಈತನ ಮೇಲೆ ಗುಂಡಾ ಕಾಯ್ದೆ ಪ್ರಕಾರ ಗಡಿಪಾರು ವಿಧಿಸುವಲ್ಲಿ ಯಶಸ್ವಿಯಾದರು. ಬೆಳಗಾವಿ ಜಿಲ್ಲೆಯಿಂದ ಕೋಲಾರ ಜಿಲ್ಲೆಗೆ ಅಶ್ರಫ್ ಅಲಿಯನ್ನು ಗಡಿಪಾರು ಮಾಡಲಾಯಿತು. ಇದಕ್ಕಿಂತ ಮೊದಲು ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗಲಿ ಜಿಲ್ಲೆಗಳಲ್ಲೂ ಈತನ ಅಪರಾಧ ಚಟುವಟಿಕೆಗಳು ಮುಂದುವರೆದಿದ್ದವು. ಗಡಿಪಾರಾಗಿ ಕೋಲಾರಕ್ಕೆ ಹೋಗಿದ್ದರೂ ಕಳ್ಳತನದಿಂದ ಹೇಗೋ ಅಶ್ರಫ್ ಅಲಿ, ಬೆಳಗಾವಿ, ಮಹಾರಾಷ್ಟ್ರದ ಕೊಲ್ಹಾಪುರ ಮತ್ತು ಸಾಂಗಲಿ ಜಿಲ್ಲೆಗಳಿಗೆ ಬಂದು ಹೋಗುತ್ತಲಿದ್ದನು.

☞ 12

## ನಿಪ್ಪಾಣಿ ಸಿಪಿಐ ಬಿ.ಎಸ್. ತಳವಾರ ಮತ್ತು ಸಿಬ್ಬಂದಿಗಳ ಯಶಸ್ವಿ ಕಾರ್ಯಾಚರಣೆ


ಪಿಎಸ್‌ಐ ಉಮಾದೇವಿ


ಪಿಎಸ್‌ಐ ಶಿವರಾಜ ನಾಯಿಕವಾಡಿ


ಪಿಎಸ್‌ಐ ರಮೇಶ ಪವಾರ್

ಇದು ಎರಡೂವರೆ ವರ್ಷಗಳ ಹಿಂದಿನ ಮಾತು. ಇದೀಗ 13 ಜನ ಸ್ನೇಹಿತರಿಂದ ಬರ್ಬರವಾಗಿ ಕೊಲೆಯಾಗಿರುವ ಪಾತಕಿ ಅಶ್ರಫ್ ಅಲಿ ಶೇರ್ ಅಲಿ ನಗಾರ್ಜಿ ಆಗಿನ್ನು ಅಪ್ರಾಪ್ತ. ತೀರಾ ಕ್ಷುಲ್ಲಕ ಕಾರಣಕ್ಕಾಗಿ ತನ್ನಿಬ್ಬರು ಅಪ್ರಾಪ್ತ ಸ್ನೇಹಿತರು ಮತ್ತು ತನ್ನ ಅಣ್ಣ ಸೈಫ್ ಅಲಿ, ಆತನ ಸ್ನೇಹಿತ ಆಯಾಜ್

### ಸ್ನೇಹಿತನ ಕೊಲೆಗೆ ಪ್ರತೀಕಾರ ತೀರಿಸಿಕೊಂಡರು...

ಯಕ್ಸಂಬಿ ಜತೆಗೂಡಿ ನಿಪ್ಪಾಣಿ ನಗರದ ಮಾನವಿ ಗಲ್ಲಿಯ ನಿಷ್ಪಾಪಿ ತರುಣ ಅಭಿಷೇಕ ಶಿವಾನಂದ ದತ್ತವಾಡೆ (21 ವ) ಎಂಬಾತನನ್ನು ಕಬ್ಬಿಣದ ರಾಡ್ ಮತ್ತು ಚಾಕುವಿನಿಂದ ಹಲ್ಲೆ ನಡೆಸಿ ದಿ. 04-04-2024ರಂದು ಅತ್ಯಂತ ಬರ್ಬರವಾಗಿ ಕೊಲೆಗೈದಿದ್ದನು. ಅಭಿಷೇಕನ ಬರ್ಬರ ಕೊಲೆ ಅಂದು ನಿಪ್ಪಾಣಿಯನ್ನು ನಡುಗಿಸಿತ್ತು.

ಅಂದು ಅಭಿಷೇಕನ ಅಂತ್ಯಸಂಸ್ಕಾರದ ಸಂದರ್ಭದಲ್ಲಿ 13 ಜನ ಸ್ನೇಹಿತರೆಲ್ಲ ಒಂದೆಡೆ ಸೇರಿಕೊಂಡು ಅಭಿಷೇಕನ ಕೊಲೆಗೆ ಕಾರಣನಾದ ಪಾತಕಿ ಅಶ್ರಫ್ ಅಲಿಯನ್ನು ಕೂಡಾ ಬರ್ಬರವಾಗಿ ಕೊಲೆ ಮಾಡುವುದಾಗಿ ಶಪಥ ಮಾಡಿರುತ್ತಾರೆ. ಅಭಿಷೇಕ ದತ್ತವಾಡೆ ಕೊಲೆ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಈ ನಡುವೆ ಜಾಮೀನಿನ ಮೇಲೆ ಬಂದು ಕಳೆದ ವರ್ಷ ಆಗಸ್ಟ್‌ನಲ್ಲಿ ಕ್ರಿಮಿನಲ್ ಚಟುವಟಿಕೆ ಹಿನ್ನೆಲೆಯ ಕಾರಣ ಅಶ್ರಫ್ ಅಲಿಯನ್ನು ಒಂದು ವರ್ಷದವರೆಗೆ ಬೆಳಗಾವಿ ಜಿಲ್ಲೆಯಿಂದ ಕೋಲಾರ ಜಿಲ್ಲೆಗೆ 'ಗಡಿಪಾರು' ಮಾಡಲಾಗುತ್ತದೆ. ಕಳೆದ ಆಗಸ್ಟ್ ತಿಂಗಳಿನಲ್ಲಿ 'ಗಡಿಪಾರು' ಮುಗಿಸಿ ನಿಪ್ಪಾಣಿಗೆ ಬಂದ ಕೂಡಲೇ ಪಾತಕಿ ಅಶ್ರಫ್ ಅಲಿ ಚಿಗಿತುಕೊಂಡು ಇನ್ನಿಲ್ಲದ ದಾದಾಗಿರಿ ಮಾಡತೊಡಗಿದ್ದನು.


ಅಭಿಷೇಕ ಶಿವಾನಂದ ದತ್ತವಾಡೆ

ಕೊಲೆಯಾದ ಅಭಿಷೇಕ ದತ್ತವಾಡೆಯ 13 ಜನ ಸ್ನೇಹಿತರು ಎಲ್ಲೇ ಸಿಕ್ಕರೂ ಪಾತಕಿ ಅಶ್ರಫ್ ಅಲಿ ಗುರಾಯಿಸತೊಡಗಿದ್ದನು. ಅಷ್ಟೇ ಏಕೆ ಅವರಲ್ಲಿನ ರವಿ ಈರಣ್ಣ ಶಿರಗಾಂವೆಯನ್ನು ಮುಗಿಸಲು ಪಾತಕಿ ಮುಂದಾಗಿದ್ದನು ಎಂದು ತಿಳಿದು ಬಂದಿತ್ತು. ಅದೊಂದು ದಿನ 13 ಜನ ಸ್ನೇಹಿತರು ಒಂದೆಡೆ ಸೇರಿಕೊಂಡು ರವಿ ಈರಣ್ಣ ಶಿರಗಾಂವೆ ನೇತೃತ್ವದಲ್ಲಿ ಯಾವುದೇ ಕಾರಣಕ್ಕೂ ಪಾತಕಿ ಅಶ್ರಫ್ ಅಲಿ ಬದುಕಿರಬಾರದು ಎಂದು ಸ್ಕೇಚ್ ರೂಪಿಸಿದರು. ಅದರಂತೆ ದಿನಾಂಕ 02-10-2024ರಂದು ರಾತ್ರಿ 8.20ರ ಸುಮಾರಿಗೆ ನಿಪ್ಪಾಣಿಯ ಭೀಮನಗರದಲ್ಲಿನ ಮುನ್ಸಿಪಲ್ ಹೈಸ್ಕೂಲ್ ಹತ್ತಿರ 13 ಜನ ಸ್ನೇಹಿತರು ಕೂಡಿಕೊಂಡು ಕೊಡಲಿ ಮತ್ತು ತಲವಾರ್‌ಗಳು ಹಾಗೂ ಗುಪ್ತಿ ಎಂಬ ಮಾರಕಾಸ್ತ್ರಗಳಿಂದ ಭೀಕರವಾಗಿ ಕೊಂದು ಹಾಕಿ ತಮ್ಮ ಸ್ನೇಹಿತ ಅಭಿಷೇಕ ದತ್ತವಾಡೆಯ ಹತ್ಯೆಗೆ ಪ್ರತೀಕಾರ ತೀರಿಸಿಕೊಂಡಿದ್ದಾರೆ ಎಂಬ ಮಾತುಗಳು ನಿಪ್ಪಾಣಿ ಪರಿಸರದಲ್ಲಿ ಮಾರ್ದನಿಸುತ್ತಿದೆ.

ಅಪರಾಧ ಹಿನ್ನೆಲೆಯ ಪಾತಕಿ ಅಶ್ರಫ್ ಅಲಿಯ ಬರ್ಬರ ಕೊಲೆ ಇನ್ನುಳಿದ ಕ್ರಿಮಿನಲ್ ಕುಳಗಳಿಗೆ ಒಂದು ಪಾಠವೆಂದಂತಾಗಿದೆ. ನಿಪ್ಪಾಣಿಯ ಖಡಕ್ ಸಿಪಿಐ ಬಿ.ಎಸ್. ತಳವಾರ ನೇತೃತ್ವದಲ್ಲಿ ನಗರ ಪಿಎಸ್‌ಐ ಉಮಾದೇವಿ, ಗ್ರಾಮೀಣ ಪಿಎಸ್‌ಐ ಶಿವರಾಜ ನಾಯಿಕವಾಡಿ, ಬಿಸಿಪಿಎಸ್ ಪಿಎಸ್‌ಐ ರಮೇಶ ಪವಾರ್ ಮತ್ತು ಸಿಬ್ಬಂದಿಗಳು ಸೇರಿಕೊಂಡು ಜಂಟಿಯಾಗಿ ನಗರದಲ್ಲಿ ಕಾಯ್ದೆ ಮತ್ತು ಸುವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಇನ್ನೂ ರೌಡಿಗಳು ಬಾಲ ಬಿಚ್ಚದಂತೆ ನೇರವಾಗಿ ಕಠಿಣ ಸಂದೇಶವನ್ನು ರವಾನಿಸಿದ್ದಾರೆ.

6 ☞

''ಮದುವೆ ಯಾವತ್ತುಫಿ?''

''ಈ ತಿಂಗಳ ಕೊನೆಯಲ್ಲಿಫಿ.''

''ಸ್ಥಳ ಯಾವುದು ಮೇಡಂ.''

''ಯಾವುದಾದರೂ ದೇವರ ಸನ್ನಿಧಿಯಲ್ಲಿಫಿ.''

''ನೀವ್ಯಾಕೆ ಭಾವನಂತ ಸೆಕೆಂಡ್ ಹ್ಯಾಂಡ್ ಗಂಡನ್ನ ಮದುವೆ ಆಗುತ್ತಿದ್ದೀರ? ನಿಮ್ಮ ಅಕ್ಕ ಬದುಕಿರುವಾಗ ಸಮಸ್ಯೆ ಬರೋಲ್ವಫಿ?''

''ನನ್ನಕ್ಕ ಸಂತೋಷದಿಂದ ಒಪ್ಪಿದ್ದಾಳೆ.''

''ನಿಮ್ಮಂತ ಸ್ಟಾರ್ ಹೀರೋಯಿನ್‌ಗಳು ಸಂಸಾರಸ್ಥ ಗಂಡಸರನ್ನ ಮದುವೆ ಆಗುತ್ತಿದ್ದೀರ. ಹಿಂದಿ, ತಮಿಳು, ತೆಲುಗು, ಕನ್ನಡ ಭಾಷೆಯ ಸಿನಿಮಾಗಳಲ್ಲಿ ಇಂತಹ ಮದುವೆಗಳಾಗಿವೆ. ಈ ಮದುವೆ ಹಿನ್ನೆಲೆಯಲ್ಲಿ ಭಾವ ಅಥವಾ ಬೇರೆಯವರ ಒತ್ತಡ ಇರುವುದೆ?''

ಪದ್ಮಿನಿ ''ಖಂಡಿತಾ ಇಲ್ಲಫಿ. ಉಳಿದ ನಟಿಯರ ವಿಚಾರ ನನಗೆ ಗೊತ್ತಿಲ್ಲಫಿ.''

''ವಿವಾಹವಾದ ಮೇಲೆ ಸಿನಿಮಾಗಳಲ್ಲಿ ನೀವು ನಟಿಸುತ್ತೀರ?''

''ಖಂಡಿತಾ ನಟಿಸುತ್ತೇನೆ.''

ಇನ್ನೂ ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದರೋ ಏನೋ. ಆದರೆ ತಂಗವೇಲನ್ ಮಧ್ಯ ಪ್ರವೇಶ ಮಾಡಿ ವರದಿಗಾರರನ್ನು ಬಲವಂತ ಮಾಡಿ ಕಳಿಸಿದ್ದನು.

●●●

ಆಘಾತಕರ ಸುದ್ದಿಫಿ! ಇದು ನಿಜವೇ... ಸತ್ಯವೇ? ಇದ್ಯಾಕೆ ಹೀಗಾಯಿತು? ಯಾರು ಈ ರೀತಿ ಮಾಡಿದವರು? ಎಷ್ಟೊಂದು ಬರ್ಬರ ರೀತಿಯಲ್ಲಿ ಹತ್ಯೆ ಮಾಡಿದವರು ಯಾರು? ಇದು ಸೇಡಿನ ಪ್ರಕರಣವೆ?

ಇಡೀ ರಾಜ್ಯದಲ್ಲಿ ಮಾತ್ರವಲ್ಲಫಿ. ಕೇರಳ, ತಮಿಳು ನಾಡು, ಆಂಧ್ರಪ್ರದೇಶದಲ್ಲಿ ಸಹ ಈ ಭಯಾನಕ ಸುದ್ದಿ ಆಘಾತ ಉಂಟು ಮಾಡಿದೆ. ಇದೆಂತಹ ದುರಂತ. ಈ ರೀತಿ ಆಗಬಾರದಿತ್ತುಫಿ.

ಪ್ರಖ್ಯಾತ ಸಿನಿಮಾ ನಟಿ ಪದ್ಮಿನಿಯ ಮುಖದ ಮೇಲೆ ಆ್ಯಸಿಡ್ ಎರಚಿ ಬರ್ಬರ ರೀತಿಯಲ್ಲಿ ಕೊಲೆ ಮಾಡಿದ್ದಾರೆ.

ಕೊಲೆಯಾಗಿರೋದು ಎಲ್ಲಿಫಿ?

ಈ ನಟಿ ಮನೆಯ ಮುಂಭಾಗದಲ್ಲಿ ಪ್ರತ್ಯೇಕವಾಗಿರುವ ಔಟ್‌ಹೌಸ್‌ನಲ್ಲಿಫಿ. ಮಲಗಿದ್ದ ಅವರ ಮೇಲೆ ಯಾರೋ ಆ್ಯಸಿಡ್ ಎರಚಿದ್ದಾರೆ.

ಇಲ್ಲಿನ ಅನುಮಾನ ಏನು? ಬಂಗಲೆ ಸ್ಟಾರ್ ಹೋಟೆಲ್ ರೀತಿ ವೈಭವದಿಂದ ಕೂಡಿದೆ. ಅಲ್ಲಿ ಮಲಗುವುದರ ಬರಲು ಅವರು ಔಟ್‌ಹೌಸ್‌ಗೆ ಯಾಕೆ ಬಂದರು?

ಪ್ರಶ್ನೆಗಳು ಪದ್ಮಿನಿಯ ಅಭಿಮಾನಿಗಳನ್ನು ಕಾಡುತ್ತಿದೆ.

●●●

ನಗರದ ಪ್ರಮುಖ ಬಡಾವಣೆಯಲ್ಲಿರುವ ಬಂಗಲೆಯ ಆವರಣದಲ್ಲಿ ಮತ್ತು ಹೊರಭಾಗದಲ್ಲಿ ಸಾವಿರಾರು ಮಂದಿ ಸೇರಿದ್ದಾರೆ. ಆ ಸಂಖ್ಯೆ ಜಾಸ್ತಿಯಾಗುತ್ತಿದೆ. ಅಭಿಮಾನಿಗಳನ್ನು ನಿಯಂತ್ರಿಸಲು ಪೊಲೀಸರು ಸಾಹಸ ಮಾಡುತ್ತಿದ್ದಾರೆ. ಇದು ಏನು ಸಾಮಾನ್ಯ ಅಲ್ಲಫಿ.

ಪತ್ರಿಕೆ ವರದಿಗಾರರು ಮತ್ತು ಎಲ್ಲಾ ಟಿ.ವಿ. ಚಾನಲ್ ವರದಿಗಾರರು ಕ್ಯಾಮರಾಗಳೊಂದಿಗೆ ಕಾಯುತ್ತಿದ್ದಾರೆ.

ಬಂಗಲೆಯ ಗೆಸ್ಟ್‌ಹೌಸ್! ಫ್ರಂಟ್ ಡೋರ್ ಓಪನ್ ಆಗಿದೆ. ಹೊರಭಾಗದಲ್ಲಿ ಪದ್ಮಿನಿಯ ಭಾವೀ ಪತಿ ಮತ್ತು ಅಕ್ಕನ ಗಂಡ ಮತ್ತು ಇವಳ ಕೆಲವು ಸಿನಿಮಾಗಳ ಡೈರೆಕ್ಟರ್ ಆಗಿರುವ ತಂಗವೇಲನ್ ಮತ್ತು ಪತ್ನಿ ಮಧುಮತಿ, ನಟಿಯ ಸಹೋದರ ಜಗನ್‌ಬಾಬು, ದೂರದ ಕೆಲವು ಸಂಬಂಧಿಕರು ಅಲ್ಲಿ ಸೇರಿದ್ದಾರೆ.

ಪೊಲೀಸ್ ಕಾರ್ಯಾಚರಣೆ ನಡೆಯುತ್ತಿದೆ.

ಮಂಚದ ಮೇಲೆ ಡೆಡ್‌ಬಾಡಿ ಅಂಗಾತ್ತನೆಯಾಗಿ ಬಿದ್ದಿದೆ. ಚೆಲುವೆ ನಟಿಯ ವಸ್ತ್ರಗಳು ಸಡಿಲಗೊಂಡು, ನಗ್ನತೆ ರೋಚಕ ರೀತಿಯಲ್ಲಿ ಅನಾವರಣಗೊಂಡಿದೆ.

ಕೈಕಾಲುಗಳು ಸೆಟೆದುಕೊಂಡಿವೆ.

ಪೊಲೀಸ್ ಅಧಿಕಾರಿ ಗೋಪಾಲನ್ ತುಂಬಾ ಎಚ್ಚರಿಕೆಯಿಂದ ಶವವನ್ನು ಪರೀಕ್ಷೆ ಮಾಡುತ್ತಿದ್ದಾರೆ. ಆಗ ಅವರ ದೃಷ್ಟಿಗೆ ಕಂಡು ಬಂದಿದ್ದೇನು?

ಬಿಳಿಯ ಬಣ್ಣದ ಸ್ವಲ್ಪ ದಪ್ಪಗಿರುವ ನಾಲ್ಕು ಕೂದಲುಗಳು ಅಂಟಿಕೊಂಡಿವೆ. ಶವದ ವಿವಿಧ ಭಂಗಿಗಳ ಫೋಟೋ ತೆಗೆದು ನಂತರ ಆ ಕೂದಲುಗಳನ್ನು ವಶಪಡಿಸಿಕೊಂಡನು.

ಪೇಪರ್ ಪ್ಯಾಕ್ ಮಾಡಲಾಗಿದೆ. ಕೇಸ್ ರಿಜಿಸ್ಟರ್‌ನಲ್ಲಿ ದಾಖಲಾಗಿದೆ. ಮಂಚದ ಬಲಭಾಗದ ಕಾಲಿನ ಹತ್ತಿರ ಏನೋ ಬಿದ್ದಿರುವುದನ್ನು ಕಂಡು ಎತ್ತಿಕೊಂಡರು. ಅದು ಆ್ಯಸಿಡ್ ಸೀಸೆ! ಪೊಲೀಸ್ ಅಧಿಕಾರಿ ಅದರ ಮೇಲೆ ಕರ್ಚಿಫ್ ಹಾಕಿ ಎತ್ತಿಕೊಂಡಿದ್ದರಿಂದ ತೊಂದರೆ ಆಗಲಿಲ್ಲ ಎಂದು ಹೇಳಬಹುದು.

ದಾಖಲಿಸಿದ ನಂತರ ಲ್ಯಾಬ್ ಟೆಸ್ಟ್‌ಗೆ ಮತ್ತು ಫಿಂಗರ್ ಪ್ರಿಂಟ್‌ನವರ ಪರಿಶೀಲನೆಗೆ ಕಳಿಸಲಾಯಿತು. ಮೃತಳಾಗಿರುವ ಪದ್ಮಿನಿ ಮತ್ತು ಮನೆಯವರೆಲ್ಲರ ಬೆರಳು ಗುರುತುಗಳನ್ನು ಪಡೆದು ಟೆಸ್ಟ್ ಮಾಡಲು ಕಳಿಸಲಾಯಿತು. ಇದು ಕುತೂಹಲ ಉಂಟು ಮಾಡಿದೆ.

ಪೊಲೀಸ್ ಅಧಿಕಾರಿ ಗೋಪಾಲನ್ ಶವದ ಕೊಠಡಿಯನ್ನು ಎಚ್ಚರಿಕೆಯಿಂದ ಗಮನಿಸುತ್ತಿರುವಾಗ ಬಲಭಾಗದ ಮೂಲೆಯಲ್ಲಿ ಕಂಡು ಬಂದಿತು ಗೆಜ್ಜೆಫಿ... ಒಂಟಿ ಗೆಜ್ಜೆಫಿ...! ಅದನ್ನು ವಶಪಡಿಸಿಕೊಂಡರು.

ಶವವನ್ನು ಪರೀಕ್ಷೆ ಮಾಡಿದ ವೈದ್ಯರು ತಮ್ಮ ಅಭಿಪ್ರಾಯ ಹೇಳುತ್ತಿದ್ದಾರೆ. ಸಾವಿನ ಸಮಯ ರಾತ್ರಿ ಹನ್ನೊಂದರಿಂದ ಹನ್ನೆರಡು ಗಂಟೆ ಒಳಗೆ.

ಸಾವಿನ ಬಗ್ಗೆ ಖಚಿತವಾಗಿಲ್ಲಫಿ.

ಆ್ಯಸಿಡ್ ಎರಚಿದರೆ ಸಾಮಾನ್ಯವಾಗಿ ನಾವು ಬರ್ಲೋಲ್ಲಫಿ. ಆದರೆ ಹೃದಯ ಮತ್ತು ಗಂಟಲಿನ ಭಾಗದ ಮೇಲೆ ಅಧಿಕವಾಗಿ ಬಿದ್ದರೆ ಸಾವು ಬರುವ ಸಾಧ್ಯತೆಗಳಿವೆ.

ಆ ದೃಶ್ಯ ಕಂಡಿತು! ಶವ ಬಿದ್ದಿರುವ ಬಲಭಾಗದಲ್ಲಿ ಬೀಟ್ ಮರದ ಟೇಬಲ್ ಇದೆ. ಅದರ ಮೇಲಿದೆ. ಮೊಬೈಲ್ ಫೋನ್! ಗೋಪಾಲನ್ ಸೂಚನೆ ನೀಡಿದ ಕೂಡಲೇ ಅದನ್ನು ವಶಪಡಿಸಿಕೊಳ್ಳಲಾಯಿತು.

●●●

ಪೊಲೀಸ್ ಅಧಿಕಾರಿ ಗೋಪಾಲನ್ ಈಗ ಪ್ರತ್ಯೇಕ ರೂಮಿನಲ್ಲಿ ವಿಚಾರಣೆ ಮಾಡುತ್ತಿದ್ದಾರೆ. ಕಾನ್‌ಸ್ಟೇಬಲ್ ಇದನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದ್ದಾರೆ.

ಮೊದಲು ಸೆಕ್ಯುರಿಟಿಯವರನ್ನು ವಿಚಾರಣೆ ಮಾಡಿದರು. ರಾತ್ರಿ ಒಂಭತ್ತು ಗಂಟೆಯ ನಂತರ ಬಂದಿದ್ದು ಇಬ್ಬರು ಮಾತ್ರಫಿ!

ಡ್ರೈವರ್ ಶ್ರೀರಂಗ.

ಅಭಿಮಾನಿ ರಂಗವೇಲನ್.

''ನೀನು ಎಲ್ಲಿಗೆ ಹೋಗಿದ್ದೆ ರಂಗ? ರಾತ್ರಿ ವೇಳೆ ಯಾಕೆ ಈ ಬಂಗಲೆಗೆ ಬಂದೆ.''

ತುಂಬಾ ದುಃಖಿತನಾಗಿದ್ದ ಅವನು ''ನಾನು ಮೇಡಂ ಅಭಿಮಾನಿ. ಅವರು ನನಗೆ ಡ್ರೈವರ್ ಕೆಲಸ ಕೊಟ್ಟರು ಮತ್ತು ಈ ಗೆಸ್ಟ್‌ಹೌಸ್‌ನಲ್ಲಿ ಉಳಿಯಲು ಅವಕಾಶ ಕೊಟ್ಟರು.''

''ಈ ಗೆಸ್ಟ್‌ಹೌಸ್‌ನಲ್ಲಿ ಯಾಕೆ ಮಲಗಿದರು?''

''ಗೊತ್ತಿಲ್ಲ ಸಾರ್.''

''ನೀನು ಬರಲು ಕಾರಣ ಏನು?

ಶ್ರೀರಂಗ ಮೊಬೈಲ್ ತೆಗೆದು ಕಾಲ್ ಡೀಟೈಲ್ಸ್ ತೋರಿಸುತ್ತಾ ''ಸಾರ್... ಮೇಡಂ ಇಲ್ಲಿಗೆ ಬೇಗ ಬಾ ಅಂತ ಹೇಳಿ ಫೋನ್ ಮಾಡಿದ್ರುಫಿ.''

''ನೀನು ಅವರ ಜೊತೆ ಮಾತಾಡಿದ್ಯಫಿ?'

''ನಾನು ಬಂದಾಗ ಅವರು ಬದುಕಿರಲಿಲ್ಲಫಿ.''

''ಆಮೇಲೆ ಏನು ಮಾಡಿದೆ?''

''ನಾನು ಡೆಡ್‌ಬಾಡಿ ಹತ್ತಿರ ಇದ್ದಾಗ ಮನೆಯವರೆಲ್ಲಾ ಬರುತ್ತಿರುವುದು ಆ ಗೆಸ್ಟ್‌ಹೌಸ್‌ನ ಕಿಟಕಿಯಿಂದ ಕಂಡು ಬಂದಿತು. ಅವರ ದೃಷ್ಟಿಗೆ ಬಿದ್ದರೆ ಅಪಾಯ ಅಂತ ಮರೆಯಾಗಿದೆ.''

''ನೀನು ಬಂದಾಗ ಶವ ಹೇಗಿತ್ತುಫಿ?''

''ಈಗ ಇರುವ ಸ್ಥಿತಿಯಲ್ಲಿತ್ತುಫಿ.''

''ಅಲ್ಲಿ ಬೇರೆ ಯಾರಾದರೂ ಇದ್ರಾಫಿ?'

''ನಾನು ಗಮನಿಸಿದಂತೆ ಇಲ್ಲಫಿ.''

''ಸಧ್ಯಕ್ಕೆ ವಿಚಾರಣೆ ಮುಗಿದಿದೆ. ನಾನು ಹೇಳಿ ಕಳಿಸಿದಾಗ ಬರಬೇಕು'' ಎಂದಾಗ ಶ್ರೀರಂಗ ಶವದ ಕಡೆ ನೋಡುತ್ತಾ ಕಂಬನಿ ಒರೆಸಿಕೊಂಡು ಹೊರಗೆ ಬಂದನು.

ತಂಗವೇಲನ್ ವಿಚಾರಣೆ ಪ್ರಾರಂಭ ಆಗಿದೆ.

''ಪದ್ಮಿನಿ ಶತ್ರುಗಳು ಇದ್ರಾಫಿ?''

''ರಂಗವೇಲನ್ ಎಂಬ ರೌಡಿ ಇವಳ ಅಭಿಮಾನಿ ಆಗಿದ್ದಫಿ. ಅವಳ ಜೊತೆ ಶೂಟಿಂಗ್ ಸಮಯದಲ್ಲಿ ಅಸಭ್ಯವಾಗಿ ವರ್ತಿಸಿದ್ದರಿಂದ ಅವನಿಗೆ ಹೊಡೆದು ಅವಮಾನ ಮಾಡಿದ್ದಳು. ನಿನ್ನ ಮುಖ, ಮೈ ಮೇಲೆ ಆ್ಯಸಿಡ್ ಎರಚುತ್ತೀನಿ ಅಂತ ಪ್ರತಿಜ್ಞೆ ಮಾಡಿದ್ದನು.''

ಅಭಿಮಾನಿ ರಂಗವೇಲನ್.

ಪೊಲೀಸರು ಕೇವಲ ನಲವತ್ತು ನಿಮಿಷಗಳಲ್ಲಿ ಡ್ರೈವರ್ ಮತ್ತು ಅಭಿಮಾನಿಯಾಗಿದ್ದ ಶ್ರೀರಂಗನನ್ನು ವಿಚಾರಣೆ ಮಾಡಿ ಮಾಹಿತಿ ಸಂಗ್ರಹಿಸಿದ್ದರು. ಅಸಭ್ಯವಾಗಿ ವರ್ತಿಸಿದ್ದ ರಂಗವೇಲನ್ ಬಗ್ಗೆ ಪದ್ಮಿನಿ ವಿಶ್ವನಿಗೆ ಹೇಳಿದ್ದಳು.

ಅವನನ್ನು ಬಂಧಿಸಲಾಯಿತು. ತೀವ್ರವಾಗಿ ವಿಚಾರಣೆ ಮಾಡಿದರು. ರಂಗವೇಲನ್ ಒಂದು ವಾರದಿಂದ ಊರಲ್ಲಿ ಇರಲಿಲ್ಲಫಿ. ಅವನು ಬೆಳಿಗ್ಗೆ ಒಂಭತ್ತು ಗಂಟೆ ಹೊತ್ತಿಗೆ ಬೆಂಗಳೂರಿಗೆ ಬಂದಿದ್ದನು. ಅವನು ಟ್ರೈನ್ ಟಿಕೇಟ್, ಬೇರೆ ಊರಿನ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದ ಲಾಡ್ಜ್ ಬಿಲ್ ಎಲ್ಲವನ್ನೂ ಸಹ ತೋರಿಸಿದನು.

ಕಾನ್‌ಸ್ಟೇಬಲ್ ಸೂಚನೆಯಂತೆ ಅಲ್ಲೇ ಇದ್ದ ಫಿಂಗರ್ ಪ್ರಿಂಟ್‌ನವರು ರಂಗವೇಲನ್ ಬೆರಳು ಗುರುತನ್ನು ಪಡೆದು ಪರಿಶೀಲನೆಗೆ ಕಳಿಸಿದರು. ರಿಪೋರ್ಟ್ ಬಂದಿದೆ.

ಆ್ಯಸಿಡ್ ಸೀಸೆಯ ಮೇಲೆ ಮೂಡಿರುವ ಬೆರಳು ಗುರುತುಗಳು ಅವನದ್ದಲ್ಲ ಎಂಬುದು ಖಚಿತವಾಯಿತು.

ಈ ಸಿನಿಮಾ ನಟಿಯ ಭಾವ ಮತ್ತು ಸಿನಿಮಾ ಡೈರೆಕ್ಟರ್ ಆಗಿದ್ದ ತಂಗವೇಲನ್‌ನನ್ನು ವಿಚಾರಣೆ ಮಾಡಿದರು.

ತಂಗವೇಲನ್ ಮುಖದ ಮುಂದೆ ಪೇಪರ್ ಪ್ಯಾಕ್ ಹಿಡಿದು ಓಪನ್ ಮಾಡಿದರು.

ಬಿಳಿಯ ಬಣ್ಣದ ಎದೆಯ ರೋಮಗಳು! ''ಮಿಸ್ಟರ್ ತಂಗವೇಲನ್... ಇವಳನ್ನು ನೀವು ರಾತ್ರಿ ಅನುಭವಿಸಿ ನಂತರ ಆ್ಯಸಿಡ್ ಎರಚಿ ಕೊಲೆ ಮಾಡಿದ್ದೀರ. ನಿಮ್ಮಿಬ್ಬರಿಗೂ ಮೊದಲಿನಿಂದಲೂ ಸಹ ಸೆಕ್ಸ್ ಲಿಂಕ್ ಇತ್ತುಫಿ. ಯಾವುದೋ ಕಾರಣದಿಂದ ವೈಮನಸ್ಸು ಉಂಟಾಯಿತು. ಅದು ದ್ವೇಷವಾಗಿ ಬದಲಾಗಿ ಆ್ಯಸಿಡ್ ಎರಚಿದ್ದೀರ.''

ಡೈರೆಕ್ಟರ್ ತಂಗವೇಲನ್ ''ಸಾರ್... ನನಗೂ ಪದ್ಮಿನಿಗೂ ಇಂಟರ್‌ನಲ್ ಲಿಂಕ್ ಇತ್ತುಫಿ. ನಾವಿಬ್ಬರು ಮದುವೆ ಆಗಲು ತೀರ್ಮಾನ ಮಾಡಿದ್ದೆವು. ಇದಕ್ಕೆ ನನ್ನ ಮೊದಲ ಹೆಂಡತಿ ಒಪ್ಪಿದ್ದಳು. ಅವಳು ಗೆಸ್ಟ್‌ಹೌಸ್‌ನಲ್ಲಿ ಮಲಗಿರುವ ವಿಷಯ ತಿಳಿದು ಅವಳನ್ನು ಅನುಭವಿಸಲು ಅಲ್ಲಿಗೆ ಹೋಗಿದ್ದು ನಿಜ. ಅವಳ ಜೊತೆ ರೋಮ್ಯಾನ್ಸ್ ಮಾಡಿದ್ದೆಫಿ. ಆದರೆ ಅವಳಿಂದ ಯಾವ ರೀತಿಯ ರೆಸ್ಪಾನ್ಸ್ ಬರಲಿಲ್ಲಫಿ. ನಾಲ್ಕಾರು ಸಲ ಅವಳ ಮೈ ಅಲುಗಿಸಿ ಎಚ್ಚರಗೊಳಿಸಲು ಪ್ರಯತ್ನ ಮಾಡಿದೆ. ಅವಳಿಗೆ ಎಚ್ಚರ ಆಗಲಿಲ್ಲಫಿ. ಅನುಮಾನ ಬಂದು ಪರೀಕ್ಷೆ ಮಾಡಿದೆ. ಉಸಿರಾಟ ಮತ್ತು ಎದೆ ಪರೀಕ್ಷೆ ಮಾಡಿದೆ. ಉಸಿರಾಟ ಮತ್ತು ಎದೆ ಬಡಿತ ಸ್ತಬ್ಧವಾಗಿತ್ತುಫಿ. ನನಗೆ ಗಾಬರಿಯಾಗಿ ಅಲ್ಲಿಂದ ಹೊರಗೆ ಬಂದೆ'' ಎಂದನು.

ಪೊಲೀಸ್ ಅಧಿಕಾರಿ ಗೋಪಾಲನ್ ''ಅವಳ ಮುಖ ಮೈ ಮೇಲೆ ಆ್ಯಸಿಡ್ ಹಾಕಲಾಗಿತ್ತುಫಿ. ಸುಟ್ಟು ಕರಕಲಾಗಿದ್ದ ಅವಳ ದೇಹ ನೋಡಿದ ಮೇಲೂ ನಿಮ್ಮಲ್ಲಿ ಕಾಮ ಉತ್ತೇಜನ ಆಯಿತೆ?'' ಎಂದು ವ್ಯಂಗ್ಯವಾಗಿ ಕೇಳಿದನು.

''ಇಲ್ಲಫಿ.. ಇಲ್ಲಫಿ... ಅವಳ ಮೈ ಮೇಲೆ ಆ್ಯಸಿಡ್ ಹಾಕಿರಲಿಲ್ಲಫಿ. ಇದು ಸತ್ಯಫಿ.''

ಆ್ಯಸಿಡ್ ಸೀಸೆಯ ಮೇಲೆ ಮೂಡಿದ್ದ ಬೆರಳು ಗುರುತು ತಂಗವೇಲನ್‌ದ್ದಲ್ಲ ಎಂಬುದು ತಜ್ಞರ ವರದಿಯಿಂದ ರುಜುವಾತಾಯಿತು.

ವಿಚಾರಣೆ ಮುಂದುವರೆಯಿತು.

ತಂಗವೇಲನ್ ಪತ್ನಿ ಅಂದರೆ ಪದ್ಮಿನಿಯ ಅಕ್ಕ ಮಧುಮತಿಯನ್ನು ವಿಚಾರಣೆಗೆ ಒಳಪಡಿಸಿದರು. ''ಶ್ರೀಮತಿ ತಂಗವೇಲನ್ ನೀವು ರಾತ್ರಿ ಗೆಸ್ಟ್‌ಹೌಸ್‌ಗೆ ಬಂದಿದ್ದು ನಿಜ ತಾನೆ?''

ಅವಳು ಗಾಬರಿಯಾದಳು. ''ಇಲ್ಲಫಿ... ಇಲ್ಲಫಿ... ನಾನು... ನಾನು'' ಎಂದು ತಡವರಿಸುತ್ತಿರುವಾಗಲೇ ಒಂಟಿ ಗೆಜ್ಜೆಯನ್ನು ಅವಳ ಮುಖದ ಮುಂದೆ ಹಿಡಿದಾಗ ಗಾಬರಿಯಾದಳು.

ಗೋಪಾಲನ್ ''ನಮಗೆ ಬಂದಿರುವ ಮಾಹಿತಿಯ ಪ್ರಕಾರ ನಿಮಗೆ ತುಂಬಾ ವರ್ಷಗಳಿಂದ ಪದ್ಮಿನಿಯನ್ನು ಕಂಡರೆ ಆಂತರ್ಯದಲ್ಲಿ ದ್ವೇಷ ಇತ್ತುಫಿ. ಅದಕ್ಕೆ ಕಾರಣ ಅವಳ ವಿಶೇಷ ಸೌಂದರ್ಯಫಿ. ನಿಮ್ಮ ಬಾಹ್ಯ ರೂಪ ಚೆನ್ನಾಗಿರಲಿಲ್ಲಫಿ. ನಿಮ್ಮ ಗಂಡ ಅವಳ ಸೆರಗನ್ನು ಹಿಡಿದು ತಿರುಗುತ್ತಿದ್ದರು. ಈ ಕಾರಣದಿಂದ ದ್ವೇಷ ಹೆಚ್ಚಾಯಿತು. ರಾತ್ರಿ ಇಲ್ಲಿಗೆ ಬಂದು ಅವಳ ಸೌಂದರ್ಯ ಹಾಳು ಮಾಡಲು ಆ್ಯಸಿಡ್ ಎರಚಿದ್ದೀರ'' ಎಂದು ಕಾನ್‌ಸ್ಟೇಬಲ್ ಕಡೆ ನೋಡಿದನು.

ರಿಪೋರ್ಟ್ ಪರೀಕ್ಷೆ ಮಾಡಿದರು. ಆ್ಯಸಿಡ್ ಸೀಸೆಯ ಮೇಲೆ ಮಧುಮತಿಯ ಬೆರಳು ಗುರುತುಗಳು ಮೂಡಿವೆ ಎಂಬುದು ತಜ್ಞರ ವರದಿಯಿಂದ ಖಚಿತವಾಗಿದೆ.

ಮಧುಮತಿ ಗಾಬರಿ, ಭಯದಿಂದಲೇ ಒಪ್ಪಿದಳು. ''ನಾನು ಆ್ಯಸಿಡ್ ಹಾಕಿದ್ದು ನಿಜ. ಆದರೆ ಅದಕ್ಕಿಂತ ಮೊದಲೇ ಅವಳು ಸತ್ತು ಹೋಗಿದ್ದಳು. ಕಿರುಚಾಟ, ನರಳಾಟ ಕೇಳಿ ಬರಲಿಲ್ಲಫಿ. ಆ್ಯಸಿಡ್ ಎರಚಿದ ಮೇಲೂ ಕೊರಡಿನಂತೆ ಬಿದ್ದಿದ್ದಳು'' ಎಂದು ಹೇಳಿದಳು.

ಗೋಪಾಲನ್‌ಗೆ ತಲೆ ಬಿಸಿಯಾಯಿತು. ಅವನು ಶವ ಇರುವ ಕೊಠಡಿಯ ಎಲ್ಲಾ ಕಡೆ ಅರ್ಧ ಗಂಟೆ ಕಾಲ ಹುಡುಕಾಡಿದನು. ಟೇಬಲ್ ಲಾಕರ್‌ನಲ್ಲಿ ಅಂತಿಮ ಪತ್ರ ದೊರೆಯಿತು.

ಸಿನಿಮಾ ನಟಿ ಪದ್ಮಿನಿ!

ನಾನು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ನನ್ನ ಭಾವ ತಂಗವೇಲನ್ ಕಾರಣ. ನನ್ನನ್ನು ಪಂಜರದ ಪಕ್ಷಿಯನ್ನಾಗಿ ಮಾಡಿದರು. ಹಣದಾಹ, ಆಸ್ತಿ ಬೆಳೆಸುವ ಉದ್ದೇಶದಿಂದ, ಬ್ಲಾಕ್‌ಮೇಲ್ ತಂತ್ರ ಮಾಡಿ ಹೆದರಿಸಿ, ಸ್ಟಾರ್ ಲೆವೆಲ್ ಸೂಳೆಯನ್ನಾಗಿ ಮಾಡಿದರು. ಆದರೂ ಸಹ ಆಸೆಯಾದಾಗಲೆಲ್ಲಾ ಅನುಭವಿಸಿದರು. ಈ ಹೇಸಿಗೆ, ಅಸಹ್ಯಕರ ಬದುಕು ಸಾಕು ಅಂತ ಸಾಯುತ್ತಿದ್ದೇನೆ. ನನ್ನ ಹೆಸರಲ್ಲಿರುವ ಎಲ್ಲಾ ಆಸ್ತಿ ನನ್ನ ಅಭಿಮಾನಿ, ಹೋಟೆಲ್ ಕೆಲಸಗಾರ ಶ್ರೀರಂಗನಿಗೆ ಸೇರಬೇಕು. ☯

2 ☞

ವ್ಯಕ್ತಿಗಳು ಅಚಾನಕ್ಕಾಗಿ ಮೃತದೇಹದ ಮುಂದೆ ಬಂದು ನಿಂತರು.

ರಮೇಶ್ ಪೂಜಾರಿ ಮತ್ತು ಫ್ರಾನ್ಸಿ ಫ್ರಾನ್ಸಿಸ್ ಕುಟಿನ್ಹಾಫಿ. ಇಬ್ಬರೂ ಮುಂಬೈನ ಶಾರ್ಪ್‌ಶೂಟರ್‌ಗಳು.

ಹತ್ಯೆ ನಡೆದಾಗ ಅವರಿಬ್ಬರೂ ಅಲ್ಲಿರಲಿಲ್ಲಫಿ. ಇದ್ದರೆ ಇನ್ನೇನಾಗುತ್ತಿತ್ತೋಫಿ? ಸ್ವಲ್ಪ ಹೊತ್ತು ಅಮರ್ ಮೃತದೇಹದ ಮುಂದೆ ನಿಂತು ಅಂತಿಮ ನಮನ ಸಲ್ಲಿಸಿದರು. ಸಿಟ್ಟಿನಿಂದ ಅವರಿಬ್ಬರೂ ಸಣ್ಣಗೆ ನಡುಗುವುದು ಕಾಣಿಸುತ್ತಿತ್ತುಫಿ. ಕತ್ತಲು ಎಲ್ಲವನ್ನು ಮಸುಕಾಗಿಸಿತ್ತುಫಿ. ಕೊನೆಯ ಬಾರಿ ಎಂಬಂತೆ ಮೃತದೇಹದ ಹಣೆಗೆ ಮುತ್ತಿಟ್ಟ ಅವರಿಬ್ಬರು ಶವದ ಕಿವಿಯೊಳಗೆ ಹೇಳಿದ್ದು ಒಂದೇ ಮಾತು.

''ಹಮ್ ಬದ್ಲಾ ಲೇಂಗ್ ಅಮರ್''

ಹಾಗಂತ ಅವರಿಬ್ಬರ ಕಣ್ಣುಗಳಲ್ಲೊಂದು ಪ್ರಾಮಿಸ್ ಇತ್ತುಫಿ. ರಮೇಶ್ ಪೂಜಾರಿ ಮತ್ತು ಫ್ರಾನ್ಸಿಸ್ ಹಾಗೆ ಪಿಸುಗುಟ್ಟಿದಾಗ ಅಲ್ಲಿ ಗಾಳಿ ಕೂಡ ಅಲುಗುತ್ತಿರಲಿಲ್ಲಫಿ. ಅಂತಹ ಮೌನವಿತ್ತುಫಿ.

ಮಂಗಳೂರು ಅಂಡರ್‌ವರ್ಲ್ಡ್ ಒಂದು ಹೊಸ ತಿರುವು ಪಡೆಯಲಿತ್ತುಫಿ.

(ಮುಂದಿನ ಸಂಚಿಕೆ)

# ಐವರು ಮಹಿಳೆಯರೊಂದಿಗೆ ವಿವಾಹವಾದ್ನಾ ಜೆಸ್ಕಾಂ ನೌಕರ?

ಖುದ್ದು ಎರಡನೇ ಪತ್ನಿಯಿಂದಲೇ ಪತಿಯ ವಿರುದ್ಧ ಠಾಣೆಗೆ ದೂರು. ಮದುವೆ ನಂತರ ನಾಲ್ಕು ವರ್ಷ ಮನೆಯಲ್ಲಿ ಕೂಡಿಹಾಕಿ ಚಿತ್ರಹಿಂಸೆ ನೀಡಿದ ಆರೋಪಮಾಡಿದ್ದಾರೆ. ಪರ ಪುರುಷರ ಜೊತೆ ಸಲುಗೆಯಿಂದ ಇರಲು ಪತಿಯಿಂದಲೇ ಬಲವಂತ ಮಾಡಿದ ಆರೋಪ ನಡಿದಿದೆ.






ಪ್ರಭಾವಿಗಳ ಬಳಿ ತನ್ನ ಕೆಲಸ ಮಾಡಿಸಿಕೊಳ್ಳಲು ಹೆಂಡತಿಯನ್ನೇ ದುರ್ಬಳಕೆ ಮಾಡಿದ್ದಾನೆ. ಇಲ್ಲವಾದ್ರೆ ಹೆಂಡತಿಯ ಮೊದಲ ರಾತ್ರಿ ವೀಡಿಯೋ ಲೀಕ್ ಮಾಡೋದಾಗಿ ಬೆದರಿಕೆಯನ್ನು ಹಾಕುವ ಮೂಲಕ ಭಯ ಉಟ್ಟಿಸಿದ್ದಾನೆ. ರಾಯಚೂರಿನ ಮಾನ್ವಿ ಪಟ್ಟಣದ ಜೆಸ್ಕಾಂ ಕಚೇರಿಯ ಮೇಲ್ವಿಚಾರಕನಾಗಿ ಕೆಲಸ ಮಾಡುವ ಗುರುರಾಜ ಮೇಲೆ ಆರೋಪ ಮಾಡಿದ ಎರಡನೆಯ ಪತ್ನಿ ಅಮೃತ ಹಿರೇಮಠ ಅರೋಪ ಮಾಡಿದರು.

ಸೆಕ್ಸ್ ಮಾಡೋವಾಗ ನನ್ನ ವೀಡಿಯೋ ಮಾಡಿದ್ದಾನೆ ಎಂದು ಮಹಿಳೆ ಅಳಲು ತೋಡಿಕೊಂಡಳು. ಈಗಾಗಲೇ ಮಹಿಳೆ ಸಂಬಂಧಿಕರಿಗೆ ವೀಡಿಯೋ ಕಳಿಸದ್ದಾರೆ ಎಂದು ಆರೋಪ ಮಾಡಿದ್ದರು. ವಿಚ್ಛೇದಿತ ಹಾಗೂ ವಿಧವೆಯರನ್ನೇ ಟಾರ್ಗೆಟ್ ಮಾಡಿ ಮದುವೆಯಾಗುವ ಗುರುರಾಜ ಗೋಕಾಕ್. ಗುರುರಾಜ ಹೇಳಿದ ಕೆಲಸ ಮಾಡದಿದ್ರೆ, ಮಹಿಳೆಗೆ ಹಿಗ್ಗಾಮುಗ್ಗಾ ಥಳಿತ ಮಾಡುತಾನೆ. ಪತಿಯಿಂದ ನೊಂದ ಮಹಿಳೆ 'ಪೋಲಿಸ್ ನ್ಯೂಸ್' ಮುಂದೆ ಅಳಲು ತೋಡಿಕೋಂಡಳು ಅವನ ಮಾತು ಕೇಳದಕ್ಕೆ 12 ಬಾರಿ ನನ್ನ ಮೇಲೆ ಕೊಲೆ ಯತ್ನ ನಡೆದಿದೆ ಎಂದ ಮಹಿಳೆ




ಎಸ್ಪಿ ಪುಟ್ಟಮಾದಯ್ಯ

ಪತಿ ಗುರುರಾಜಗೆ ಕಠಿಣ ಶಿಕ್ಷೆಯಾಗಬೇಕು ಹಾಗೂ ನನಗೆ ರಕ್ಷಣೆ ಬೇಕು ಎಂದ ಮಹಿಳೆ ಕೂಗಾಡಿದ್ದಾಳೆ. ಈಗಾಗಲೇ ಪತಿ ಗುರುರಾಜ ವಿರುದ್ಧ ಸಿಂಧನೂರು ಹಾಗೂ ಮಾನ್ವಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲೆಯನ್ನು ಹೊಂದಿದ್ದಾರೆ. ಜೆಸ್ಕಾಂ ಇಲಾ ಖೆಯಿಂದ ಗುರುರಾಜ್ ಮೇಲೆ ಕ್ರಮ ಕೈಗೊಳ್ಳಲು ಮನವಿ ಮಾಡಿದರು ಕ್ರಮವನ್ನು ಕೈ ಗೊಳ್ಳಲು ಸಾಧ್ಯವಿಲ್ಲ ಎಂದು ಮಾತನಾಡಿದರು.

2013ರಂದು ಹುಬ್ಬಳ್ಳಿಯಲ್ಲಿ ಅ ಮೃತಾ ಹಿರೇಮಠ ಹುಬ್ಬಳ್ಳಿ ಹುಡುಗನ ಮದುವೆ ಮಾಡುತ್ತಾರೆ. ಆದರೆ ವರ್ಷದ ವಳಗೆ ಕೆಲ ಕಾರಣಾಂತರಗಳಿಂದ ವಿಚ್ಛೇದನ ಪಡೆದರು. ವಿಚ್ಛೇದನ ಪಡೆಯವಾಗ ಮೂರು ತಿಂಗಳ ಗರ್ಭಿಣಿಯಾಗಿದ್ದು. ಸಂಸಾರದಲ್ಲಿ ಏರುಪೇರು ಆದರೂ ಪತಿ ಬಂದು ಕರಿಯದ ಕಾರಣ ವಿಚ್ಛೇದನ ಪಡೆದು ಎರಡನೆಯ ಮದುವೆಗೆ ಮುಂದಾದರು. ಆದರೆ ಅಮೃತ ಹಿರೇಮಠ ಮ್ಯಾಟ್ರಮೆನಿಯಲ್ಲಿ ಎರಡನೆಯ ಮದುವೆಗೆ ವರನನ್ನು ಹುಡುಕಾಟ ನಡುಸುವ ಸಮಯದಲ್ಲಿ ತಂದೆ ತಾಯಿ ತೀರಿ ಕೊಂಡರು. ಚಿಕ್ಕಮ್ಮ, ಚಿಕ್ಕಪ್ಪನ ಜತೆ ವಾಸವಿದ್ದ ಅಮೃತಾಗೆ ಮಾನ್ವಿ ಜೆಸ್ಕಾಂ ಇಲಾಖೆಯ ಅಡಿಯಲ್ಲಿ ಕಲಸ ಮಾಡುವ ಗುರುರಾಜ್ ದೋರೆ ನಾಯಕ್ ಪರಿಚಯವಾಗುತ್ತದೆ. ಇಬ್ಬರು ಒಂದಾಗಿ 2021 ಜನವರಿ ತಿಂಗಳಲ್ಲಿ ಮಸ್ಕಿ ತಾಲುಕಾ ಅಮರೇಶ್ವರ ತೀರ್ಥ ಎಂಬ ದೇವಾಲಯದಲ್ಲಿ ಸಾಮೂಹಿಕವಾಗಿ ಮದುವೆಯ ಮೂಲಕ ಒಂದಾದರು. ಮಾನ್ವಿಯಲ್ಲಿ ಬಾಡಿಗೆ ಮನೆಯಲ್ಲಿ ಮೂರು ತಿಂಗಳ ಸಂಸಾರಿಕ ಜೀವನ ಚೆನ್ನಾಗಿ ನಡೆಯಿತು. ಮೊದಲ ಹೆಂಡತಿ ಕ್ಯಾನ್ಸರ್‌ನಿಂದ ಮ್ರುತಪಟ್ಟಿದ್ದಾರೆ ಎಂದು ಸುಳ್ಳು ಹೇಳಿ ಮದುವೆ ಅದರು. ನಂತರ ಮೆದಲ ಪತ್ನಿ ಅಸ್ಕಿಹಾಳ್‌ದಿಂದ ಮಾನ್ವಿಗೆ ಬಂದು ಇಬ್ಬರ ನಡುವೆ ಇರುವ ಸಂಬಂಧಗಳ ಬಗ್ಗೆ ಜಗಳ ಮಾಡಿ ಹೊರ ನಡೆದರು. ಅಂದಿನಿಂದ ಗುರುರಾಜ ಚಿತ್ರಹಿಂಸೆ ನಿಡುತ್ತಾ ಬಂದಿದ್ದಾನೆ. 2024 ಏಪ್ರಿಲ್ ತಿಂಗಳಲ್ಲಿ ಗೋಕಾಕನಲ್ಲಿ ಮೂರನೆ ಮದುವೆ ಮಾಡಿಕೊಳ್ಳುವ ಬಗ್ಗೆ ಮಾಹಿತಿ ಬಂದ ತಕ್ಷಣ ಮಾನ್ವಿ ಪೊಲೀಸ್ ಠಾಣೆಗೆ ದೂರು ನೀಡಿ ಮದುವೆ ನಿಲ್ಲಿಸಲಾಯಿತು. ಈ ಬಗ್ಗೆ ನನಗೆ ರಕ್ಷಣೆ ಮತ್ತು ನ್ಯಾಯ ಕೊಡಿಸುವಂತೆ ಜೆಸ್ಕಾಂ ಯಂಡಿಗೆ, ಪರಿಶಿಷ್ಟ ಪಂಗಡ ಸಂಘದ ಅಧ್ಯಕ್ಷ, ಮಹಿಳಾ ಅಯೋಗಕ್ಕೂ ಮನವಿ ಮಾಡಿದರು ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು ಅಳಲು ತೋಡಿ ಕೊಂಡಳು.


ಪ್ರೆಸ್‌ಮೀಟ್‌ನಲ್ಲಿ ಅಮೃತಾ ಹಿರೇಮಠ

**-ವೀರನಗೌಡ**

---

7 ☞

ಅನುಮತಿ ನೀಡಲು ನಿರಾಕರಿಸಿದ್ದರು. ಇದು ಅವರ ಮೇಲೆ ಕೋಪ ಹೆಚ್ಚಾಗಲು ಕಾರಣವಾಗಿತ್ತು. ಅದಾದ ಬಳಿಕ 2018ರ ಮಾರ್ಚ್ ವೇಳೆಯಲ್ಲಿ ಸಂಪಾಜೆಯಲ್ಲಿ ಬಾರ್ ತೆರೆಯಲು ಇದೇ ಸಂಪತ್ ಕುಮಾರ್ ಹಾಗೂ ಹರಿಪ್ರಸಾದ್ ಮುಂದಾಗಿದ್ದರು. ಈ ಸಂದರ್ಭವೂ ಗ್ರಾಮದಲ್ಲಿ ಬಾರ್ ಬೇಡ ಎಂದು ಬಾಲಚಂದ್ರ ಕಳಗಿ ವಿರೋಧಿಸಿದರಲ್ಲದೆ, ಜನರನ್ನು ಸೇರಿಸಿ ಪ್ರತಿಭಟನೆ ನಡೆಸುವ ಮೂಲಕ ಬಾರ್ಗೆ ಪಡೆದಿದ್ದ ಲೈಸೆನ್ಸ್ ರದ್ದಾಗುವಂತೆ ನೋಡಿಕೊಂಡಿದ್ದರು.

ಬಾರ್ ತೆರೆಯುವ ಮೂಲಕ ಕೈತುಂಬಾ ಹಣ ಸಂಪಾದಿಸಬಹುದು ಎಂದು ಖುಷಿಯಾಗಿದ್ದ ಅವರಿಗೆ ಭಾರೀ ಹೊಡೆತ ಬಿದ್ದಿತು. ಹೀಗಾಗಿ ದ್ವೇಷ ಹೆಚ್ಚಾಗಿತ್ತಲ್ಲದೆ, ತಮ್ಮ ಕೆಲಸಗಳಿಗೆ ಅಡ್ಡ ಬರುತ್ತಿರುವ ಬಾಲಚಂದ್ರ ಕಳಗಿಯನ್ನು ಮುಗಿಸಿಬಿಟ್ಟರೆ ಮುಂದೆ ತಮ್ಮ ಕೆಲಸಕ್ಕೆ ಅಡ್ಡಿ ಆತಂಕ ಬರಲಾರದು ಎಂಬ ತೀರ್ಮಾನಕ್ಕೆ ಬಂದು ಬಿಟ್ಟಿದ್ದರು. ಆದರೆ ಅದು ಸುಲಭವಾಗಿರಲಿಲ್ಲ.

ತಮ್ಮ ಗ್ರಾಮದಲ್ಲಿ ಅಡ್ಡದಾರಿಯಲ್ಲಿ ಏನಾದರೊಂದು ಮಾಡಿ ಹಣ ಸಂಪಾದಿಸಬೇಕೆಂದು ಹೊರಟ ಸಂಪತ್ ಕುಮಾರ್ ಮತ್ತು ಹರಿಪ್ರಸಾದ್‌ಗೆ ಹೆಜ್ಜೆ ಹೆಜ್ಜೆಗೂ ಬಾಲಚಂದ್ರ ಕಳಗಿ ಅಡ್ಡಗಾಲಾಗಿದ್ದರು. ಹೀಗಾಗಿ ಅವರಿಬ್ಬರು ಹೇಗಾದರೂ ಮಾಡಿ ಬಾಲಚಂದ್ರ ಕಳಗಿಯನ್ನು ಮುಗಿಸಲೇ ಬೇಕೆಂಬ ನಿರ್ಧಾರ ಮಾಡಿಯೇ ಬಿಟ್ಟಿದ್ದರು. ಸಿನಿಮಾಗಳಲ್ಲಿ ಕೊಲೆ ಮಾಡಿ ಆಕ್ಸಿಡೆಂಟ್ ಎಂಬಂತೆ ಬಿಂಬಿಸುವ ಸೀನ್‌ಗಳನ್ನು ನೋಡಿದ್ದ ಅವರು ಆ ರೀತಿಯೇ ಮಾಡುವ ನಿರ್ಧಾರಕ್ಕೆ ಬಂದು ಬಿಟ್ಟರಲ್ಲದೆ ಹೇಗೆ? ಎಲ್ಲಿ? ಯಾರ ಮೂಲಕ ಕೆಲಸ ಮಾಡಿಸಬೇಕು? ಎಂಬುದರ ಬಗ್ಗೆ ಕಳೆದೊಂದು ತಿಂಗಳ ಹಿಂದಿನಿಂದಲೇ ಸ್ಕೆಚ್ ಹಾಕತೊಡಗಿದ್ದರು.

ಲಾರಿ ಹರಿಸಿ ಸಾಯಿಸಿದರೆ ಯಾರಿಗೂ ಸಂಶಯ ಬರಲ್ಲ ಎಂಬುದು ಅವರ ಆಲೋಚನೆಯಾಗಿತ್ತು. ಆದರೆ ಯಾರ ಲಾರಿಯನ್ನು ಬಳಸೋದು ಎಂಬ ಚಿಂತೆಯಲ್ಲಿದ್ದ ಅವರಿಗೆ ಮಡಿಕೇರಿಯಲ್ಲಿದ್ದ ಗೆಳೆಯ ಜಯನ್ ಅಲಿಯಾಸ್ ಜಗ್ಗು ನೆನಪಾಗಿದ್ದನು. ಅವನನ್ನು ಭೇಟಿಯಾಗಿ ಮೂವರು ಸೇರಿ ಬಾರ್‌ನಲ್ಲಿ ಎಣ್ಣೆ ಹಾಕುತ್ತಾ ವಿಷಯ ಪ್ರಸ್ತಾಪಿಸಿದ್ದಾರೆ. ಈ ವೇಳೆ ಲಾರಿ ಮೇಲಿನ ಸಾಲ ತೀರಿಸಲಾಗದೆ ಒದ್ದಾಡುತ್ತಿದ್ದ ಜಯನ್ಗೆ ಹಂತಕರು ಒಡ್ಡಿದ ಆಮಿಷ ಕಣ್ಣು ತೆರೆಸುವಂತೆ ಮಾಡಿತ್ತು. ತಮ್ಮ ಕೆಲಸ ಮುಗಿಸಿಕೊಟ್ಟರೆ ಲಾರಿ ಮೇಲಿನ ಸಾಲ ಒಂದೂವರೆ ಲಕ್ಷವನ್ನು ತೀರಿಸುವುದಲ್ಲದೆ, ಕೇಸ್ ಇನ್ನಿತರ ಖರ್ಚು ವೆಚ್ಚಗಳನ್ನು ನಿಭಾಯಿಸುವುದಾಗಿಯೂ ಹೇಳಿದ್ದರು. ಅದಕ್ಕೆ ಒಪ್ಪಿದ ಲಾರಿ ಚಾಲಕ ಜಯನ್ ಕೂಡ ಒಪ್ಪಿಗೆ ಸೂಚಿಸಿದ್ದರಿಂದ ಮೂವರು ಸೇರಿ ಬಾಲಚಂದ್ರ ಕಳಗಿಯನ್ನು ಮುಗಿಸಲು ಹೊಂಚು ಹಾಕುತ್ತಲೇ ಬಂದಿದ್ದರು.




ಅವತ್ತು (2019 ಮಾರ್ಚ್ 19) ಮೊದಲೇ ತೀರ್ಮಾನಿಸಿದಂತೆ ಹಂತಕರು ಬಿಜೆಪಿ ಮುಖಂಡ ಬಾಲಚಂದ್ರ ಕಳಗಿ ಅವರ ಹತ್ಯೆಗೆ ಮುಹೂರ್ತ ಫಿಕ್ಸ್ ಮಾಡಿಯೇ ಬಿಟ್ಟಿದ್ದರು. ಲೋಕಸಭಾ ಚುನಾವಣೆಯ ಓಡಾಟದಲ್ಲಿದ್ದ ಅವರು ಪಕ್ಷದ ಕೆಲಸದ ನಿಮಿತ್ತ ಮಡಿಕೇರಿಗೆ ಬಂದಿದ್ದರು. ಅವರನ್ನು ಹಿಂಬಾಲಿಸಿಕೊಂಡು ಸ್ವಿಫ್ಟ್ ಕಾರಿ(ಕೆಎ.19. ಎಂ.ಇ. 2687)ನಲ್ಲಿ ಸಂಪತ್ ಕುಮಾರ್ ಮತ್ತು ಹರಿಪ್ರಸಾದ್ ಬಂದಿದ್ದರು. ಜತೆಗೆ ಲಾರಿ ಚಾಲಕ ಜಯನ್‌ಗೆ ಫೋನ್ ಮಾಡಿ ಲಾರಿಯೊಂದಿಗೆ ಅಲರ್ಟ್ ಆಗಿರುವಂತೆ ಹೇಳಿದ್ದರು. ಕಳಗಿ ಎಲ್ಲೆಲ್ಲ ಹೋಗುತ್ತಾರೆ ಏನೇನು ಮಾಡುತ್ತಾರೆ ಎಂಬುದರ ಬಗ್ಗೆ ಹಿಂಬಾಲಿಸಿದ ಹಂತಕರು ಮನೆಗೆ ಹಿಂತಿರುಗುವುದನ್ನೇ ಕಾದಿದ್ದಾರೆ.

ಮಡಿಕೇರಿಯಿಂದ ಸಂಜೆ ವೇಳೆಗೆ ಸಂಪಾಜೆ ಕಡೆಗೆ ತೆರಳುತ್ತಾರೆ ಎಂಬುದು ಮೊದಲೇ ಗೊತ್ತಿದ್ದರಿಂದ ಸಂಜೆಯಾಗುತ್ತಿದ್ದಂತೆಯೇ ಮಡಿಕೇರಿ ಲಾರಿ ನಿಲ್ದಾಣದಿಂದ ಚಾಲಕ ಜಯನ್‌ಗೆ ಫೋನ್ ಮಾಡಿ ಅಲ್ಲಿಂದ ಹೊರಡುವಂತೆ ಹೇಳಿದ್ದಾರೆ. ಅದರಂತೆ ಆತ ಲಾರಿಯನ್ನು ತೆಗೆದು ಕೊಂಡು ಮಡಿಕೇರಿಯಿಂದ ಮಂಗಳೂರು ರಸ್ತೆ ಮೂಲಕ ಮದೆನಾಡು ಕಡೆಗೆ ತೆರಳಿ ಅಲ್ಲಿ ಸುಮ್ಮನೆ ಲಾರಿ ತೊಳೆಯುವ ನಾಟಕವಾಡುತ್ತಾ ಮಡಿಕೇರಿಯಿಂದ ಹಂತಕರು ನೀಡುವ ಮಾಹಿತಿಗಾಗಿ ಕಾದಿದ್ದಾನೆ. ಮಾಹಿತಿ ನೀಡಿದರೆ ಮಡಿಕೇರಿ ಕಡೆಗೆ ಲಾರಿಯನ್ನು ಚಾಲಿಸಿ ಮಡಿಕೇರಿ ಕಡೆಯಿಂದ ಬರುವ ಬಾಲಚಂದ್ರ ಕಳಗಿಯ ವ್ಯಾನ್‌ಗೆ ಡಿಕ್ಕಿ ಹೊಡೆಯುವುದು ಅವರ ಉದ್ದೇಶವಾಗಿತ್ತು. ಆದರೆ ಅವತ್ತು ನೇರವಾಗಿ ಕಾಟಕೇರಿ ಮೂಲಕ ಮಂಗಳೂರು ರಸ್ತೆಯಲ್ಲಿ ತೆರಳದ ಬಾಲಚಂದ್ರ ಕಳಗಿ ಮೂರ್ನಾಡು ರಸ್ತೆಯಲ್ಲಿ ತೆರಳಿದ್ದಾರೆ. ತಕ್ಷಣ ವಿಚಲಿತಗೊಂಡ ಹಂತಕರು ಮಡಿಕೇರಿಯಿಂದ ಸ್ವಿಫ್ಟ್ ಕಾರಿನಲ್ಲಿ ಹಿಂಬಾಲಿಸಿದ್ದಾರೆಯಲ್ಲದೆ, ಕ್ಷಣ ಕ್ಷಣದ ಮಾಹಿತಿಯನ್ನು ಲಾರಿ ಚಾಲಕ ಜಯನ್ಗೆ ನೀಡಿದ್ದಾರೆ.

ಬಾಲಚಂದ್ರ ಕಳಗಿ ಅವರು ಮೇಕೇರಿ ಮೂಲಕ ತಾಳತ್ ಮನೆ ರಸ್ತೆಗಾಗಿ ಮಂಗಳೂರು ರಸ್ತೆಯನ್ನು ಸೇರಿ ಸಂಪಾಜೆ ಕಡೆಗೆ ತೆರಳುತ್ತಾರೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಅತ್ತ ಚಾಲಕ ಜಯನ್‌ಗೆ ತಿಳಿಸಿದ್ದರಿಂದ ಆತ ಲಾರಿಯೊಂದಿಗೆ ತಾಳತ್ ಮನೆ ರಸ್ತೆಯಲ್ಲಿ ಬಂದು ನೇರವಾಗಿ ಬಾಲಚಂದ್ರ ಕಳಗಿ ಅವರ ವ್ಯಾನ್ಗೆ ಡಿಕ್ಕಿ ಹೊಡೆದಿದ್ದಾನೆ. ಆ ನಂತರ ಲಾರಿಯನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದನು. ಆ ನಂತರ ಪೊಲೀಸರು ಮೂವರು ಹಂತಕರನ್ನು ಬಂಧಿಸಿ ಆರೋಪಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಸದ್ಯ ಇಬ್ಬರಿಗೆ ಜೀವಾವಧಿ ಶಿಕ್ಷೆ ವಿಧಿಸಿ ನ್ಯಾಯಾಲಯ ತೀರ್ಪು ನೀಡಿದೆ ಎನ್ನುವುದೇ ಮೃತ ಬಾಲಚಂದ್ರ ಕಳಗಿ ಅವರ ಕುಟುಂಬಕ್ಕೆ ನೆಮ್ಮದಿ ತಂದಿದೆ. ☯

# ರೌಡಿಯನ್ನು ಕೊಡಲಿ ಮತ್ತು ತಲವಾರ್‌ಗಳಿಂದ ಕೊಚ್ಚಿ ಕೊಚ್ಚಿ ಬರ್ಬರವಾಗಿ ಕೊಲೆಗೈದು ಪರಾರಿಯಾಗಿದ್ದ 13 ಜನರ ಬಂಧನ

9 ☞

ಹೇಗೋ ಒಂದು ವರ್ಷದ ಗಡಿಪಾರು ಶಿಕ್ಷೆ ಮುಗಿಸಿಕೊಂಡು ಕಳೆದ ಆಗಸ್ಟ್‌ನಲ್ಲಿ ನಿಪ್ಪಾಣಿಯಲ್ಲಿ ವಾಸ್ತವ್ಯ ಹೂಡಿಕೊಂಡು ಮತ್ತೇ ನಿಧಾನವಾಗಿ ಬಾಲ ಬಿಚ್ಚತೊಡಗಿದ್ದನು. ಇದನ್ನರಿತ ಸಿಪಿಐ ಬಿ.ಎಸ್. ತಳವಾರ ಮತ್ತು ನಗರ ಠಾಣೆಯ ಪಿಎಸ್‌ಐ ಉಮಾದೇವಿ ಅಶ್ರಫ್ ಅಲಿ ಮತ್ತು ಆತನ ಅಣ್ಣ ಸೈಫ್ ಅಲಿಗೆ ಸೂಕ್ತ ಎಚ್ಚರಿಕೆಯನ್ನು ನೀಡಿದ್ದರು. ಆದರೆ ಎಚ್ಚರಿಕೆಯನ್ನು ಧಿಕ್ಕರಿಸಿದ ಪರಿಣಾಮ ಅಶ್ರಫ್ ಅಲಿ ಬೀದಿಯಲ್ಲಿ ನಾಯಿ ಸಾವು ಕಂಡನು.

**ರವಿ ಈರಣ್ಣ ಶಿರಗಾಂವೆಗೆ ಸ್ಕೇಚ್...**

ಪಾತಕಿ ಅಶ್ರಫ್ ಅಲಿ ಒಂದು ತರದ ಅಕ್ಟೋಪಸ್ ಜಾತಿಗೆ ಸೇರಿದವನು. ತಾನು ಕೊಲೆ ಮಾಡಿದ್ದ ಅಭಿಷೇಕ ದತ್ತವಾಡೆಯ ಪರಮ ಸ್ನೇಹಿತನಾಗಿದ್ದ ರವಿ ಈರಣ್ಣ ಶಿರಗಾಂವೆಯನ್ನು ಅಶ್ರಫ್ ಅಲಿ ಟಾರ್ಗೆಟ್ ಮಾಡಿದ್ದನು. ರವಿ ಶಿರಗಾಂವೆ ಮತ್ತು ಸ್ನೇಹಿತರು ಮೊದಲೇ ಅಶ್ರಫ್ ಅಲಿಯನ್ನು ತರಿದು ಹಾಕಲು ಪ್ಲ್ಯಾನ್ ರೂಪಿಸಿದ್ದರು. ಅವರೆಲ್ಲ ಸಮಯ ಸಂದರ್ಭಕ್ಕಾಗಿ ಕಾಯ್ದು ಕುಳಿತಿದ್ದರು. ಒಂದು ರೀತಿಯಲ್ಲಿ ರವಿಯು ಪ್ಲ್ಯಾನರ್ ಆಗಿದ್ದನು. ಅಶ್ರಫ್ ಅಲಿ ತನ್ನ ಕೊಲೆಗೆ ಸ್ಕೇಚ್ ರೂಪಿಸುತ್ತಿದ್ದಾನೆ ಎಂದರಿತು ಕೊಂಡು ರವಿ ತನ್ನ ಸ್ನೇಹಿತರೊಂದಿಗೆ ತಣ್ಣಗೆ ಕೊಲೆಯ ಸಂಚು ಹೂಡಿದನು. ಅಶ್ರಫ್ ಅಲಿಯಿಂದ ನಾವು ಬಚಾವ್ ಆಗಬೇಕೆಂದರೆ ಆತ ಸಾಯಲೇಬೇಕು ಎಂಬ ಸಿದ್ಧಾಂತಕ್ಕೆ 13 ಜನ ಸ್ನೇಹಿತರು ಬಂದಿದ್ದರು.



ಎಎಸ್‌ಐ ಅಸ್ಗರ ಅಲಿ ತಹಶೀಲದಾರ

**ಅಯಾನ್ ಯಕ್ಸಂಬಿಯ ಬರ್ತ್‌ಡೇ...**

ಇತ್ತೀಚಿಗೆ ಪಾತಕಿ ಅಶ್ರಫ್ ಅಲಿ ಮೈ ತುಂಬಾ ಕಣ್ಣಾಗಿರಿಸಿಕೊಂಡು ತಿರುಗುತ್ತಿದ್ದನು. ಅಂದು ಅಕ್ಟೋಬರ್ 02ನೇ ತಾರೀಖು ದೇಶದಲ್ಲೆಡೆ ಗಾಂಧಿ ಜಯಂತಿ ಮತ್ತು ಲಾಲಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಗಿತ್ತುಘಿ. ಅದೇ ದಿನ ತನ್ನ ಹಳೆಯ ಪಾತಕಿ ಸ್ನೇಹಿತನಾಗಿದ್ದ ಅಯಾಜ್ ಹಸನ್ ಯಕ್ಸಂಬಿಯ ಬರ್ಥ್‌ಡೇ ಇತ್ತುಘಿ. ಅದರ ಆಚರಣೆಗೆಂದು ಭೀಮನಗರದಲ್ಲಿನ ಯಕ್ಸಂಬಿ ಹತ್ತಿರ ಬಂದಿದ್ದನು. ಸ್ವಲ್ಪ ಹೊತ್ತು ಮುನ್ಸಿಪಲ್ ಹೈಸ್ಕೂಲ್ ಬಳಿ ಇರುವ ಉರ್ದು ಶಾಲೆಯ ಗ್ರೌಂಡ್ ಹತ್ತಿರ ತನ್ನ ಸ್ನೇಹಿತರ ಜೊತೆಗೆ ಪಾತಕಿ ಅಶ್ರಫ್ ಹರಟೆ ಹೊಡೆಯುತ್ತ ಕುಳಿತಿದ್ದನು. ಅದಾಗಲೇ ಈತನ ಚಲವ-ವಲನಗಳ ಮೇಲೆ ಸಂಪೂರ್ಣ ನಿಗಾ ವಹಿಸಿದ್ದ ಅಮೀತ ಅವಿನಾಶ ಮಾನೆ, ಶಾಂತನು ಅಶೋಕ ಚೌಗುಲೆ ಇವರಿಬ್ಬರು ಇನ್ನುಳಿದ ತಮ್ಮ ಸ್ನೇಹಿತರಿಗೆ ಅದರಲ್ಲೂ ಪ್ರಮುಖವಾಗಿ ರವಿ ಈರಣ್ಣ ಶಿರಗಾಂವೆಗೆ ಸುದ್ದಿ ಮುಟ್ಟಿಸಿ 'ತಡಮಾಡದೇ ಬೇಗ ಬಂದರೆ ಇಂದು ಅಶ್ರಫ್‌ನನ್ನು ಬಲಿ ಹಾಕಬಹುದು' ಎಂದರು.

**ಪಾತಕಿ ಅಶ್ರಫ್ ಅಲಿಯ ಬರ್ಬರ ಕೊಲೆ...**

ಸ್ನೇಹಿತ ಅಯಾನ್ ಯಕ್ಸಂಬಿಯ ಬರ್ಥ್‌ಡೇ ಮುಗಿಸಿ ಬಡಾಖಾನಾ ಗಡದ್ದಾಗಿ ತಿಂದು ತೇಗಬೇಕೆಂಬ ಆಸೆಯಿಂದ ಕುಳಿತಿದ್ದನು. ಸಮಯ ಆಗಲೇ ರಾತ್ರಿ 8-30 ಆಗುತ್ತ ಬಂದಿತ್ತುಘಿ. ಇತ್ತ ಮೋಟಾರ್ ಬೈಕ್‌ಗಳ ಮೇಲೆ ಒಮ್ಮೆಲೇ ಬಂದ ಸ್ನೇಹಿತರು ಪಾತಕಿ ಅಶ್ರಫ್ ಅಲಿಯನ್ನು ತಪ್ಪಿಸಿಕೊಳ್ಳದಂತೆ ಸುತ್ತುವರೆದು ನಿಂತುಕೊಂಡರು. ಆಗ ಅಶೋಕ ಬೇಲೆಕರ, ಓಂಕಾರ ವಿನೋದ ಕಾಟಕರ, ಪ್ಲ್ಯಾನರ್ ರವಿ ಈರಣ್ಣ ಶಿರಗಾಂವೆ ಮುಂದೆ ಬಂದು 'ಏನೋ... ಪೋದರಿಚಾಧಿನಿಂದ ಬಾಳ ಆಗೇತಿ ನಿಮ್ಮವ್ವನ... ಇಂದ ನಿನ್ನ ಖಲಾಸ್ ಮಾಡ ಬಿಡ್ತೀವಿ' ಎಂದಿದ್ದಾರೆ. ಆಗ ಜೀವಭಯದಿಂದ ನರಪೇತಲ ಅಶ್ರಫ್ ಅಲಿ 'ಏ... ಬಿಟ್ಟಬಿಡರಿ ಅಣ್ಣಾಘಿ... ನಾ ಈವತ್ತಿನಿಂದ ನಿಮ್ಮ ಉಸಾಬರಿ ಮಾಡುದುಲ್ಲಾಘಿ... ಮತ್ತ ನಿಪ್ಪಾಣಿ ಒಳಗೆ ಇರುದುಲ್ಲಘಿ. ಇದೊಂದ ಸಲ ಮಾಫಿ ಮಾಡರಿ' ಎಂದು ಕೈ ಮುಗಿದನು. ಮೊದಲೇ ನಿರ್ಧರಿಸಿದಂತೆ ಸ್ನೇಹಿತರೆಲ್ಲ ಸೇರಿಕೊಂಡು ತಲವಾರ್‌ಗಳು, ರಾಡ್‌ಗಳು, ಗುಪ್ತಿ ಎಂಬ ಮಾರಕಾಸ್ತ್ರಘಿ, ಕೊಡಲಿಯಿಂದ ಅಶ್ರಫ್‌ನ ಮೇಲೆ ಮುಗಿಬಿದ್ದು ಬರ್ಬರವಾಗಿ ಮನಬಂದಂತೆ ಕೊಚ್ಚಿಘಿ... ಕೊಚ್ಚಿ ಕೊಲೆಗೈದರು. ಬರ್ಬರ ದಾಳಿಗೆ ಅಶ್ರಫ್‌ನ ಎರಡು ಮುಂಗೈಗಳು ನೇತಾಡುತ್ತಿದ್ದವು. ತಮ್ಮ ಸ್ನೇಹಿತ ಅಭಿಷೇಕ ದತ್ತವಾಡೆಯನ್ನು ಕ್ರೂರವಾಗಿ ಕೊಲೆಗೈದಿದ್ದಂತೆ ಅಶ್ರಫ್‌ನನ್ನು ಅಷ್ಟೇ ಬರ್ಬರವಾಗಿ ಕೊಲೆಗೈದು ಸ್ನೇಹಿತನ ಕಗ್ಗೊಲೆಗೆ ಪ್ರತೀಕಾರ ತೀರಿಸಿಕೊಂಡು ರಣಕೇಕೆ ಹಾಕುತ್ತ ಪರಾರಿಯಾದರು. ಸಿನಿಮೀಯ ರೀತಿ ನಡೆದ ಬರ್ಬರ ಕೊಲೆ ಇದಾಗಿತ್ತುಘಿ.




ಅಣ್ಣ ಸೈಫ್ ಅಲಿ ಜತೆ ಅಶ್ರಫ್ ಅಲಿ ನಗಾರ್ಜಿ (ಇಬ್ಬರು ಕ್ರಿಮಿನಲ್‌ಗಳು)

ಅಶ್ರಫ್ ಅಲಿ ಸತ್ತಿದ್ದಾನೆಂದು ಸ್ನೇಹಿತರೆಲ್ಲ ಪರಾರಿ ಆಗಿದ್ದರು. ಆದರೆ ಕುಟುಕು ಜೀವ ಹಿಡಿದು ಸಣ್ಣದಾಗಿ ಅಶ್ರಫ್ ನರಳುತ್ತಿದ್ದನು. ನಗರ ಹಾಗೂ ಗ್ರಾಮೀಣ ಪೊಲೀಸ್ ಠಾಣೆಗಳ ಕೂಗಳತೆಯಲ್ಲಿ ಈ ಭೀಕರ ಘಟನೆ ನಡೆದಿದೆ. ಸುದ್ದಿ ತಿಳಿದ ಅಶ್ರಫ್ ಅಲಿಯ ಮನೆಯವರು ಧಾವಿಸಿ ಬಂದು ಕುಟುಕು ಜೀವ ಹಿಡಿದಿದ್ದ ಅಶ್ರಫ್‌ನನ್ನು ಬದುಕಿಸಲು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದಾಗ ಅಲ್ಲಿನ ವೈದ್ಯರು ಪರಿಸ್ಥಿತಿಯ ಗಂಭೀರತೆ ಅರಿತುಕೊಂಡು ಹೆಚ್ಚಿನ ಚಿಕಿತ್ಸೆಗೆ ಕೊಲ್ಹಾಪುರದ ಸಿಪಿಆರ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ತಿಳಿಸಿದರು. ಅದರಂತೆ ಕೊಲ್ಹಾಪುರಕ್ಕೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಅಶ್ರಫ್ ಕೊನೆಯುಸಿರು ಎಳೆದಿದ್ದನು. ನವರಾತ್ರಿ ಆರಂಭದ ಮುನ್ನಕ್ಕೂ ಅಶ್ರಫ್ ಕೊಲೆಯಾಗಿ ಹಂತಕ ಸ್ನೇಹಿತರು ಜೈಲು ಸೇರಿದ್ದು ವಿಪರ್ಯಾಸವೇ ಸರಿ...

**ಪೊಲೀಸರಿಗೆ ದೂರು...**

ಕೊಲೆಯಾದ ಅಶ್ರಫ್ ಅಲಿ ನಗಾರ್ಜಿಯ ಅಣ್ಣ ಸೈಫ್ ಅಲಿ ನಿಪ್ಪಾಣಿ ಪೊಲೀಸ್ ಠಾಣೆಗೆ ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ಪಿಎಸ್‌ಐ ಉಮಾದೇವಿ ಅವರನ್ನು ಕಂಡು ತನ್ನ ತಮ್ಮ ಅಶ್ರಫ್ ಅಲಿ ನಗಾರ್ಜಿಯನ್ನು ಬರ್ಬರವಾಗಿ ಕೊಲೆ ಮಾಡಲಾಗಿದೆ. ಈ ಕೊಲೆಯನ್ನು 1) ಅತೀಶ ಅಶೋಕ ಬೇಲೆಕರ, 2) ಓಂಕಾರ ವಿನೋದ ಕಾಟಕರ, 3) ರವಿ ಈರಣ್ಣ ಶಿರಗಾಂವೆ, 4) ರೋಹಿತ ಪ್ರಶಾಂತ ಪಠಾಡೆ, 5) ಅಜೀತ ಅ॥ ಅಜಿಂಕ್ಯ ಅಪ್ಪಾಸಾಹೇಬ ನಾಯಿಕ, 6) ಓಂ ದಿಲೀಪ ಕಂದಲೆ, 7) ಪಾರಸ ಸಂಜಯ ಶ್ರೀಖಂಡೆ, 8) ಹೃತೀಕ್ ಸದಾಶಿವ ಪಾವಲೆ, 9) ಅರಬಾಜ್ ಸಯ್ಯದ್, 10) ಅನೀಕೇತ ಕೃಷ್ಣಾ ಘೋಡಗೇರಿ, 11) ಅಮೀತ ಅವಿನಾಶ ಮಾನೆ, 12) ಶಾಂತನು ಚೌಗುಲೆ, 13) ಗೋಸಾವಿ ಮಾಡಿದ್ದಾರೆ ಎಂದು ವಿವರವಾದ ದೂರನ್ನು ನೀಡಿದನು.



ಸಿಬ್ಬಂದಿಗಳಾದ ಆರ್.ಜಿ. ದಿವಟೆ, ಎಂ.ಬಿ. ಕಲ್ಯಾಣಿ, ಪಾರೀಶ ಗಸ್ತಿ, ವಿನೋದ ಕಂಗ್ರಾಳಕರ



ಸಿಬ್ಬಂದಿಗಳಾದ ಸುದರ್ಶನ ಅಸ್ಕಿಘಿ, ಬಿ.ಎಸ್. ನೇರ್ಲಿ, ಎಂ.ಎಂ. ನದಾಫ, ಅಮರ ಚಂದನ ಶಿವ

ಪಿಎಸ್‌ಐ ಉಮಾದೇವಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಸಿಪಿಐ ಬಿ.ಎಸ್. ತಳವಾರ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾರ್ಯಾಚರಣೆಗೆ ಸಿದ್ಧರಾದರು. ಸಿಪಿಐ ಬಿ.ಎಸ್. ತಳವಾರ, ಚಿಕ್ಕೋಡಿ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರು ಘಟನಾ ಸ್ಥಳಕ್ಕೆ ಧಾವಿಸಿ ಬಂದು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದರು. ನಂತರ ಸಿಪಿಐ ಬಿ.ಎಸ್. ತಳವಾರ ಅವರು ಅಶ್ರಫ್ ಅಲಿಯ ಶವದ ಪಂಚನಾಮೆ ಜರುಗಿಸಿ ಸಂಬಂಧಪಟ್ಟವರ ಹೇಳಿಕೆಗಳನ್ನು ಪಡೆದುಕೊಂಡರು. ಪ್ರಕರಣ ಕುರಿತಾಗಿ ಸಂಪೂರ್ಣ ಮಾಹಿತಿಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ ಅವರಿಗೆ ತಿಳಿಸಿ ಅವರಿಂದ ನಿರ್ದೇಶನ ಪಡೆದುಕೊಂಡರು.

**ಹಿರಿಯ ಅಧಿಕಾರಿಗಳ ಭೇಟಿ...**

ಅಶ್ರಫ್ ಅಲಿ ನಗಾರ್ಜಿ ಕೊಲೆ ಪ್ರಕರಣ ನಿಪ್ಪಾಣಿಯಲ್ಲಿ ಮಾರ್ದನಿಸಿತ್ತುಘಿ. ಸುದ್ದಿ ಅರಿತುಕೊಂಡು ಸ್ವತಃ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ನಿಪ್ಪಾಣಿಯಲ್ಲಿ ಮೊಕ್ಕಾಂ ಹೂಡಿ ಹಂತಕರ ಪತ್ತೆಗೆ ವಿಶೇಷ ತನಿಖಾ ತಂಡವನ್ನು ರಚಿಸಿದರು.

**ವಿಶೇಷ ತನಿಖಾ ತಂಡ ಕಾರ್ಯಾಚರಣೆ...**

ಚಿಕ್ಕೋಡಿಯ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ನಿರ್ದೇಶನದಲ್ಲಿ ಸಿಪಿಐ ಬಿ.ಎಸ್. ತಳವಾರ ನೇತೃತ್ವದಲ್ಲಿ ನಗರ ಪಿಎಸ್‌ಐ ಉಮಾದೇವಿ, ಗ್ರಾಮೀಣ ಠಾಣೆಯ ಪಿಎಸ್‌ಐ ಶಿವರಾಜ ನಾಯಿಕವಾಡಿ, ಬಿಸಿಪಿಎಸ್ ಠಾಣೆಯ ಪಿಎಸ್‌ಐ ರಮೇಶ ಪವಾರ್, ಎಎಸ್‌ಐ ಅಸ್ಗರ ಅಲಿ ತಹಶೀಲದಾರ, ಸಿಬ್ಬಂದಿಗಳಾದ ಆರ್.ಜಿ. ದಿವಟೆ, ಎಂ.ಬಿ. ಕಲ್ಯಾಣಿ, ಪಾರೀಶ ಗಸ್ತಿಘಿ, ವಿನೋದ ಕಂಗ್ರಾಳಕರ, ಸುದರ್ಶನ ಅಸ್ಕಿಘಿ, ಬಿ.ಎಸ್. ನೇರ್ಲಿ, ಎಂ.ಎಂ. ನದಾಫ, ಅಮರ ಚಂದನಶಿವ ಒಳಗೊಂಡಂತೆ ತಂಡ ರಚಿಸಿ ಹಂತಕರಿಗೆ ಬಲೆ ಬೀಸಲಾಯಿತು.

**12 ಜನ ಹಂತಕರ ಬಂಧನ...**

ಅಂದುಕೊಂಡಂತೆ ವಿಶೇಷ ತನಿಖಾ ತಂಡದ ನೇತೃತ್ವ ವಹಿಸಿದ ಸಿಪಿಐ ಬಿ.ಎಸ್. ತಳವಾರ, ಪಿಎಸ್‌ಐಗಳಾದ ಉಮಾದೇವಿ, ಶಿವರಾಜ ನಾಯಿಕವಾಡಿ, ರಮೇಶ ಪವಾರ್ ಮತ್ತು ಸಿಬ್ಬಂದಿಗಳು ಖಚಿತ ಮಾಹಿತಿ ಆಧರಿಸಿ ಕೊಲ್ಹಾಪೂರ, ಸಾಂಗಲಿ ಜಿಲ್ಲೆಗಳಲ್ಲಿ ತಂಡಗಳಾಗಿ ತಿರುಗಿ ಎರಡು ದಿನದಲ್ಲಿ 12 ಜನ ಹಂತಕರನ್ನು ಬಂಧಿಸಿದ್ದು ವಿಶೇಷವಾಗಿದೆ. ಇದರಲ್ಲಿ ಓರ್ವ ಹಂತಕ ಗೋಸಾವಿ ತಲೆಮರೆಸಿಕೊಂಡಿದ್ದು ಆತನ ಪತ್ತೆಗೆ ವ್ಯಾಪಕ ಜಾಲ ಬೀಸಲಾಗಿದೆ. ಬಂಧಿತರಿಂದ ಕೊಲೆಗೆ ಬಳಸಿದ ಮಾರಕಾಸ್ತ್ರಗಳು, ರಕ್ತಸಿಕ್ತ ಬಟ್ಟೆಗಳನ್ನು ಜಪ್ತಿ ಮಾಡಲಾಗಿದ್ದುಘಿ, ಆರೋಪಿಗಳನ್ನು ನ್ಯಾಯಾಂಗದ ವಶಕ್ಕೆ ಒಪ್ಪಿಸಿದಾಗ ನ್ಯಾಯಾಧೀಶರು ಅವರನ್ನು ಜೈಲಿಗಟ್ಟಿ ಆದೇಶ ಮಾಡಿದ್ದಾರೆ. ☯

ಪಾತಕ ಪ್ರಪಂಚ

# ಡೇಂಜರಸ್ ಮ್ಯಾಡ್

ದೇಶ-ಭಾರತ. ಸ್ಥಳ-ನವದೆಹಲಿ.

ಕಾಲಾವಧಿ-2010ರಿಂದ 2012.

ಈ ಪ್ರಪಂಚದಲ್ಲಿ ಎಂತೆಂತಹ ವಿಲಕ್ಷಣ, ವಚಿತ್ರ ಮತ್ತು ಅಸಹಜ, ಅವಲಕ್ಷಣ ಮನೋಭಾವದ ವ್ಯಕ್ತಿಗಳಿರುತ್ತಾರೆ ಎಂಬುದು. ಆ ದೇಶಗಳಲ್ಲಿ ಬಹಿರಂಗಗೊಂಡಿರುವ ಘಟನೆಗಳಿಂದ ತಿಳಿಯುತ್ತದೆ.

ಕೆಲವರು ಮನೋ ದುರ್ಬಲತೆಯಿಂದ ಯಾವುದೋ ಭ್ರಾಮಕ ಭ್ರಮೆಗೆ ಒಳಗಾಗಿ ತುಂಬಾ ಅಪಾಯಕಾರಿಗಳಾಗಿ ಬದಲಾಗಿರುತ್ತಾರೆ. ಅವರು ಒಂದು ರೀತಿಯಲ್ಲಿ ಭಾವ ಉನ್ಮಾದಕ್ಕೆ ಒಳಗಾಗಿರುತ್ತಾರೆ. ಅಂತಹ ಘಟನೆ ಭಾರತದ ರಾಜಕೀಯ ಕೇಂದ್ರ ಸ್ಥಳ ಆಗಿರುವ ನವದೆಹಲಿಯಲ್ಲಿ ನಡೆದಿದೆ.

●●●

ಅವನ ಹೆಸರು ಕೇಸರಿ ಶರ್ಮ ಮತ್ತು ಪ್ರಾಯ ಮುವತ್ತೈದು. ದೆಹಲಿಯ ಆಗರ್ಭ ಶ್ರೀಮಂತರಲ್ಲಿ ಇವನು ಪ್ರಾಮುಖ್ಯತೆ ಪಡೆದಿದ್ದಾನೆ. ಚುನಾವಣೆಯ ಕಾಲದಲ್ಲಿ ಗೆಲ್ಲುವ ಪಕ್ಷದವರಿಗೆ ತುಂಬಾ ಧಾರಾಳವಾಗಿ ಪಾರ್ಟಿ ಫಂಡ್ ಕೊಡುತ್ತಾನೆ.

ಕೇಸರಿ ಶರ್ಮ ವಿಚಿತ್ರ ಮತ್ತು ವಿಲಕ್ಷಣ ಸ್ವಭಾವದ ಮನುಷ್ಯಫಿ. ಅವನು ಯವಾಗ, ಯಾವ ರೀತಿ ಬದಲಾಗುತ್ತಾನೆ ಎಂಬುದನ್ನುಫಿ, ಅವನ ಕುಟುಂಬದ ಹತ್ತಿರದ ಸಂಬಂಧಿಕರಿಗೆ ಆಗಲಿ ಅಥವಾ ಆತ್ಮೀಯರಿಗೇ ಆಗಲಿ ತಿಳಿದಿಲ್ಲ ಎಂಬುದು ವಾಸ್ತವ ಸಂಗತಿ. ಇದು ಪ್ರಾಯೋಗಿಕ ಸತ್ಯಫಿ.

ಕೇಸರಿ ಶರ್ಮನಿಗೆ ವಿವಾಹ ಆಗಿಲ್ಲಫಿ. ಆಗುವುದೂ ಇಲ್ಲಫಿ. ಅವನು ಪುರುಷಹೀನ ಅಲ್ಲಫಿ. ಆದರೂ ಮದುವೆ ಆಗಲಾರ. ಮದುವೆ ವಿಚಾರದಲ್ಲಿ ಯಾರಾದರೂ ಬಲವಂತ ಮಾಡಿದರೆ ರೇಗಿ ಬಿಡುತ್ತಾನೆ.

ರಾತ್ರಿ ಎಂಟು ಗಂಟೆಯ ಸೆಕೆಂಡ್ ಸ್ಟೋರ್‌ನಲ್ಲಿರುವ ಬೆಡ್‌ರೂಮನ್ನು ಸೇರಿಕೊಂಡರೆ, ಮರುದಿವಸ ಬೆಳಿಗ್ಗೆ ಹೊರಗೆ ಬರುತ್ತಾನೆ.

ನಿಬಂಧನೆ ಏನು? ಯಾರೇ ಆಗಲಿ ಬಂಗಲೆಯ ಸೆಕೆಂಡ್ ಫ್ಲೋರ್‌ಗೆ ಹೋಗಬಾರದು.

ಆ ರೂಮಲ್ಲಿ ಏನು ಮಾಡುತ್ತಾನೆ? ಇದು ಟಾಪ್ ಸೀಕ್ರೇಟ್. ಯಾಕೆ ಅಂದರೆ ಸೌಂಡ್ ಪ್ರೂವ್ ಆಗಿರುವ ಆ ಕೊಠಡಿಯಿಂದ ಮಾತುಗಳು ಹೊರಗೆ ಹೇಳುವುದಿಲ್ಲಫಿ.

ದೃಶ್ಯಫಿ... ಒಳಗಿನ ದೃಶ್ಯ ಕಾಣದ ರೀತಿಯಲ್ಲಿ ಎಲ್ಲಾ ಕವರ್ ಮಾಡಲಾಗಿದೆ. ಅವನು ಬೆಡ್‌ರೂಮಿಗೆ ಹೋಗುವುದರಲ್ಲಿ ಎಲ್ಲಾ ರೆಡಿಯಾಗಿರಬೇಕು.

ಫಾರಿನ್ ಡ್ರಿಂಕ್ಸ್‌ಫಿ. ಮೊಲ ಅಥವಾ ಜಿಂಕೆ ಮಾಂಸದ ಸ್ಪೆಷಲ್ ತಂದೂರಿ. ಫ್ರೂಟ್ ಸಾಲಡ್. ಸಿಗರೇಟ್ ಪ್ಯಾಕ್.

ರೂಮಿನೊಳಗೆ ಹೋಗಿ ಡೋರ್‌ಲಾಕ್ ಮಾಡಿಕೊಂಡರೆ ಬೆಳಗಿನ ಎಂಟು ಗಂಟೆಯ ತನಕ ಓಪನ್ ಮಾಡೋಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಕೇಸರಿ ಶರ್ಮ ಎಂಟು ಗಂಟೆಯ ನಂತರ ಒಬ್ಬನ ವಿನಹ ಬೇರೆ ಯಾವ ಮಿನಿಸ್ಟರ್ ಫೋನ್ ಮಾಡಿದರೂ ಅಟೆಂಡ್ ಮಾಡುತ್ತಿರಲಿಲ್ಲಫಿ.

ಅವನು ಯಾರು? ಪ್ರಭಾವಿಲಾಸ ಶರ್ಮ! ಪ್ರಾಯದ ಯುವಕ. ಇವನೇ ಸಾಕಿ, ಬೆಳೆಸಿ ಓದಿಸಿರುವ ಯುವಕ. ಇವನಿಗಿಂತ ಬೇರೆ ಆತ್ಮೀಯರು ಬೇರೆ ಯಾರೂ ಇಲ್ಲಫಿ ಎಂದು ಹೇಳಬಹುದು. ಅದೆಂತಹ ಟಾಪ್ ಸೀಕ್ರೇಟ್ ಆಗಿರಲಿ ಇವನಿಗೆ ಹೇಳುತ್ತಿದ್ದನು. ಅಷ್ಟೊಂದು ನಂಬಿಕೆ ಇವನಲ್ಲಿದೆ. ಪ್ರಭಾವಿಲಾಸ ಸಹ ಇವನಿಗೆ ಅಷ್ಟೇ ನಿಷ್ಠೆಯಿಂದ ಇದ್ದಾನೆ.

ಇಲ್ಲಿ ನಿಷ್ಠೆಫಿ, ಪ್ರಾಮಾಣಿಕತೆ ಎಂಬುದು ತುಂಬಾ... ತುಂಬಾ ಮುಖ್ಯಫಿ.

‘‘ಹಲೋ ಪ್ರಭಾವಿಲಾಸ್.’’

‘‘ಹೇಳಿ ಸಾರ್.’’

‘‘ಮನೆಗೆ ಬರ್ತೀಯ?’’

‘‘ಈಗ ರಾತ್ರಿ ಎಂಟು ಗಂಟೆ.’’

‘‘ಸೋ ವಾಟ್ ಪ್ರಭಾ...’’

‘‘ನೀವು ಎಂಟು ಗಂಟೆ ನಂತರ ಯಾರನ್ನೂ ರೂಮಿಗೆ ಸೇರಿಸೋಲ್ಲಫಿ.’’

‘‘ನಿನಗೆ ಇದು ಅಪ್ಲೈ ಆಗೋಲ್ಲ ಅಂತ ಗೊತ್ತಿದೆ ತಾನೆ?’’

‘‘ಗೊತ್ತಿದೆ ಸಾರ್.’’

‘‘ಹಾಗಾದರೆ ಈಗಲೇ ಬಾ.’’

‘‘ಬರ್ತೀನಿ ಸಾರ್.’’

●●●

ಡೈನಿಂಗ್ ಟೇಬಲ್‌ನಲ್ಲಿ ಫಿಕ್ಸ್ ಆಗಿರುವ ಶ್ರೀಮಂತಿಕೆ ವೈಭವದ ಆಸನಗಳ ಮೇಲೆ ಅವರಿಬ್ಬರು ಎದುರು ಬದರಾಗಿ ಕುಳಿತಿದ್ದಾರೆ. ಆ ಕೊಠಡಿಯಲ್ಲಿ ನಿಶ್ಯಬ್ದತೆ ಆವರಿಸಿದೆ.

ಎರಡು ಗ್ಲಾಸುಗಳಿಗೆ ಫಾರಿನ್ ವಿಸ್ಕಿಯನ್ನು ಸುರಿದನು. ಸೋಡಾ ಬೆರೆಸಿದನು. ಐಸ್‌ಕ್ಯೂಬ್ ಮುಳುಗಿಸಿದನು. ಎರಡು ಪೆಗ್ ಕುಡಿಯುವ ತನಕ ಕೇಸರಿ ಶರ್ಮ ಮಾತಾಡಲಿಲ್ಲಫಿ. ನಿಧಾನವಾಗಿ ಅಮಲೇರುತ್ತಿದೆ. ಕಣ್ಣುಗಳು ತೇಲುತ್ತಿವೆ.

ರಭಾವಿಲಾಸ ‘‘ಸಾರ್... ನೀವು ಈ ವಿಚಾರ ಹೇಳಲಿಲ್ಲ’’ ಎಂದನು.

ಕುಳಿತಿದ್ದ ಜಾಗದಿಂದ ಎದ್ದ ಕೇಸರಿ ಶರ್ಮ ಟೇಬಲ್ ಲಾಕರ್‌ನಲ್ಲಿ ಫೋಟೋಗಳ ಆಲ್ಬಂ ತೆಗೆದುಕೊಟ್ಟಫಿ.

ನಾಲ್ಕು ಮಂದಿ, ಅತ್ಯಾಕರ್ಷಕ ಸೌಂದರ್ಯ ತುಂಬಿರುವ ರತಿ ವರ್ಚಸಿನ ಬೆಡಗಿಯರ ಫೋಟೋಗಳಿವೆ.

ಪ್ರಭಾವಿಲಾಸನ ಮೈ ಬೆಚ್ಚಗಾಯಿತು. ಈ ಚೆಲುವೆಯನ್ನು ಈ ಹಿಂದೆ ನೋಡಿದ್ದೇನೆ ಎಂಬ ಭಾವನೆ ಬರುತ್ತಿದೆ.

‘‘ಇವರುಗಳು ಯಾರು?’’

‘‘ಎರಡು ವಾರಗಳ ಅವಧಿಯಲ್ಲಿ ಈ ಎಲ್ಲಾ ಚೆಲುವೆಯರು ಸ್ವರ್ಗಲೋಕ ಸೇರಬೇಕು.’’

ಪ್ರಭಾವಿಲಾಸ ಬೆಚ್ಚಿಬಿದ್ದನು.

‘‘ಯೂ ಮೀನ್ ಮರ್ಡರ್ ಮಾಡ್ಬೇಕಾ?’’

ಕೇಸರಿ ಶರ್ಮ ತಲೆಯಾಡಿಸಿದನು.

ಈ ಯುವಕ ಗಾಬರಿಯಿಂದ ‘‘ಈ ಚೆಲುವೆಯನ್ನ ಯಾಕೆ ಕೊಲೆ ಮಾಡ್ಬೇಕು? ಅವರಿಂದ ನಿನಗೇನು ತೊಂದರೆ ಆಗಿದೆ.’’

‘‘ಅದನ್ನೆಲ್ಲಾ ನೀನು ಕೇಳಬಾರದು ಪ್ರಭಾವಿಲಾಸ.’’

‘‘ನನ್ನ ಹತ್ತಿರ ಗುಟ್ಟು ಮಾಡ್ತೀಯ?’’

‘‘ಇದೊಂದು ವಿಚಾರದಲ್ಲಿ ಮಾತ್ರಫಿ.’’

‘‘ಕೊಲೆ ಮಾಡೋದು ಸುಲಭ ಅಲ್ಲಫಿ.’’

‘‘ನಿನ್ನಂತವನಿಗೆ ಸುಲಭ.’’

‘‘ವಾಟ್ ಡು ಯೂ ಮೀನ್.’

‘‘ನೀನು ಬುದ್ಧಿವಂತ, ಧೈರ್ಯವಂತ, ಬಲಿಷ್ಠ ಶರೀರದ ಯುವಕ. ಯಾರನ್ನ ಯಾವಾಗ ಮರ್ಡರ್ ಮಾಡ್ಬೇಕು ಅಂತ ಹೇಳ್ತೀನಿ.’’

‘‘ಹಾಗಲ್ಲ ಸಾರ್.’

ಅವನು ಗಡುಸಾಗಿ ‘‘ಈ ಕೆಲಸ ನಿನ್ನಿಂದ ಆಗುತ್ತೋ ಇಲ್ಲವೋ ಹೇಳು.’’

ಕೆಲವು ಕ್ಷಣಗಳ ನಂತರ ‘‘ಆಗುತ್ತೆಫಿ... ನಾನು ಮಾಡ್ತೀನಿ. ಆದರೆ...’’

‘‘ಪೊಲೀಸರ ಭಯ ಬೇಡ. ಸುಳಿವೇ ಕೊಡದ ರೀತಿ ಹೇಗೆ ಮರ್ಡರ್ ಮಾಡಬೇಕು ಅಂತ ನಾನು ಹೇಳ್ತೀನಿ.’’

‘‘ನನಗೆ ಕಾರಣ ಹೇಳಲ್ವಫಿ?’’

‘‘ಇವರನ್ನೆಲ್ಲಾ ಕೊಲೆ ಮಾಡಿದ ಮೇಲೆ ಕಾರಣ ಏನು ಅಂತ ಹೇಳ್ತೀನಿ.’’

ಪ್ರಭಾವಿಲಾಸ ಮತ್ತೊಮ್ಮೆ ಆ ಚೆಲುವೆಯರ ಫೋಟೋಗಳನ್ನು ನೋಡುತ್ತಾ ‘‘ಈ ಯುವತಿಯರು ತುಂಬಾ ಚೆನ್ನಾಗಿದ್ದಾನೆ. ಇವರನ್ನ ಯಾಕೆ ಕೊಲೆ ಮಾಡಿಸಬೇಕು. ಇವರಲ್ಲಿ ಯಾರನ್ನಾದರೂ ಮದುವೆ ಮಾಡಿಕೊಂಡು ಸಂತೋಷದಿಂದ ಇರಬಾರದೇ ಸಾರ್’’ ಎಂದನು.

ಅವನು ನಗತೊಡಗಿದನು. ನಗುವಿನ ಸ್ವರೂಪ ವಿಲಕ್ಷಣ ರೀತಿಯಲ್ಲಿ ಬದಲಾಗಲಾರಂಭಿಸಿತು.

ತಟ್ಟನೆ ನಗು ನಿಂತಿತು.

‘‘ನನಗೆ ಇವರನ್ನೆಲ್ಲಾ ತುಂಬಾ ಬ್ರೂಟಲ್ ಆಗಿ ಕೊಲೆ ಮಾಡಬೇಕು ಅಂತ ಅನಿಸುತ್ತಿದೆ. ಅವರ ಸಾವು ನನಗೆ ಬೇಕು.’’

ಪ್ರಭಾವಿಲಾಸ ಹತ್ತಿರ ಸರಿದು ಅವನ ಕೈ ಅದುಮುತ್ತಾ ‘‘ಸಾರ್... ನಾನು ಕೊಲೆ ಮಾಡಲು ಆಗಲೇ ಒಪ್ಪಿದ್ದೇನೆ’’ ಎಂದನು.

‘‘ಹಾಗಾದರೆ ನಾಳೆ ರಾತ್ರಿ ಕೊಲೆ ಆಗಬೇಕು.’’

‘‘ಇದೇನು ದಿಢೀರ್ ಅಂತ.’

‘‘ಎರಡು ವಾರದಲ್ಲಿ ಈ ಚೆಲುವೆಯರು ಭೂಮಿ ಮೇಲೆ ಜೀವಂತವಾಗಿ ಇರಬಾರದು. ಒಂದು ಕೊಲೆಗೂ, ಮತ್ತೊಂದು ಕೊಲೆಗೂ ಅಂತರ ಇರಬೇಕು.’’

‘‘ಎಷ್ಟು ದಿನಗಳ ಅಂತರ.’’

‘‘ಮೂರು ಅಥವಾ ನಾಲ್ಕು ದಿನಗಳ ಅಂತರ. ಯಾಕೆ ಅಂದರೆ ಪೊಲೀಸರಿಗೆ ಅನುಮಾನ ಬರಬಾರದು.’’

‘‘ಆಗಲಿ... ಆಗಲಿ ಸಾರ್.’’

‘‘ನಿನಗೆ ಹಣ ಬೇಕಾದರೆ ಕೇಳು.’’

‘‘ನಿಮ್ಮ ಹತ್ತಿರ ಹಣ ತಗೊಂಡು ಈ ಕೆಲಸ ಮಾಡಲಾರೆ.’

ಕೇಸರಿ ಶರ್ಮ ಮುಂದೆ ಸರಿದು ಈಗ ಅವನ ಭುಜ ತಟ್ಟಿದನು.

‘‘ಮೊದಲ ಬಲಿಪಶು ಯಾರು?’’

ನಾಲ್ಕು ಮಂದಿ ಚೆಲುವೆಯರಲ್ಲಿ ಒಬ್ಬಳ ಫೋಟೋ ಹಿಡಿಯುತ್ತಾ ‘‘ಇವಳು ನೀಲಾಂಬಿಕೆ ಅಂತ. ನರ್ತಕಿ ಕ್ಯಾಬರೆ ಬಾರ್‌ನ ಡ್ಯಾನ್ಸರ್. ಮಹಾ ಅಹಂಕಾರದವಳು. ಮಹಾನ್ ಕೋಪಿಷ್ಠೆಫಿ.’’

‘‘ಇವಳ ಫೋನ್ ನಂಬರ್ ಮತ್ತು ವಿಳಾಸ ಮತ್ತು ಎಲ್ಲಿಫಿ, ಯಾವಾಗ ಸಿಗುತ್ತಾಳೆ ಮತ್ತು ಇವಳಿಗೆ ತುಂಬಾ ಬೇಕಾದವರು ಎಂಬುದನ್ನು ವಿವರವಾಗಿ ಹೇಳಿ ಸಾರ್.’’

●●●

‘‘ಸಾರ್... ಗ್ರಾಂಡ್ ಸಕ್ಸಸ್.’’

‘‘ಅಂದರೆ ನೀಲಾಂಬಿಕೆ...’’

‘‘ಈ ಲೋಕದಲ್ಲಿ ಇಲ್ಲಫಿ.’’

‘‘ಯಾರಿಗೂ ಅನುಮಾನ ಬರಲಿಲ್ಲ ತಾನೆ?’’

‘‘ಇಲ್ಲಫಿ... ಇಲ್ಲ ಸಾರ್.’’

‘‘ನನಗೆ ಎವಿಡೆನ್ಸ್ ಬೇಕು.’’

‘‘ವಾಟ್ಸಾಪ್ ಮಾಡಿದ್ದೀನಿ ನೋಡಿ.’’

●●●

ಬಹದ್ದೂರ್ ಪುರ ಪೊಲೀಸ್ ಸ್ಟೇಷನ್‌ನಲ್ಲಿ ಪೊಲೀಸರು ತಮ್ಮ ಕೆಲಸ ಮಾಡುತ್ತಿದ್ದಾರೆ.

ಬೆಳಗಿನ ಹತ್ತು ಗಂಟೆ.

ಫೋನ್ ಕಾಲ್ ಬಂದಿತು.

ಪೊಲೀಸರಲ್ಲಿ ಒಬ್ಬ ಅಟೆಂಡ್ ಮಾಡಿದಾಗ ಕೇಳಿ ಬಂದಿತು ಶಬ್ದಫಿ...! ಗೊಗ್ಗರು ಧ್ವನಿ!

‘‘ಹಲೋ ಯಾರು... ಯಾರು?’’

‘‘ನಾನು... ನಾನು ಮಿಸ್ಟರ್ ಎಕ್ಸ್ ಅಂತ.’’

‘‘ಯಾಕೆ ಹೆಸರು, ವಿಳಾಸ ಹೇಳಲು ಧೈರ್ಯ ಇಲ್ವ ಮಿಸ್ಟರ್ ಎಕ್ಸ್‌ಫಿ.’’

‘‘ನನ್ನ ಹೆಸರಿನ ಅಗತ್ಯ ಇಲ್ಲಫಿ.’’

‘‘ಈಗ ಫೋನ್ ಮಾಡಿರೋದು ಯಾಕೆ?’’

‘‘ಕೊಲೆ ವಿಚಾರ ತಿಳಿಸಲು.’’

‘‘ವಾಟ್... ಕೊಲೆನಾ?’’

‘‘ಅದ್ಯಾಕೆ ಗಾಬರಿ ಆಗ್ತೀರ. ಇನ್ನು ಐದು ನಿಮಿಷದಲ್ಲಿ ಕೊಲೆ ದೃಶ್ಯ ಫೋಟೋಗಳು ಬರುತ್ತದೆ.’’

‘‘ಕೊಲೆ ಆಗಿರೋದು ಯಾರು?’’

‘‘ನರ್ತಕಿ ಬಾರ್ ಡ್ಯಾನ್ಸರ್ ನೀಲಾಂಬಿಕೆ.’’

‘‘ಕೊಲೆ ಆಗಿರೋದು ಎಲ್ಲಿಫಿ?’’

‘‘ಅವಳ ಮನೇಲಿ.’’

‘‘ಕೊಲೆ ಮಾಡಿರೋದು ಯಾರು?’’

‘‘ಮಿಸ್ಟರ್ ಎಕ್ಸ್‌ಫಿ.’’

‘‘ಅಂದರೆ ನೀನಾ...’’

‘‘ಹೌದು ನಾನೇ.’’

‘‘ಕೊಲೆ ಮಾಡಿ ಪೊಲೀಸರಿಗೆ ಫೋನ್ ಮಾಡಿ ಹೇಳುವಷ್ಟು ಧೈರ್ಯನಾ?’’

ವಿಲಕ್ಷಣ ನಗು ತೇಲಿಬಂದಿತು.

‘‘ನೀನು ಮಾಡಿರುವ ಫೋನ್‌ಕಾಲ್ ಟ್ರೇಸ್ ಮಾಡಿ ಅರೆಸ್ಟ್ ಮಾಡ್ತೀನಿ.’’

ಮತ್ತೊಮ್ಮೆ ನಗಾಡಿದನು.

ಆ ನಗು ಅಬ್ಬರಕೇರಿತು.

‘‘ಹ್ಲಲೋ... ನಾನು ಪೆದ್ದ ಅಲ್ಲಫಿ. ಪಬ್ಲಿಕ್ ಕಾಯಿನ್ ಬೂತ್‌ನಿಂದ’’ ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದನು.

●●●

ಆ ರೂಮಿನ ಬಲಭಾಗದಲ್ಲಿ ಖಾಲಿ ಇರುವ ನೆಲದ ಮೇಲೆ ಅವಳ ಕಡೆಬಾಡಿ ಬಿದ್ದಿದೆ. ಎದೆ-ಹೊಟ್ಟೆಫಿ. ಮುಖ-ತೋಳುಗಳ ಎಲ್ಲಾ ಭಾಗ ರಕ್ತದಿಂದ ತೇವಗೊಂಡಿದೆ. ಶರೀರ ಅರ್ಧ ವಾಲಿಕೊಂಡಿದೆ. ವಸ್ತ್ರಗಳು ಸಡಿಲಗೊಂಡಿದೆ. ಈ ಕ್ಯಾಬರೆ ನರ್ತಕಿಯ ಅಭೂತಪೂರ್ವ ಸೌಂದರ್ಯ ಅರೆನಗ್ನವಾಗಿ ತೆರೆದುಕೊಂಡಿದೆ. ಕೊಲೆಗೆ ಬಳಸಿರುವ ಆಯುಧ ಬಲು ಉದ್ದವಾದ ಚಾಕು ರಕ್ತಸಿಕ್ತವಾಗಿ ಬಿದ್ದಿವೆ.

ಸಾವಕಾರ ನಗುತ್ತಿದ್ದಾನೆ. ವಿಲಕ್ಷಣವಾಗಿ ನಗುತ್ತಿದ್ದಾನೆ. ಕುಳ್ಳನೆಯ ದಪ್ಪನೆಯ ಶರೀರ ಕುಲುಕಾಡುತ್ತಿದೆ.

ಪ್ರಭಾವಿಲಾಸನಿಗೆ ಫೋನ್ ಮಾಡಿದನು. ನನ್ನನ್ನು ಅವಮಾನ ಮಾಡಿ ಅವಹೇಳನಕಾರಿಯಾಗಿ ಮಾತಾಡಿದ್ದ ಅವಳನ್ನು ಕೊಲೆ ಮಾಡಿ ನನಗೆ ತುಂಬಾ ಸಂತೋಷ ಆಗಿದೆ.

‘‘ಅವಳು ನಮಗ್ಯಾಕೆ ಅವಮಾನ ಮಾಡಿದ್ಳುಫಿ?’

‘‘ತಾನೇ ಸೌಂದರ್ಯವತಿ ಅನ್ನುವ ಮಹಾ ಅಹಂಕಾರದಿಂದ.’’

‘‘ಸಾರ್... ನೀವು ದೆಹಲಿಯ ಕೆಲವೇ ಶ್ರೀಮಂತರಲ್ಲಿ ಒಬ್ಬರು. ರಾಜಕೀಯ ಪ್ರಭಾವ ಇದೆ. ಒಬ್ಬಳು ಕ್ಯಾಬರೆ ಡ್ಯಾನ್ಸರ್ ನಿಮಗೆ ಅವಮಾನ ಮಾಡಿದ್ದಾಳೆ. ಅಂದರೆ ಆಶ್ಚರ್ಯ ಆಗುತ್ತಿದೆ.’’

ಕೇಸರಿ ಶರ್ಮನ ಮುಖ ಬಿರುಸಾಗಿದೆ. ಹಲ್ಲು ಕಡಿಯುತ್ತಿದ್ದಾನೆ.

‘‘ಹಲೋ... ಹಲೋ ಸಾರ್.’’

‘‘ಫೋನ್ ಲಿಂಕ್ ಕಟ್ ಆಗಿದೆ.

●●●

ಫೋಟೋಗಳನ್ನು ಪೊಲೀಸರು ನೋಡಿದ ಕೂಡಲೇ ಕ್ಯಾಬರೆ ನರ್ತಕಿಯರ ಮನೆ ಎಲ್ಲಿದೆ ಅಂತ ಪಪತ್ತೆ ಮಾಡಿ ಅಲ್ಲಿಗೆ ಹೋದರು.

ಡೋರ್ ಲಾಕ್ ಆಗಿದೆ. ಪೊಲೀಸರು ಬೆಲ್ ಮಾಡಿದರು. ಬಾಗಿಲು ತೆಗೆದವರು ವಯಸ್ಸಾಗಿರುವ ವ್ಯಕ್ತಿ ಪೊಲೀಸರನ್ನು ಕಂಡು ಅವರು ಗಾಬರಿಯಾದರು.

‘‘ನೀಲಾಂಬಿಕೆ ಡೆಡ್‌ಬಾಡಿ ಎಲ್ಲಿದೆ?’’

ಆ ವಯೋವೃದ್ಧ ಬೆಚ್ಚಿಬಿದ್ದನು.

‘‘ಸಾರ್... ನೀವು... ನೀವು ಏನು... ಹೇಳ್ತಾ ಇದ್ದೀರ.’’

‘‘ನೀಲಾಂಬಿಕೆ ಹೇಳ್ತಾ ಇದ್ದೀರ.

☞14

13 ☞

''ನೀಲಾಂಬಿಕೆ ಕೊಲೆ ಆಗಿದೆ.''

''ಸಾರ್... ನೀವು ಕನ್‌ಫ್ಯೂಸ್ ಮಾಡಿ ಇಲ್ಲಿಗೆ ಬಂದಿದ್ದೀರ.''

''ವಾಟ್ ಡು ಯೂ ಮೀನ್.''

''ರಾತ್ರಿ ನರ್ತಕಿ ಬಾರ್‌ನಿಂದ ಅವಳು ಮನೆಗೆ ಬಂದಿಲ್ಲ ಸಾರ್.''

ಕೊಲೆ ದೃಶ್ಯದ ಫೋಟೋಗಳನ್ನು ಅವನ ಮುಂದೆ ಹಿಡಿದರು.

ವೃದ್ಧ ಬೆಚ್ಚಿಬಿದ್ದನು. ಕೂಡಲೇ ಬಾರ್ ಮಾಲೀಕರಿಗೆ ಫೋನ್ ಮಾಡಿದರು. ನೀಲಾಂಬಿಕೆ ಬಗ್ಗೆ ಪ್ರಶ್ನೆ ಮಾಡಿದನು.

''ರಾತ್ರಿ ಹತ್ತು ಗಂಟೆಗೆ ಶೋ ಮುಗಿಸಿಕೊಂಡು ಮನೆಗೆ ಹೋದ್ರುಫಿ.''

''ಯಾರ ಜೊತೆ ಹೋದ್ರುಫಿ?''

''ರೆಗ್ಯುಲರ್ ಡ್ರೈವರ್ ಬಲಬಾಬು.'

ಆ ವೃದ್ಧ ಈ ವಿಷಯವನ್ನು ಹೇಳಿದನು. ಪೊಲೀಸರು ಅವನಿಂದ ಡ್ರೈವರ್ ಫೋನ್ ನಂಬರ್ ಪಡೆದರು.

●●●

ಡ್ರೈವರ್ ಬಲಬಾಬುಗೆ ರಜ್ಜೆ ಬಂದು ಅರ್ಧ ಗಂಟೆಯ ನಂತರ ಪೊಲೀಸರು ಅಲ್ಲಿಗೆ ಬಂದರು.

ವಿಚಾರಣೆ ಪ್ರಾರಂಭವಾಯಿತು. ''ರಾತ್ರಿ ಎಷ್ಟು ಗಂಟೆಗೆ ನೀನು ನರ್ತಕಿ ಬಾರ್‌ನಿಂದ ಹೊರಟೆ.''

''ಹತ್ತೂವರೆ ಆಗಿತ್ತು ಸಾರ್.'

''ನಿನ್ನ ಜೊತೆ ಯಾರಿದ್ದರು?''

''ನೀಲಾಂಬಿಕೆ ಮಾತ್ರಫಿ.''

''ಕಷ್ಟಮರ್ ಇರಲಿಲ್ವಫಿ?''

''ಯಾವ ಕಸ್ಟಮರ್ ಜೊತೆಗೂ ಅವರು ಹೋಗುವುದಿಲ್ಲಫಿ. ವಾರದಲ್ಲಿ ಎರಡು ಅಥವಾ ಮೂರು ರಾತ್ರಿ ನಾನೇ ಅವರನ್ನು ಹೋಟೆಲ್‌ಗೆ ಕರ್ಕೊಂಡು ಹೋಗ್ತೀನಿ.''

''ಯಾವ ಹೋಟೆಲ್‌ಗೆ?''

''ಹೋಟೆಲ್ ಮಯೂರ.''

''ಆ ಹೋಟೆಲ್ ಎಲ್ಲಿದೆ?''

''ಎಂ.ಜಿ. ರೋಡಲ್ಲಿಫಿ.ಯ''

''ನೆನ್ನೆ ರಾತ್ರಿ ಏನು ನಡೀತು ಅಂತ ನೆನಪು ಮಾಡ್ಕೊಂಡು ಹೇಳು.''

ಡ್ರೈವರ್ ಬಲಬಾಬು ''ನಾವು ಮತ್ತು ಮೇಡಂ ಕಾರಲ್ಲಿ ಬರುತ್ತಿದ್ದಾಗ ಟ್ರಾಫಿಕ್ ಜಾಮ್ ಆಗಿತ್ತುಫಿ. ಆಗ ಯಾರೋ ಒಬ್ಬ ಸರ್ರನೆ ನುಗ್ಗಿದನು. ನನಗೆ ಮತ್ತು ಮೇಡಂಗೆ ಪಿಸ್ತೂಲ್ ತೋರಿಸಿ ಹೆದರಿಸಿದನು. ಅವನು ಹೇಳಿದ ಕಡೆ ಕಾರನ್ನು ಓಡಿಸಿದೆ. ನಿರ್ಜನ ಪ್ರದೇಶದಲ್ಲಿಫಿ, ಮೂಗಿನ ಹತ್ತಿರ ಏನೋ ಒತ್ತಿ ನನ್ನ ಪ್ರಜ್ಞೆ ತಪ್ಪಿಸಿದನು.

''ಆಮೇಲೆ ಏನಾಯಿತು?''

''ಗೊತ್ತಿಲ್ಲ ಸಾರ್. ಎಚ್ಚರವಾದಾಗ ಬೆಳಗಾಗಿತ್ತುಫಿ. ನಾನು ತುಂಬಾ ಗಾಬರಿಯಾಗಿದ್ದೆಫಿ. ಕೂಡಲೇ ಏನು ಮಾಡಬೇಕು ಅಂತ ಗೊತ್ತಾಗಲಿಲ್ಲಫಿ.''

''ಈ ವಿಚಾರ ಯಾರಿಗೂ ಹೇಳಲಿಲ್ಲಫಿ?''

''ಸಾರ್... ನಾನು ನರ್ತಕಿ ಬಾರ್‌ನ ಕಾರಿನ ಡ್ರೈವರ್. ಬೆಳಿಗ್ಗೆ ಅವರಿಗೆ ಫೋನ್ ಮಾಡಿ ಹೇಳಿದ್ದೆಫಿ.''

''ನಿನ್ನ ಪ್ರಜ್ಞೆ ತಪ್ಪಿಸಿದ್ದ ವ್ಯಕ್ತಿ ಹೇಗಿದ್ದಫಿ? ಅವನ ಗುರುತನ್ನು ಏನಾದರೂ ಹೇಳಲು ಸಾಧ್ಯವೆ?''

''ಸಾರ್... ಅವನು ಮಂಕಿ ಕ್ಯಾಪ್ ಮತ್ತು ಕೂಲಿಂಗ್ ಗ್ಲಾಸ್, ಲಾಂಗ್ ಕೋಟ್ ಧರಿಸಿದ್ದಫಿ. ಹಾಗಾಗಿ ಅವನ ಗುರುತಾಗಲಿಲ್ಲ ಎಂದು ಹೇಳಿದನು. ಇವನಿಂದ ತಿಳಿಯುವ ವಿಚಾರ ಏನೂ ಇಲ್ಲ ಎಂದು ಅನಿಸಿತು.

ಪ್ರಶ್ನೆ-ಪ್ರಶ್ನೆಯಾಗಿ ಉಳಿಯಿತು.

ಈ ಕೆಲಸ ಮಾಡಿದ್ದು ಯಾರು? ಅವಳನ್ನು ಎಲ್ಲಿಗೆ ಕರ್ಕೊಂಡು ಹೋಗಿ ಕೊಲೆ ಮಾಡಿದ? ಯಾವ ಸುಳಿವೂ ಇಲ್ಲದೆ ಈ ಕೇಸಿನಲ್ಲಿ ಯಾವ ರೀತಿ ಮುಂದುವರೆಯಲು ಸಾಧ್ಯಫಿ? ಪೊಲೀಸ್ ಅಧಿಕಾರಿಗಳು ತಮಗೆ ಬಂದಿದ್ದ ಕೊಲೆಯ ದೃಶ್ಯಗಳ ಫೋಟೋಗಳನ್ನು ಕಳಿಸಿದರು. ಮತ್ತೊಮ್ಮೆ ತುಂಬಾ ಎಚ್ಚರಿಕೆಯಿಂದ ನೋಡಿದರು. ಆದರೆ ಸುಳಿವನ್ನು ನೀಡಬಲ್ಲ ಯಾವ ಕುರುಹ ಸಹ ಸಿಗಲಿಲ್ಲಫಿ.

●●●

''ಗುಡ್... ವೆರಿಗುಡ್... ಸ್ವಲ್ಪವೂ ಸುಳಿವು ಸಿಗದಂತೆ ನೀನು ಕೊಲೆ ಮಾಡಿದ್ದೀಯ. ನನಗೆ ತುಂಬಾ ಸಂತೋಷ ಆಗಿದೆ.''

ಪ್ರಭುವಿಲಾಸ ''ನನಗೆ ಮೆಚ್ಚುಗೆ ಬೇಡ. ಆ ಕ್ಯಾಬರೆ ಡ್ಯಾನ್ಸರ್ ನಿಮಗೇನು ಮಾಡಿದ್ದಳು ಅಂತ ಕೊಲೆ ಮಾಡಿಸಿದ್ದೀರ'' ಎಂದು ಗಂಭೀರವಾಗಿ ಕೇಳಿದನು.

''ನೆನ್ನೆ ದಿವಸ ಹೇಳಿದ್ದೀನಲ್ಲಫಿ.''

''ಅವಳಿಂದ ಅವಮಾನ ಆಯಿತು. ಅವಹೇಳನ ಉಂಟಾಗುವ ರೀತಿ ಮಾತಾಡಿದಳು. ಇಷ್ಟೇ ನೀವು ಹೇಳಿದ ಕಾರಣ.''

''ಅಷ್ಟೇ ಕಾರಣ.''

''ಇದು ತುಂಬಾ ಅನ್ಯಾಯ.''

ಈಗ ಕಾರಣದ ಬಗ್ಗೆ ಚರ್ಚೆ ಬೇಡ'' ಎಂದು ಹೇಳಿ ಮತ್ತೊಂದು ಫೋಟೋ ತೆಗೆದು ಪ್ರಭುವಿಲಾಸನ ಮುಂದೆ ಹಿಡಿದನು.

ಸಾಂಪ್ರದಾಯಿಕ ಚೆಲುವೆ?

ನೋಡಿದ ಕ್ಷಣಗಳಲ್ಲಿ ಸೂಜಿಗಲ್ಲಿನ ರೀತಿ ಸೆಳೆಯಬಲ್ಲ ಚಿತ್ತಾಕರ್ಷಕ ಚೆಲುವಿನ ಬೆಡಗಿ ಸಂಸಾರಸ್ಥ ಗೃಹಿಣಿ ರೀತಿ ಕಾಣುತ್ತಿದ್ದಾಳೆ.

ಕೇಸರಿ ಶರ್ಮ ಹೇಳುತ್ತಿದ್ದಾನೆ. ''ಈ ಚೆಲುವೆ ನಾಗಶ್ರೀ ಅಥವಾ ನಾಗಲಾಂಬಿಕೆ ಅನ್ನೋ ಹೆಸರಿನವಳು.''

''ಈಕೆ ನಿಮಗೇನು ಮಾಡಿದಳು?''

''ಕಾರಣ ಕೇಳಬೇಡ ಪ್ರಭು. ಈ ನಾಲ್ಕು ಮಂದಿ ಚೆಲುವೆಯರು ಬದುಕೋದು ನನಗೆ ಇಷ್ಟ ಇಲ್ಲಫಿ. ಬೇಕಾದರೆ ನಿನಗೆ ಎಷ್ಟು ಬೇಕಾದರೂ ಹಣ ಕೊಡ್ತೀನಿ.''

''ನಾನಾಗಲೇ ಹೇಳಿದ್ದೀನಿ.'

''ಏನು... ಏನದು?''

''ನಿಮ್ಮಿಂದ ಹಣ ತಗೊಂಡು ಕೊಲೆ ಮಾಡಲಾರೆ. ನಾನು ಪ್ರೊಫೆಷನಲ್ ಕಿಲ್ಲರ್ ಅಲ್ಲ ಅಂತ.''

''ಹಾಗಾದರೆ ನನಗಾಗಿ ಕೊಲೆ ಮಾಡು. ಆದರೆ ಪ್ರಶ್ನೆ ಕೇಳ್ಬೇಡ.'

''ಓಕೆ. ಈಕೆ ಬಗ್ಗೆ ಹೇಳಿ.''

''ಕೆನರಾ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿರುವ ಈಕೆ ಡಾಬರ್‌ಪೇಟೆ ಕ್ರಾಸ್‌ನಲ್ಲಿರೋ 44 / ಎ ಮನೇಲಿ ವಾಸ ಮಾಡುತ್ತಿದ್ದಾಳೆ. ಈಕೆಯ ಜೊತೆ ಗಂಡ, ಮಾವ-ಅತ್ತೆಫಿ, ಮೈದುನ ಎಲ್ಲಾ ಇದ್ದಾರೆ.''

ಪ್ರಭುವಿಲಾಸ ಚಡಪಡಿಸಿದನು.

''ಎಲ್ಲರೂ ಇರುವ ಇವಳನ್ನು ಕೊಲೆ ಮಾಡೋದು ಸುಲಭ ಅಲ್ಲಫಿ.''

''ನಾಗಲಾಂಬಿಕೆ ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾಳೆ.''

''ಏನು... ಏನದು?''

''ಇವಳು ಮಹಾನ್ ದೈವಭಕ್ತೆ ಶುಕ್ರವಾರ ಮಧ್ಯಾಹ್ನ ಕಾರಲ್ಲಿ ಬನಶಂಕರಿ ಅಮ್ಮನವರ ದೇವಸ್ಥಾನಕ್ಕೆ ಹೋಗುತ್ತಾಳೆ.

''ಅವಳ ಜೊತೆ ಯಾರು ಇರುತ್ತಾರೆ?''

''ಯಾರೂ ಇರೋಲ್ವಫಿ?''

''ಅವಳಿಗೆ ವಿಪರೀತ ಡ್ರೈವಿಂಗ್ ಹುಚ್ಚುಫಿ. ಗಾಳಿ ವೇಗದಲ್ಲಿ ಕಾರನ್ನು ಓಡಿಸುತ್ತಾಳೆ. ಈ ಅವಕಾಶ ಪುನಹ ಸಿಗೋಲ್ಲಫಿ.''

''ಆಗಲಿ ಪ್ರಯತ್ನ ಮಾಡ್ತೀನಿ.''

''ನೀನು ಸಕ್ಸಸ್ ಆಗಲೇಬೇಕು.''

''ಆಗಲಿ ಸಾರ್.''

''ಗೋ ಅಹೆಡ್ ಬೆಸ್ಟ್ ಆಫ್ ಲಕ್.''

●●●

''ಹಲೋ ಡಾಬರ್‌ಪೇಟೆ ಪೊಲೀಸ್ ಸ್ಟೇಷನ್.''

''ಎಸ್... ಹೇಳು.''

''ಡಾಬರ್‌ಪೇಟೆಯಲ್ಲಿ ಕೆನರಾ ಬ್ಯಾಂಕ್‌ನ ಮಹಿಳಾ ಉದ್ಯೋಗಿ ನಾಗಲಾಂಬಿಕೆ ಕೊಲೆ ಆಗಿದ್ದಾಳೆ.''

ಪೊಲೀಸ್ ಅಧಿಕಾರಿ ಬೆಚ್ಚಿಬಿದ್ದನು.

''ನೀವು ಏನು ಹೇಳ್ತಾ ಇದ್ದೀರ.''

''ಕೊಲೆ ದೃಶ್ಯನ ಫೋಟೋಗಳನ್ನು ಕಳಿಸುತ್ತೇನೆ ನೋಡಿ.''

''ಅಂದರೆ... ಅಂದರೆ...''

''ಕೊಲೆ ಮಾಡಿರೋದು ನಾನು.''

''ವಾಟ್... ನೀನಾ... ಏ... ಯಾರೋ ನೀನು? ಪೊಲೀಸರ ಜೊತೆ ಹುಡುಗಾಟ ಆಡುತ್ತಿದ್ದೀಯ?''

ಫೋನ್ ಲಿಂಕ್ ಕಟ್ ಆಗಿದೆ.

ಪೊಲೀಸ್ ಅಧಿಕಾರಿಗೆ ವಾಟ್ಸಾಪ್‌ನಲ್ಲಿ ನಾಲ್ಕು ಫೋಟೋಗಳು ಬಂದಿವೆ. ಡೆಡ್‌ಬಾಡಿ ಮಂಚದ ಮೇಲೆ ಬಿದ್ದಿದೆ. ದೇಹದ ಹಲವಾರು ಕಡೆ ಗಾಯಗಳಿವೆ. ರಕ್ತ ನೆಲದ ಮೇಲೆ ಹರಿದಿದೆ ಮತ್ತು ಚಾಕು ಮೂಲೆಯಲ್ಲಿ ಬಿದ್ದಿದೆ.

ಡಾಬರ್‌ಪೇಟೆ ಪೊಲೀಸ್ ಅಧಿಕಾರಿಗಳು ತನಿಖೆಗಾಗಿ ಹೊರಟರು. ಕಾರೊಂದು ಬಂದಿತು. ನಾಗಲಾಂಬಿಕೆಯ ಗಂಡ, ತಂದೆ-ತಾಯಿ, ಮೈದುನ ಎಲ್ಲಾ ಬಂದಿದ್ದಾರೆ. ಮಿಸ್ಸಿಂಗ್ ಕಂಪ್ಲೆಂಟ್ ಕೊಡಲು ಬಂದಿರುವ ಅವರಿಗೆ ಶಾಕ್ ಉಂಟಾಗಿದೆ. ಆಘಾತಕರ ಕೊಲೆ ಸುದ್ದಿ ತಿಳಿದಿದೆ.

''ನಾಗಲಾಂಬಿಕೆ ಬನಶಂಕರಿ ಅಮ್ಮನವರ ಸೇವೆ ಮಾಡಲು ಹೋಗಿದ್ದವಳು ಮನೆಗೆ ಬಂದಿಲ್ಲ'' ಎಂದು ಗಂಡ ಹೇಳಿದನು.

ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಕಂಟ್ರೋಲ್ ರೂಮ್‌ನಿಂದ ಫೋನ್ ಕಾಲ್ ಬಂದಿತು. ನಾಗಲಾಂಬಿಕೆಯ ಕಾರು 'ಚಂಗಲ್‌ಪೇಟೆ' ಹತ್ತಿರ ಸಿಕ್ಕಿದೆ.

ಪೊಲೀಸರು ವಶಪಡಿಸಿಕೊಂಡರು. ಕಾರನ್ನು ಶೋಧಿಸಿದರು. ಸುಳಿವನ್ನು ನೀಡಬಲ್ಲಂತ ಯಾವ ರೀತಿಯ ಕುರುಹು ಸಹ ಸಿಗಲಿಲ್ಲಫಿ. ನಾಗಲಾಂಬಿಕೆಗೆ ಶತ್ರುಗಳು ಯಾರಾದರೂ ಇದ್ದಾರ ಎಂಬುದರ ಬಗ್ಗೆ ತನಿಖೆ ಮಾಡಿದರು. ಕೊಲೆ ಮಾಡುವಂತಹ ಶತ್ರು ಅವಳಿಗ್ಯಾರೂ ಇರಲಿಲ್ಲಫಿ.

ಪ್ರಶ್ನೆ ಶೇಷವಾಗಿ ಉಳಿಯಿತು.

●●●

''ಇವಳು ರೋಹಿಣಿ ಶರ್ಮ. ಈಕೆ ಕೆಲವು ಸಿನಿಮಾಗಳಲ್ಲಿ ನಾಯಕ ತಂಗಿ ಪಾತ್ರ ಮತ್ತು ಹೀರೋಯಿನ್ ಗೆಳತಿ ಮತ್ತು ಅಕ್ಕನ ಪಾತ್ರ ಮಾಡಿದ್ದಾಳೆ.''

''ಇವಳನ್ನ ಕೊಲೆ ಮಾಡ್ಬೇಕು?''

''ಇವತ್ತೇ ಆಗಬೇಕು.''

''ಮೈಗಾಡ್... ನೆನ್ನೆ ತಾನೇ ನಾಗಲಾಂಬಿಕೆಯ ಕೊಲೆ ಆಗಿದೆ.''

''ಇವತ್ತು ಇವಳು ಕರ್ನಾಟಕಕ್ಕೆ ಹೋಗುತ್ತಾಳೆ. ಒಂದು ತಿಂಗಳು ಬರೋಲ್ಲಫಿ.''

''ಅಲ್ಲಿಂದ ಬಂದ ಮೇಲೆ ಮಾಡಿದರಾಯಿತು.''

''ಬರುತ್ತಾಳೆ ಅನ್ನೋದು ನಂಬಿಕೆ ನನಗಿಲ್ಲಫಿ. ಯಾಕೆ ಅಂದರೆ ಅವಳಿಗೆ ಅಲ್ಲಿ ಮದುವೆ ನಿಶ್ಚಯವಾಗಿದೆ. ಸೋ... ಬರೋದು ಅನುಮಾನ.''

''ಮದುವೆ ಮಾಡಿಕೊಂಡು ಸಂಸಾರ ಮಾಡಲಿರುವ ಹೆಣ್ಣನ್ನ ಯಾಕೆ ಕೊಲೆ ಮಾಡಿಸುತ್ತೀರ ಸಾರ್. ಇವಳನ್ನಾದರೂ ಬಿಟ್ಟುಬಿಡಿ. ಪಾಪ... ಬದುಕಿಕೊಳ್ಳಲಿ.''

ಕೇಸರಿ ಶರ್ಮ ಕೋಪದಿಂದ ''ನಿನ್ನ ಉಪದೇಶ ನನಗೆ ಬೇಡ. ನಿನ್ನಿಂದ ಈ ಕೆಲಸ ಆಗುತ್ತೋ ಇಲ್ಲವೋ ಹೇಳು.''

''ಆಗಲಿ ಮಾಡ್ತೀನಿ.''

''ಎಲ್ಲಾ ಚುರುಕಾಗಿ ಆಗಬೇಕು.''

''ಈಕೆಯ ಕಾರ್ಯಕ್ರಮದ ಬಗ್ಗೆ ಹೇಳಿ.''

''ರೋಹಿಣಿ ಸಂಪ್ರದಾಯಸ್ಥ ಹೆಣ್ಣಿನ ರೀತಿ ಕಾಣುತ್ತಾಳೆ. ಆದರೆ ಅವಳಿಗೆ ಕುಡಿತ, ಧೂಮಪಾನ ಮತ್ತು ವಿಪರೀತ ಸೆಕ್ಸ್ ಚಪಲ ಇದೆ. ಅವಳು ಆಗಾಗ ಫಾರಂ ಹೌಸ್‌ನಲ್ಲಿ ಕ್ಲೋಸ್ ಫ್ರೆಂಡ್ಸ್ ಜೊತೆ ಸೇರಿ ಪಾರ್ಟಿ ಮಾಡ್ತಾಳೆ.''

''ಹೂ... ಹೇಳಿ.''

''ಇವತ್ತು ಕರ್ನಾಟಕಕ್ಕೆ ಹೋಗೋದ್ರಿಂದ ಗ್ರಾಂಡ್ ಪಾರ್ಟಿ ಮಾಡುತ್ತಾಳೆ.''

''ಫಾರಂ ಹೌಸ್‌ನಲ್ಲಿ ಎಲ್ಲರೂ ಇರೋವಾಗ ಇವಳನ್ನ ಹೇಗೆ ಕೊಲೆ ಮಾಡಲು ಸಾಧ್ಯಫಿ?

''ಫಾರಂ ಹೌಸ್‌ಗೆ ಹೋಗಬಾರದು.''

''ನನಗೆ ಅರ್ಥವಾಗಲಿಲ್ಲಫಿ.''

''ಅವಳು ಕಾರಲ್ಲಿ ತನ್ನ ಮನೆಯಿಂದ ಫಾರಂ ಹೌಸ್‌ಗೆ ಕಾರಲ್ಲಿ ಬರುತ್ತಾಳೆ. ಆದರೆ ಡ್ರೈವರ್ ಜೊತೇಲಿ ಇರುತ್ತಾನೆ.''

''ಡ್ರೈವರ್ ಇದ್ದರೆ ತಲೆ ಬಿಸಿ ಜಾಸ್ತಿ ಆಗುತ್ತೆಫಿ. ಯಾಮಾರಿಸೋದು ಕಷ್ಟಫಿ.''

ಕೇಸರಿ ಶರ್ಮ ಈಗ ನೀಲಿ ಬಣ್ಣದ ಸ್ಪ್ರೇಯರ್ ಅನ್ನು ಕೊಟ್ಟನು. ''ದೂರದಿಂದ ಸ್ಪ್ರೇ ಮಾಡಿದರೂ ಪ್ರಜ್ಞೆ ಹೋಗುತ್ತದೆ.''

''ಓಕೆ ಡನ್.''

●●●

ಮತ್ತೊಂದು ಕೊಲೆ ಸುದ್ದಿ ಆಯಿತು. ಕರ್ನಾಟಕ ಮೂಲದ ರೋಹಿಣಿ ಶರ್ಮ ಕೊಲೆಯಾಗಿದ್ದಾಳೆ. ಕೊಲೆಗಾರ ಅವಳಿಗೆ ಫೋಟೋ ಕಳಿಸಿದ್ದಾನೆ. ಮೂರು ಕೊಲೆಗಳಂತೆ ಇವಳನ್ನೂ ಸಹ ಕೊಲೆ ಮಾಡಲಾಗಿದೆ. ಪೊಲೀಸರು ಕಾರನ್ನು ತಲಾಶ್ ಮಾಡಿದರು. ಡ್ರೈವರ್‌ನಿಂದ ಊಹೆ ಮಾಡಿರದಿದ್ದ ಸುಳಿವು ದೊರೆಯಿತು. ಕೊಲೆಗಾರ ಪ್ರಜ್ಞೆ ತಪ್ಪಿಸುವಾಗ ಮತ್ತು ರೋಹಿಣಿ ಶರ್ಮಳನ್ನು ಅಪಹರಿಸುವಾಗ, ಪರ್ಸ್ ಕಾರಿನ ಸೀಟಿನ ಮೇಲೆ ಬಿದ್ದಿತ್ತುಫಿ.

ಕೊಲೆಗಾರ ಪ್ರಭುವಿಲಾಸ!

ಅವಳ ವಿಳಾಸ, ಫೋನ್ ನಂಬರ್ ಎಲ್ಲಾ ಪೊಲೀಸರಿಗೆ ಲಭ್ಯವಾಗಿದೆ. ಕೊಲೆಗಾರನನ್ನು ಪೊಲೀಸರು ಬೇಟೆ ಆಡುತ್ತಿದ್ದಾರೆ. ಸುದ್ದಿ ಅಬ್ಬರದ ಪ್ರಚಾರ ಪಡೆಯಿತು. ಶ್ರೀಮಂತ ಕೇಸರಿ ಶರ್ಮ ಅಪ್‌ಸೆಟ್ ಆಗಿದ್ದಾನೆ. ಒಂದು ವೇಳೆ ಆ ಪ್ರಭು ವಿಲಾಸ ಪೊಲೀಸರಿಗೆ ಸಿಕ್ಕಿಬಿದ್ದು ತಪ್ಪನ್ನು ಒಪ್ಪಿಕೊಂಡರೆ ತಾನು ಯಾವ ರೀತಿ ತಪ್ಪಿಸಿಕೊಳ್ಳಲಿ ಎಂಬುದರ ಬಗ್ಗೆ ಚಿಂತಿಸುತ್ತಿದ್ದಾನೆ ಮತ್ತು ಹಣ ಮತ್ತು ರಾಜಕೀಯ ಪ್ರಭಾವ ಬಳಸಲು ರೆಡಿಯಾಗಿದ್ದಾನೆ.

●●●

ಹನ್ನೆರಡು ಗಂಟೆಗಳಲ್ಲಿ ಪ್ರಭುವಿಲಾಸನನ್ನು ಪೊಲೀಸರು ಬಂಧಿಸಿದರು. ವಿಚಾರಣೆ ನಡೆಯಿತು.

ಪ್ರಭುವಿಲಾಸ ಹೇಳಿದ್ದೇನು?

''ನಾನು ಯಾರನ್ನೂ ಕೊಲೆ ಮಾಡಿಲ್ಲಫಿ. ನನ್ನ ಜೊತೆ ಬನ್ನಿ'' ಎಂದು ನಗರದ ಹೊರವಲಯದಲ್ಲಿದ್ದ ಒಂಟಿ ಮನೆಗೆ ಕರೆತಂದನು.

ನೀಲಾಂಬಿಕೆ, ರೋಹಿಣಿ ಶರ್ಮ ಮತ್ತು ನಾಗಶ್ರೀ ಅಥವಾ ನಾಗಲಾಂಬಿಕೆ ಜೀವಂತವಾಗಿದ್ದಾರೆ. ಗೃಹಬಂಧನದಲ್ಲಿರುವ ಅವರಿಗೆ ಪ್ರಭುವಿಲಾಸ ಎಲ್ಲಾ ರೀತಿಯ ಅನುಕೂಲ ಮಾಡಿಕೊಟ್ಟಿದ್ದಾನೆ.

ಪ್ರಭುವಿಲಾಸ ಹೇಳುತ್ತಿದ್ದಾನೆ. ಶ್ರೀಮಂತ ಉದ್ಯಮಿ ಕೇಸರಿ ಶರ್ಮ ಅವರ ಋಣದಲ್ಲಿ ನಾನಿದ್ದೇನೆ. ಅವರು ಕೊಲೆ ಮಾಡಬೇಕು ಎಂದು ಒತ್ತಾಯ ಮಾಡಿದಾಗ ನಿರಾಕರಿಸಲು ಆಗಲಿಲ್ಲಫಿ. ಆದರೆ ಬಾಳಿ ಬದುಕಬೇಕಾದ ಹೆಂಗಸರ ಪ್ರಾಣ ತೆಗೆಯಲು ಮನಸ್ಸು ಬರಲಿಲ್ಲಫಿ.

ಒಬ್ಬರನ್ನಾಗಿ ಕಿಡ್ನಾಪ್ ಮಾಡಿ ಈ ಮನೆಗೆ ಕರೆದುಕೊಂಡು ಬಂದೆ. ಅವರ ಪ್ರಜ್ಞೆ ತಪ್ಪಿಸಿ ಆಡಿನ ರಕ್ತ ಚೆಲ್ಲಾಡಿದೆನು. ಕೊಲೆ ಆಯುಧವನ್ನು ರಕ್ತದಲ್ಲಿ ಅದ್ದಿಫಿ, ನೆಲದ ಮೇಲೆ ಹಾಕಿ ಫೋಟೋಗಳನ್ನು ತೆಗೆದು ಕೇಸರಿ ಶರ್ಮ ಅವರಿಗೆ ಆಗಾಗ ಕಳಿಸುತ್ತಿದ್ದೆಫಿ. ಇದರಿಂದ ಅವರಿಗೆ ಪೈಶಾಚಿಕ ಆನಂದ ಆಗುತ್ತಿತ್ತುಫಿ. ಎಂದು ಹೇಳಿ ಮೂವರು ಹೆಂಗಸರನ್ನು ಬಿಡುಗಡೆ ಮಾಡಿದರು.

ಕೇಸರಿ ಶರ್ಮ ಕಣ್ಮರೆಯಾಗಿದ್ದಾರೆ. ಅವರು, ತನಗೆ ಮೋಸ ಮಾಡಿದ ಪ್ರಭುವಿಲಾಸನನ್ನು ಕೊಲೆ ಮಾಡಿಸಿದರು. ವಿಲಕ್ಷಣ ವ್ಯಕ್ತಿಗೆ ಪ್ರಪಂಚದಲ್ಲಿಫಿ, ತನಗೆ ಅವಮಾನ ಮಾಡಿರುವ ಹೆಣ್ಣುಗಳು ಬದುಕಬಾರದು ಎಂದು ಈ ಆಟ ಆಡಿದ್ದರು. ☯



ಚಿತ್ರರಂಗದಲ್ಲಿ ಒಂದು ಕಥೆ ಸಿನಿಮಾ ಆಗುವುದು ಅಷ್ಟು ಸುಲಭ ಅಲ್ಲ. ಆ ಕಥೆಯನ್ನು ಯಾರ್ ಯಾರೋ ಕೇಳುತ್ತಾರೆ. ಕೆಲವರಿಗೆ ಇಷ್ಟವಾಗಿ ಒಪ್ಪಿ ನಟಿಸುತ್ತಾರೆ. ಅದೇ ಕಥೆ ಚೆನ್ನಾಗಿಲ್ಲ ಎಂದು ರಿಜೆಕ್ಟ್ ಮಾಡಿದವರು ಬಳಿಕ ಗೆದ್ದಾಗ ಕೈ ಕೈ ಹಿಸುಕಿಕೊಂಡಿರುವ ಉದಾಹರಣೆಗಳು ಇವೆ.

ಕನ್ನಡದ 'ಕಸ್ತೂರಿ ನಿವಾಸ' ಚಿತ್ರದ ಕಥೆಯನ್ನು ತಮಿಳು ನಟ ಶಿವಾಜಿ ಗಣೇಶನ್ ರಿಜೆಕ್ಟ್ ಮಾಡಿದ್ದರು. ಕನ್ನಡದಲ್ಲಿ ಡಾ. ರಾಜ್‌ಕುಮಾರ್ ನಟಿಸಿ ಸಿನಿಮಾ ಬ್ಲಾಕ್‌ಬಸ್ಟರ್ ಹಿಟ್ ಆಗಿತ್ತು. ಶಾಕ್ ಆಗಿದ್ದ ಶಿವಾಜಿ ಗಣೇಶನ್ ಚಿತ್ರದ ರೈಟ್ಸ್ ಕೊಂಡುಕೊಂಡು ತಮಿಳಿನಲ್ಲಿ ರೀಮೆಕ್ ಮಾಡಿದ್ದರು. ಚಿತ್ರರಂಗದಲ್ಲಿ ಇಂತಹ ಕೆಲ ಉದಾಹರಣೆಗಳು ಸಿಗುತ್ತವೆ.

ಸಾಹಸಸಿಂಹ ವಿಷ್ಣುವರ್ಧನ್ ನಟಿಸಿದ ಸೂಪರ್ ಹಿಟ್ ಚಿತ್ರವನ್ನು ತೆಲುಗಿನಲ್ಲಿ ರೀಮೆಕ್ ಮಾಡುವ ಪ್ರಯತ್ನ ನಡೆದಿದ್ದಂತೆ. ನಿರ್ದೇಶಕರು ಅಚ್ಚರಿಗೊಂಡಿದ್ದರಂತೆ.

ಕನ್ನಡದಲ್ಲಿ 'ಆಪ್ತಮಿತ್ರ' ಚಿತ್ರ ಬ್ಲಾಕ್‌ಬಸ್ಟರ್ ಹಿಟ್ ಆಗಿದ್ದು ಗೊತ್ತೇಯಿದೆ. ಮಲಯಾಳಂನ 'ಮಣಿ ಚಿತ್ರತಾಳ್' ಚಿತ್ರದ ರೀಮೆಕ್ ಇದು. ಆದರೆ ಕನ್ನಡದಲ್ಲಿ ಚಿತ್ರ ಗೆದ್ದ ಬಳಿಕ ತಮಿಳು, ಹಿಂದಿ ಸೇರಿ ಹಲವು ಭಾಷೆಗಳಿಗೆ ರೀಮೆಕ್ ಆಗುವಂತಾಯಿತು. ವಿಷ್ಣುವರ್ಧನ್, ಸೌಂದರ್ಯ, ಪ್ರೇಮಾ, ರಮೇಶ್ ಅರವಿಂದ್ ನಟಿಸಿದ 'ಆಪ್ತಮಿತ್ರ' ಸಿನಿಮಾ ಬಾಕ್ಸಾಫೀಸ್ ಶೇಕ್ ಮಾಡಿತ್ತು. ಈ ಚಿತ್ರವನ್ನು ತೆಲುಗಿನಲ್ಲಿ ರೀಮೆಕ್ ಮಾಡಲು ನಿರ್ದೇಶಕ ಬಿ.ಎನ್. ಆದಿತ್ಯ ಪ್ರಯತ್ನಿಸಿದ್ದರಂತೆ.

'ಚಂದ್ರಮುಖಿ' ಗೆದ್ದ ಬಳಿಕ ಬಿ.ಎನ್. ಆದಿತ್ಯ ಜೊತೆ ಮಾತನಾಡಿದ್ದ ಚಿರು ನಿಮ್ಮ ಲೆಕ್ಕಾಚಾರ ಸರಿಯಾಗಿತ್ತು. ಆ ಚಿತ್ರದಲ್ಲಿ ನಾನು ನಟಿಸಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಿದ್ದಾಗಿ ತೆಲುಗು ಮಾಧ್ಯಮಗಳಲ್ಲಿ ವರದಿಯಾಗಿದೆ. ವಿಷ್ಣುವರ್ಧನ್ ಹಾಗೂ ರಜನಿಕಾಂತ್ ಇಬ್ಬರಿಗೂ 'ಮಣಿ ಚಿತ್ರತ್ತಾಳ್' ರೀಮೆಕ್ ದೊಡ್ಡ ಬ್ರೇಕ್ ಕೊಟ್ಟಿತ್ತು. ಕನ್ನಡದಲ್ಲಿ ದ್ವಾರಕೀಶ್ 'ಆಪ್ತಮಿತ್ರ' ಚಿತ್ರ ನಿರ್ಮಿಸಿ ಭರ್ಜರಿ ಸಕ್ಸಸ್ ಕಂಡಿದ್ದರು. ಸಾಲಸುಳಿಯಿಂದ ಹೊರ ಬಂದಿದ್ದರು.

ತಮಿಳಿನಲ್ಲಿ ಕೆಲ ಬದಲಾವಣೆ ಮಾಡಿಕೊಂಡು 'ಚಂದ್ರಮುಖಿ' ಸಿನಿಮಾ ಮಾಡಲಾಗಿತ್ತು. ರಜನಿಕಾಂತ್ ಇಮೇಜ್‌ಗೆ ತಕ್ಕಂತೆ ಹೊಸದಾಗಿ ಒಂದಷ್ಟು ಸನ್ನಿವೇಶಗಳನ್ನು ಪಿ. ವಾಸು ಸೇರಿಸಿದ್ದರು. ಅದು ಅಲ್ಲಿ ಪ್ಲಸ್ ಆಗಿತ್ತು. ಕನ್ನಡದಲ್ಲಿ ಸೌಂದರ್ಯ ಮಾಡಿದ್ದ ಪಾತ್ರವನ್ನು ಜ್ಯೋತಿಕಾ ನಿಭಾಯಿಸಿದ್ದರು. ನಯನತಾರಾ ನಾಯಕಿಯಾಗಿ ಮಿಂಚಿದ್ದರು.

# ವಿಷ್ಣು ಸಿನಿಮಾ ರೀಮೆಕ್ ಬೇಡ ಎಂದಿದ್ದ ಚಿರು; ತಲೈವಾ ಮಾಡಿ ಗೆದ್ದಾಗ ಕೈಕೈ ಹಿಸುಕಿಕೊಂಡಿದ್ರಾ?





ಮೆಗಾಸ್ಟಾರ್ ಚಿರಂಜೀವಿ ಬಳಿ ಚರ್ಚಿಸಿದಾಗ ಅವರು ಬೇಡ ಇದು ವರ್ಕ್ ಆಗಲ್ಲ ಎಂದಿದ್ದರಂತೆ. ಬಳಿಕ ಅದೇ ಕಥೆಯನ್ನು ತಮಿಳಿನಲ್ಲಿ ರಜನಿಕಾಂತ್ ಮಾಡಿ ಭರ್ಜರಿ ಯಶಸ್ಸುಗಳಿಸಿದ ಬಳಿಕ ಚಿರಂಜೀವಿ

ಚಿರಂಜೀವಿಗೆ ಬಹಳ ಆಪ್ತರಾಗಿದ್ದ ಬಿ.ಎನ್. ಆದಿತ್ಯ ಅವರೊಟ್ಟಿಗೆ ಸಿನಿಮಾ ಮಾಡಲು ಬಯಸಿದ್ದರು. ಆಗ 'ಆಪ್ತಮಿತ್ರ' ರೀಮೆಕ್ ಮಾಡಲು ಚಿರು ಬಳಿ ಕೇಳಿದ್ದರಂತೆ. ಸಿನಿಮಾ ನೋಡಿ ಚಿರು ಇದು ವರ್ಕ್ ಆಗಲ್ಲ ಎನಿಸುತ್ತದೆ ಬೇಡ ಎಂದುಬಿಟ್ಟಿದ್ದರಂತೆ. ಮುಂದೆ ಪಿ. ವಾಸು ತಮಿಳಿನಲ್ಲಿ ಈ ಸಿನಿಮಾ ರೀಮೆಕ್ ಮಾಡಿ ಗೆದ್ದರು. ರಜನಿಕಾಂತ್ ನಟನೆಯ 'ಚಂದ್ರಮುಖಿ' ಸಿನಿಮಾ ತೆಲುಗಿಗೂ ಡಬ್ ಆಗಿ ಭರ್ಜರಿ ಸಕ್ಸಸ್ ಕಂಡಿತ್ತು.

☯

# ಪಾಪಗಳು ಮಿತಿಮೀರಿದಾಗ ದೇವರು ಅವತಾರ ಎತ್ತುತ್ತಾನೆ




ಕೆಜಿಎಫ್, ಕಾಂತಾರ ಚಿತ್ರಗಳ ನಂತರ ಹೊಂಬಾಳೆ ಫಿಲಂಸ್‌ನ ಮತ್ತೊಂದು ಬಹುನಿರೀಕ್ಷಿತ ಚಿತ್ರ 'ಬಘೀರ' ಇದೇ ತಿಂಗಳ 31ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ, ವಿಜಯ್ ಕಿರಗಂದೂರು ಅವರ ನಿರ್ಮಾಣದ ಈ ಚಿತ್ರದಲ್ಲಿ ಶ್ರೀಮುರಳಿ ಅವರು ನಾಯಕನಾಗಿ ಕಾಣಿಸಿಕೊಂಡಿದ್ದು, ಸಪ್ತಸಾಗರದಾಚೆ ಎಲ್ಲೋ ಖ್ಯಾತಿಯ ರುಕ್ಮಿಣಿ ವಸಂತ್ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ, ಪ್ರಶಾಂತ್ ನೀಲ್ ಈ ಚಿತ್ರದ ಕಥೆ ಬರೆದಿದ್ದು, ಡಾ.ಸೂರಿ ಆಕ್ಷನ್ ಕಟ್ ಹೇಳಿದ್ದಾರೆ. ಚಿತ್ರದಲ್ಲಿ ಶ್ರೀಮುರುಳಿ ಅವರ ಪಾತ್ರದ ಬಗ್ಗೆ ಹೇಳಬೇಕೆಂದರೆ ಹಗಲು ಪೊಲೀಸ್ ಆಫೀಸರ್, ರಾತ್ರಿ ಬೇಟೆ ಆಡುವ ಕರಿಚಿರತೆ.

ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಸೋಮವಾರ ಬೆಳಿಗ್ಗೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಮುರುಳಿ ಬಘೀರ ಮೂರು ವರ್ಷದ ಜರ್ನಿ, ಹಲವಾರು ವಿಷಯಗಳನ್ನು ತಿಳಿಸಿಕೊಟ್ಟಿದೆ. ಕೆಲಸದಲ್ಲಿ ಇಲ್ಲಿ ಇರೋರೆಲ್ಲ ರಾಕ್ಷಸರು ಎನ್ನಬಹುದು. ಅದ್ಭುತವಾದ ಕಥೆಯನ್ನು ಬರೆದ ಪ್ರಶಾಂತ್‌ನೀಲ್‌ಗೆ ಧನ್ಯವಾದ ಹೇಳಬೇಕು. ನನ್ನ ಸಿನಿಮಾ ಜರ್ನಿಯಲ್ಲಿ ಒಳ್ಳೆಯ ನಿರ್ಮಾಪಕರೆಂದರೆ ಹೊಂಬಾಳೆ ಫಿಲಂಸ್. ಇದೊಂದು ದೊಡ್ಡ ಪ್ರಯತ್ನದ ಸಿನಿಮಾ, ನನ್ನ ಕಾಲಿಗೆ ಏಟು ಆದಾಗ ತುಂಬಾ ತೊಂದರೆ ಆಯಿತು. ಇನ್ನೆರಡು ದಿನ ಚಿತ್ರೀಕರಣ ಆಗಿದ್ದರೆ ಶೂಟಿಂಗ್ ಮುಕ್ತಾಯವಾಗುತ್ತಿತ್ತುಫಿ, ಕಾಲಿಗೆ ಏಟು ಆಗಿದ್ದರಿಂದ ಆರು ತಿಂಗಳ ಕಾಲ ಸೆಟ್ಟನ್ನು ಕಾಯ್ದುಕೊಂಡಿದ್ದೇ ದೊಡ್ಡ ಚಾಲೆಂಜ್ ಆಗಿತ್ತು. ಬಘೀರನ ಪಾತ್ರ ನೋಡುಗರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಬಘೀರನ ಆಲೋಚನೆ ಬಳಸಿಕೊಂಡರೆ ಸಮಾಜದಲ್ಲಿ ಬದಲಾವಣೆ ಆಗಬಹುದು ಎಂದು ಹೇಳಿದರು.

ನಂತರ ಮಾತನಾಡಿದ ನಿರ್ದೇಶಕ ಡಾ.ಸೂರಿ, ಸಂಸ್ಥೆ ನನ್ನನ್ನು ನಂಬಿ ಇಷ್ಟು ದೊಡ್ಡ ಜವಾಬ್ದಾರಿ ನೀಡಿತ್ತು, ಅದನ್ನು ಸಮರ್ಥವಾಗಿ ನಿಭಾಯಿಸಿರುವೆನೆಂಬ ಭರವಸೆಯಿದೆ, ಪ್ರಶಾಂತ್‌ನೀಲ್ ಕಥೆ ಅಷ್ಟೇ ಕೊಟ್ಟಿಲ್ಲ, ಎಲ್ಲದರಲ್ಲೂ ಬೆನ್ನೆಲುಬಾಗಿ ನಿಂತು ಸಹಕಾರ ನೀಡಿದ್ದಾರೆ. ಶ್ರೀಮುರಳಿ ಅವರು ಮೂರು ವರ್ಷ ಶ್ರಮ ಹಾಕಿದ್ದಾರೆ. ಈ ಚಿತ್ರಕ್ಕೆ ವಿಶೇಷವಾಗಿ ರಾತ್ರಿ ವೇಳೆಯಲ್ಲಿಯೇ ಹೆಚ್ಚಾಗಿ ಶೂಟ್ ಮಾಡಲಾಗಿದೆ. ಈ ಚಿತ್ರದಲ್ಲಿ ಶ್ರೀ ಮುರಳಿ ಅವರನ್ನು ಹೊಸದಾಗಿ ಪ್ರೆಸೆಂಟ್ ಮಾಡ್ತಾ ಇದ್ದೇನೆ. ಸೂಪರ್ ಹೀರೋ ಹಾಗೂ ಪೊಲೀಸ್ ಆಫೀಸರ್ ಆಗಿ ಎರಡು ಶೇಡ್ ಪಾತ್ರ ನಿರ್ವಹಿಸಿದ್ದಾರೆ. ಇದೊಂದು ಎಮೋಷನಲ್ ಆ್ಯಕ್ಷನ್ ಡ್ರಾಮಾ ಎಂದರು. ನಾಯಕಿ ರುಕ್ಮಿಣಿ ವಸಂತ್ ಮಾತನಾಡುತ್ತ ಕನ್ನಡ ಆಡಿಯನ್ಸ್ ಆಗಿ ಟ್ರೇಲರ್ ನನಗೆ ತುಂಬಾ ಇಷ್ಟ ಆಯ್ತು. ಪಾತ್ರದ ಬಗ್ಗೆ ಹೆಚ್ಚೇನು ಹೇಳುವ ಹಾಗಿಲ್ಲ, ಒಳ್ಳೆಯ ಕಲಾವಿದರ ಜೊತೆ ನಟಿಸಿ ತುಂಬಾ ಕಲಿತಿದ್ದೇನೆ ಎಂದರು. ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಮಾತನಾಡುತ್ತ ಬಘೀರ ಒಳ್ಳೆಯ ಕಥೆ ಇರುವ ಸಿನಿಮಾ. ಮಾಸ್ ಸಿನಿಮಾಗೆ ನನ್ನ ಜರ್ನಿ ಶುರು ಆಗ್ತಾ ಇದೆ. ಆಕ್ಷನ್ ದೃಶ್ಯಗಳು ಚೆನ್ನಾಗಿ ಮೂಡಿಬಂದಿವೆ ಎಂದರು. ಉಳಿದಂತೆ ಸಾಹಸ ನಿರ್ದೇಶಕ ಚೇತನ ಡಿಸೋಜಾ, ಛಾಯಾಗ್ರಾಹಕ ಎ.ಜೆ. ಶೆಟ್ಟಿ, ನಟ ಪ್ರಮೋದ್ ಶೆಟ್ಟಿಫಿ, ಖಳನಾಯಕ ಗರುಡ ರಾಮ್ ಚಿತ್ರದ ಕುರಿತಂತೆ ಮಾತನಾಡಿದರು. ಚಿತ್ರದ ಸಹ ನಿರ್ಮಾಪಕ ಆದರ್ಶ ಮಾತನಾಡುತ್ತ ಅಕ್ಟೋಬರ್31ಕ್ಕೆ ಬಘೀರ ರಾಜ್ಯಾದ್ಯಂತ ತೆರೆಗೆ ಬರುತ್ತಿದೆ. ನಿಮ್ಮೆಲ್ಲರ ಪ್ರೋತ್ಸಾಹ ನಮಗೆ ಬೇಕು ಎಂದು ಹೇಳಿದರು. ತಾಯಿಯ ಪಾತ್ರ ಮಾಡಿರುವ ಸುಧಾರಾಣಿ ಮಾತನಾಡುತ್ತ ಚಿತ್ರ ತುಂಬಾ ಅದ್ಭುತವಾಗಿ ಮೂಡಿ ಬಂದಿದೆ. ಈ ಚಿತ್ರದಲ್ಲಿ ನನ್ನದು ಚಿಕ್ಕ ಪಾತ್ರವಾದರೂ ಮುಖ್ಯವಾಗಿರುತ್ತದೆ ಎಂದ ಹೇಳಿದರು.



☯


# ವರದಿಗಾರರು ಬೇಕಾಗಿದ್ದಾರೆ

''ಪೊಲೀಸ್ ನ್ಯೂಸ್'' ಪತ್ರಿಕೆಯ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ವರದಿಗಾರರಾಗಿ ಕೆಲಸ ಮಾಡಲು ಇಚ್ಛಿಸುವವರು ತಮ್ಮ ಭಾವಚಿತ್ರ ಸಮೇತ ತಮ್ಮ ಬಗ್ಗೆ ವಿವರಿಸಿ ಮತ್ತು ಒಂದು ಸುದ್ದಿಯನ್ನು ಬರೆದು ಕಳುಹಿಸಿ ಕೊಡಿ.

**ವಿವರ ಕಳುಹಿಸುವ ವಿಧಾನ :**

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆಫಿ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

# ಪುಷ್ಪ-2 ಹೊಸ ಪೋಸ್ಟರ್ ಬಿಡುಗಡೆ



ಈ ವರ್ಷದ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾಗಳಲ್ಲಿ ಪುಷ್ಪ-2 ಕೂಡ ಒಂದಾಗಿದೆ. ಅಲ್ಲು ಅರ್ಜುನ್ ನಟನೆಯ ಪುಷ್ಪ-2 ಚಿತ್ರ ಇದೇ ಡಿಸೆಂಬರ್ 6ಕ್ಕೆ ವಿಶ್ವಾದ್ಯಂತ ಬಿಡುಗಡೆಯಾಗುತ್ತಿದೆ. ಪುಷ್ಪ ಚಿತ್ರದ ಸೀಕ್ವೆಲ್ ಇದಾಗಿದ್ದು, ಅಲ್ಲು ಅರ್ಜುನ್ ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಬಹು ನಿರೀಕ್ಷಿತ ಈ ಚಿತ್ರ ತೆರೆಗೆ ಬರಲು ಇನ್ನೂ 50 ದಿನಗಳು ಬಾಕಿ ಉಳಿದಿವೆ. ಈಗ ಚಿತ್ರತಂಡ ಪುಷ್ಪರಾಜ್ ನ ಹೊಸ ಲುಕ್‌ನ್ನು ರಿಲೀಸ್ ಮಾಡುವ ಮೂಲಕ ಮತ್ತಷ್ಟು ಕುತೂಹಲ ಹುಟ್ಟು ಹಾಕಿದೆ. ಇತ್ತೀಚೆಗಷ್ಟೇ ಚಿತ್ರತಂಡ ರಿಲೀಸ್ ಮಾಡಲಾಗಿರುವ ಈ ಹೊಸ ಪೋಸ್ಟರ್‌ನಲ್ಲಿ ಕಾಲು ಮೇಲೆ ಕಾಲು ಹಾಕಿ ಸೀರಿಯಸ್ ಮೋಡ್‌ನಲ್ಲಿ ಕುಳಿತಿರುವ ಪುಷ್ಪ ರಾಜ್‌ನ ಲುಕ್‌ನ್ನು ಅನಾವರಣ ಮಾಡಲಾಗಿದೆ. ಈ ಹೊಸ ಪೋಸ್ಟರ್ ಪ್ರೇಕ್ಷಕರು ಮತ್ತು ಅಭಿಮಾನಿಗಳನ್ನು ಸೆಳೆದಿದೆ, ಪುಷ್ಪ ಸೀಕ್ವೆಲ್ ಆಗಿ ಮೂಡಿಬರುತ್ತಿರುವ ಈ ಚಿತ್ರದ ಟೀಸರ್ ಹಾಗೂ ಟೈಟಲ್ ಟ್ರ್ಯಾಕ್ ಈಗಾಗ್ಲೇ ಭಾರೀ ಸದ್ದು ಮಾಡಿದ್ದು, ರಶ್ಮಿಕಾ ಮಂದಣ್ಣ ಹಾಗೂ ಅಲ್ಲು ಅರ್ಜುನ್ ಇವರಿಬ್ಬರ ಆನ್‌ಸ್ಕ್ರೀನ್ ಕೆಮಿಸ್ಟ್ರಿಗೆ ಅಭಿಮಾನಿಗಳು ಫಿದಾ ಆಗಿದ್ದಾರೆ.

ಪುಷ್ಪ 2 ಸಿನಿಮಾದ ಟೀಸರ್ ಹಾಗೂ ಹಾಡುಗಳು ಈಗಾಗಲೇ ಭಾರೀ ಸದ್ದು ಮಾಡುತ್ತಿವೆ. ಮಿಲಿಯನ್‌ಗಟ್ಟಲೇ ವೀಕ್ಷಣೆ ಪಡೆದುಕೊಂಡಿವೆ. ಮೈತ್ರಿ ಮೂವೀ ಮೇಕರ್ಸ್ ಹಾಗೂ ಸುಕುಮಾರ್ ರೈಟಿಂಗ್ ನಿರ್ಮಾಣದಡಿ ಮೂಡಿಬರ್ತಿರುವ ಪುಷ್ಪ ಸೀಕ್ವೆಲ್‌ಗೆ ರಾಕ್‌ಸ್ಟಾರ್ ದೇವಿಪ್ರಸಾದ್ ಅವರು ಮ್ಯೂಸಿಕ್ ಕಂಪೋಜ್ ಮಾಡಿದ್ದಾರೆ, ಮಿರೆಸ್ಲೋ ಕುಬಾ ಬ್ರೋಜೆಕ್ ಅವರು ಛಾಯಾಗ್ರಾಹಣ ಒದಗಿಸಿದ್ದಾರೆ. ಈ ಚಿತ್ರಕ್ಕೆ ಸುಕುಮಾರ್ ಅವರು ಆಕ್ಷನ್ ಕಟ್ ಹೇಳಿದ್ದಾರೆ. ಅಲ್ಲು ಅರ್ಜುನ್ ಅವರ ಜೊತೆ ಶ್ರೀವಲ್ಲಿಯಾಗಿ ರಶ್ಮಿಕಾ ಮಂದಣ್ಣ ನಟಿಸಿದ್ದಾರೆ. ಫಹದ್ ಫಾಸಿಲ್, ಡಾಲಿ ಧನಂಜಯ್, ಜಗಪತಿ ಬಾಬು, ಪ್ರಕಾಶ್‌ರಾಜ್, ಸುನೀಲ್ ಮತ್ತು ಅನಸೂಯಾ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಈ ಮೊದಲು ಪುಷ್ಪ ದಿ ರೂಲ್ ಸಿನಿಮಾವನ್ನು ಆಗಸ್ಟ್ 15ಕ್ಕೆ ತೆರೆಗೆ ತರಲು ಚಿತ್ರತಂಡ ಯೋಜನೆ ಹಾಕಿಕೊಂಡಿತ್ತು. ಆ ಬಳಿಕ ಚಿತ್ರದ ಕೆಲಸಗಳು ಬಾಕಿ ಉಳಿದಿದ್ದರಿಂದ ಬಿಡುಗಡೆಯ ದಿನಾಂಕವನ್ನು ಪೋಸ್ಟ್ ಪೋನ್ ಮಾಡಲಾಗಿತ್ತು. ಇದೀಗ ಡಿಸೆಂಬರ್ 6ಕ್ಕೆ ಚಿತ್ರದ ಬಿಡುಗಡೆಗೆ ಮುಹೂರ್ತ ಫಿಕ್ಸ್ ಮಾಡಲಾಗಿದೆ ☯

# ‘ಮಿಸ್ಟರ್ ರಾಣಿ’ ಟೀಸರ್ ಬಿಡುಗಡೆ



ತಮ್ಮ ಪ್ರತಿ ಸಿನಿಮಾದಲ್ಲಿ ಗಟ್ಟಿ ಸಂದೇಶದ ಮೂಲಕ ಪ್ರೇಕ್ಷಕರೆದುರು ಹಾಜರಾಗುವ ನಿರ್ದೇಶಕ ಮಧುಚಂದ್ರ ಈಗ ಮತ್ತೊಂದು ಫ್ರೆಶ್ ಕಥೆಯೊಂದನ್ನು ಹೊತ್ತು ಬಂದಿದ್ದಾರೆ. ಅದೇ ಮಿಸ್ಟರ್ ರಾಣಿ, ಕನ್ನಡದ ವಿಭಿನ್ನ ಜಾನರ್ ಚಿತ್ರಫಿಎನಿಸಿಕೊಂಡಿರುವ ಈ ಸಿನಿಮಾದ ಪೋಸ್ಟರ್ ಕ್ರಿಯೆಟಿವಿಯಿಂದಾಗಿಯೇ ಚಿತ್ರ ಸಖತ್ ವೈರೆಲ್ ಆಗಿತ್ತು. ತನ್ನ ಪೋಸ್ಟರ್‌ನಲ್ಲೇ ಒಂದು ರೀತಿಯ ಟ್ರೆಂಡ್ ಸೆಟ್ ಮಾಡಿದ್ದ ಈ ಸಿನಿಮಾದ ಟೀಸರ್ ಇದೀಗ ಬಿಡುಗಡೆಯಾಗಿದೆ. ಸದ್ಯದ ಕ್ರೈಮ್, ಥ್ರಿಲರ್, ಹಾರರ್, ಲವ್ ಸ್ಟೋರಿ ಹೀಗೆ ಮಾಮೂಲಿ ಅಂಶಗಳನ್ನು ಬದಿಗಿಟ್ಟು ವಿನೂತನ ಶೈಲಿಯ ಕಾಮಿಡಿ ಎಂಟರ್‌ಟೈನರ್ ಚಿತ್ರವನ್ನು ವಾಸ್ಕೋಡ ಗಾಮ, ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ ಖ್ಯಾತಿಯ ನಿರ್ದೇಶಕ ಮಧುಚಂದ್ರ ಅವರು ತೆರೆಗೆ ತರುತ್ತಿದ್ದಾರೆ. ತಾನೊಬ್ಬ ಹೀರೋ ಆಗ್ಬೇಕು ಅಂತ ಸಿನಿಮಾ ರಂಗಕ್ಕೆ ಬಂದ ಹುಡುಗನೊಬ್ಬ ಆಕಸ್ಮಿಕವಾಗಿ ಹೀರೋಯಿನ್ ಆಗಿಬಿಡ್ತಾನೆ ಅನ್ನೋದೇ ಈ ಟೀಸರ್‌ನಲ್ಲಿ ಹೇಳಲಾಗಿದೆ. ಆದರೆ ಅದು ಹೇಗೆ ಅನ್ನೋದನ್ನು ತೆರೆಯ ಮೇಲೇ ನೋಡಬೇಕು. ಒನ್‌ಲೈನ್ ಸ್ಟೋರಿಯಲ್ಲೇ ಈ ಸಿನಿಮಾ ಅದೆಷ್ಟು ಡಿಫರೆಂಟಾಗಿದೆ ಮತ್ತು ಮಜಾವಾಗಿದೆ ಅನ್ನೋದು ಗೊತ್ತಾಗುತ್ತೆ. ಲಕ್ಷ್ಮಿ ನಿವಾಸ ಸೀರಿಯಲ್‌ನಲ್ಲಿ ಜಯಂತ್ ಪಾತ್ರದ ಮೂಲಕ ಫೇಮಸ್ ಆಗಿರೋ ನಟ ದೀಪಕ್ ಸುಬ್ರಹ್ಮಣ್ಯ ಅವರು ಈ ಚಿತ್ರದ ಹೀರೋ(ಯಿನ್!?) ರಾಣಿಯ ರೋಲ್ ಮಾಡಿದ್ದಾರೆ, ಇದು ದೀಪಕ್ ಸುಬ್ರಹ್ಮಣ್ಯ ಅಂತ ಗೊತ್ತಾದಾಗ ತುಂಬಾ ಜನ ಶಾಕ್ ಆಗಿದ್ದಾರೆ! ಒಬ್ಬ ಹೊಸ ಹುಡುಗ ಈ ಲೆವೆಲ್‌ನಲ್ಲಿ ಹುಡುಗಿ ಥರ ಚೇಂಜ್ ಓವರ್ ಮಾಡೋಕೆ ನಿಜಕ್ಕೂ ಸಾಧ್ಯಾನಾ ಅಂತ ಎಲ್ಲರೂ ಅಚ್ಚರಿಪಟ್ಟಿದ್ದಾರೆ. ರಾಣಿ ಚಿತ್ರದ ಪೋಸ್ಟರ್ ನೋಡಿ, ನಮಗೆ ಇನ್ನೊಬ್ಬಳು ಹೀರೋಯಿನ್ ಕಾಂಪಿಟೇಷನ್ ಮಾಡೋಕೆ ಬಂದಳಲ್ಲ ಅಂತ ತುಂಬಾ ಜನ ನಾಯಕಿಯರು ಹೊಟ್ಟೆಕಿಚ್ಚು ಪಟ್ಟುಕೊಂಡಿದ್ದರಂತೆ! ಆದ್ರೆ ಟೀಸರ್ ನೋಡಿ ಅಯ್ಯೋ ರಾಣಿ ಹುಡುಗಿ ಅಲ್ಲ.... ಹುಡುಗ ಅಂತ ಗೊತ್ತಾಗಿ ಬೇಸ್ತುಬಿದ್ದಿದ್ದಾರೆ ಎನ್ನಲಾಗಿದೆ. ಇನ್ನು ಈ ಟೀಸರ್ ನೋಡಿದಾಗ ಈ ಚಿತ್ರ ಟೆಕ್ನಿಕಲ್ ಆಗಿ ಬೇರೆಯದೇ ಲೆವೆಲ್‌ನಲ್ಲಿ ಮೂಡಿಬಂದಿರೋದು ಎದ್ದು ಕಾಣುತ್ತಿದೆ. ಟೀಸರ್‌ನ ಒಪನಿಂಗ್‌ನಲ್ಲಿ ಬರುವ ಅನಿಮೇಷನ್ ನೋಡಿದಾಗ ಇದು ಯಾವುದೋ ಹಾಲಿವುಡ್ ಚಿತ್ರವಿರಬೇಕು ಎಂದು ಅನಿಸದೇ ಇರದು. ಇದೊಂದು ವಿಭಿನ್ನ ರೀತಿಯ ಥಿಯೇಟ್ರಿಕಲ್ ಎಕ್ಸ್‌ಪೀರಿಯನ್ಸ್ ಕೊಡುವಂತ ಚಿತ್ರ. ಕಂಪ್ಲೀಟ್ ಕಾಮಿಡಿ ಪ್ಯಾಕೇಜ್ ಇರುವ ಈ ಚಿತ್ರದ ಟೀಸರ್ ಸದ್ಯ ಯೂ ಟ್ಯೂಬ್‌ನಲ್ಲಿ ರಿಲೀಸಾಗಿ ಟ್ರೆಂಡಿಂಗ್ ನಲ್ಲಿದೆ. ಎಕ್ಸೆಲ್ ಆರ್ಬಿಟ್ ಕ್ರಿಯೇಷನ್ಸ್ ಅಡಿ ಮಧುಚಂದ್ರ ಅವರೇ ಕಥೆ ಬರೆದು ನಿರ್ದೇಶಿಸಿರುವ ಮಿ.ರಾಣಿ ಚಿತ್ರಕ್ಕೆ ಜೂಡಾ ಸ್ಯಾಂಡಿ ಅವರ ಸಂಗೀತ, ರವೀಂದ್ರನಾಥ್ ಟಿ, ಅವರ ಛಾಯಾಗ್ರಹಣ ಹಾಗೂ ಮಧು ತುಂಬಕೆರೆ ಅವರ ಸಂಕಲನವಿದೆ. ☯

# ಕಡಿಮೆ ಆಯ್ತಾ ರಜಿನಿ ಕ್ರೇಜ್?

ಸೂಪರ್ ಸ್ಟಾರ್ ರಜಿನಿಕಾಂತ್ ಸಿನಿಮಾಗಳೆಂದರೆ ಅಲ್ಲಿ ಹಬ್ಬದ ವಾತಾವರಣ ಇರುತ್ತೆ. ಅಭಿಮಾನದ ಜಾತ್ರೆ ನಡೆಯುತ್ತೆ. ಟಿಕೆಟ್ ಬೆಲೆ ಗಗನಕ್ಕೇರಿರುತ್ತೆ. ಇನ್ನೂ ರಜಿನಿಕಾಂತ್ ಸಿನಿಮಾ ಅಂದರೆ ವ್ಯಾಪಾರ - ವ್ಯವಹಾರ ಎಲ್ಲವೂ ಮೊದಲೇ ನಡೆದಿರುತ್ತೆ. ದಾಖಲೆಯ ಮೊತ್ತಕ್ಕೆ ಚಿತ್ರದ ಹಕ್ಕುಗಳು ಬಿಡುಗಡೆಗೆ ಮುನ್ನವೇ ಬಿಕರಿಯೂ ಆಗಿರುತ್ತವೆ ಎನ್ನುವ ಮಾತು ಹೆಚ್ಚೇನ್ ಇಲ್ಲ ಕಳೆದ ಐದಾರು ವರ್ಷದ ಹಿಂದೆ ಕೇಳಿ ಬರುತ್ತಿತ್ತು.

Backfill Promotion ಆದರೆ ಈಗ ಪರಿಸ್ಥಿತಿ ಮೊದಲಿನಂತೆ ಇಲ್ಲ. ಮೊದಲೆಲ್ಲ ಮೊದಲ ದಿನವೇ ಕೋಟಿ ಹಣವನ್ನು ಕೊಳ್ಳೆ ಹೊಡೆಯುತ್ತಿದ್ದ ರಜಿನಿಯ ಚಿತ್ರಗಳು ಈಗ ಒಂದು ವಾರ ಕಳೆದರು ನೂರೈವತ್ತು ಕೋಟಿಯ ಗಡಿಯನ್ನು ತಲುಪುತ್ತಿಲ್ಲ. ಇದಕ್ಕೆ ‘ವೆಟ್ಟೈಯಾನ್’ ಸದ್ಯದ ಉದಾಹರಣೆ. ಹೌದು, ‘ವೆಟ್ಟೈಯಾನ್ ತೆರೆಗೆ ಬಂದು ಆರು ದಿನಗಳಾಗಿವೆ. ಆದರೂ ಕೂಡ ಚಿತ್ರದ ಗಳಿಕೆ ಅಷ್ಟಕಷ್ಟೇ. ಬಿಡುಗಡೆಯಾದ ಮೊದಲ ದಿನ ಭಾರತದಲ್ಲಿ ಮೂವತ್ತೊಂದು ಕೋಟಿಯನ್ನು ಗಳಿಸಿದ್ದ ಈ ಚಿತ್ರ ಕಳೆದ ಸೋಮವಾರ ಅಂದರೆ ತನ್ನ ಐದನೇ ದಿನದಂದು ಗಳಿಸಿದ್ದು ಕೇವಲ ಐದು ಕೋಟಿಯನ್ನು ಮಾತ್ರ. ಮೊದಲನೇ ದಿನದಿಂದ ಐದನೇ ದಿನದವರೆಗೆ ಚಿತ್ರದ ಗಳಿಕೆಯಲ್ಲಿ ಶೇಕಡಾ 74 % ಕುಸಿತವಾಗಿದೆ. ಇನ್ನೂ ನಿನ್ನೆ ಭಾರತದಲ್ಲಿ 4.3 ಕೋಟಿಯನ್ನು ಗಳಿಸಿರುವ ಚಿತ್ರ



ಇಂದು 4 ಕೋಟಿಯ ಗಡಿಯನ್ನು ಕೂಡ ತಲುಪುವಲ್ಲಿ ವಿಫಲವಾಗಿದೆ. ಚೆನ್ನೈ ಮತ್ತು ಬೆಂಗಳೂರು ಮಹಾ ಮಳೆಯಿಂದ ತತ್ತರಿಸಿರುವ ಕಾರಣ ಇವೆರಡು ಪ್ರೇಕ್ಷಕರ ಕೊರತೆ ಎದ್ದು ಕಾಣುತ್ತಿದೆ.

ಹೀಗೆ ಈ ಆರು ದಿನದಲ್ಲಿ ಭಾರತದಲ್ಲಿ 117 ಕೋಟಿಯನ್ನು ಗಳಿಸಿರುವ ವೆಟ್ಟೈಯಾನ್ ಹೊರದೇಶದಲ್ಲಿ ಇಲ್ಲಿಯವರೆಗೆ 70 ಕೋಟಿಯನ್ನು ಗಳಿಸಿದೆ. ಈ ಮೂಲಕ ವೆಟ್ಟೈಯಾನ್ ಗಳಿಕೆ 200 ಕೋಟಿ ಗಡಿಯನ್ನು ದಾಟಿದೆ. ಆದರೂ ಕೂಡ ಅಪಸ್ವರ ಕೇಳಿ ಬರುತ್ತಿದೆ. ಯಾಕೆಂದರೆ ರಜಿನಿಯ ಹೆಸರು ಮತ್ತು ಖದರ್ ಗೆ ಈ ಗಳಿಕೆ ತುಂಬಾ ಕಡಿಮೆ ಎನ್ನುವುದು ಅನೇಕರ ವಾದ. ಅದರಲ್ಲಿಯೂ ಕೂಡ ಈ ಚಿತ್ರದಲ್ಲಿ ರಜಿನಿಕಾಂತ್ ಮಾತ್ರವಲ್ಲ ಅಮಿತಾಭ್ ಬಚ್ಚನ್ ಕೂಡ ಇದ್ದಾರೆ. ಹೀಗಾಗಿಯೇ ಚಿತ್ರದಲ್ಲಿ ಭಾರತದ ಇಬ್ಬರು ಸೂಪರ್ ಸ್ಟಾರ್‌ಗಳಿದ್ದರೂ ಕೂಡ ಚಿತ್ರ ಕೇವಲ 200 ಕೋಟಿಯನ್ನಷ್ಟೇ ಗಳಿಸಿದೆ ಎಂದು ಅನೇಕರು ವ್ಯಂಗ್ಯವಾಡುತ್ತಿದ್ದಾರೆ. ರಜಿನಿ ಸ್ಟಾರ್ ಪರ್ವ ಕಡಿಮೆ ಆಯ್ತು ಎನ್ನುತ್ತಿದ್ದಾರೆ. ಮೊದಲು ರಜಿನಿಕಾಂತ್ ಅವರ ಚಿತ್ರಗಳಿರುತ್ತಿದ್ದ ಕ್ರೇಜ್ ಈಗ ಇಲ್ಲ ಎನ್ನುವುದಕ್ಕೆ ವೆಟ್ಟೈಯಾನ್ ಚಿತ್ರದ ಈ ಗಳಿಕೆಯೇ ಸಾಕ್ಷಿ ಎನ್ನುವ ಅಭಿಪ್ರಾಯವನ್ನು ಕೂಡ ವ್ಯಕ್ತ ಪಡಿಸುತ್ತಿದ್ದಾರೆ.

ಅಂದ್ಹಾಗೇ ರಜಿನಿಕಾಂತ್ ಅಭಿನಯದ ಹಿಂದಿನ ಚಿತ್ರ ಜೈಲರ್ ವಿಶ್ವವ್ಯಾಪಿ 600 ಕೋಟಿಗೂ ಅಽಕ ಹಣವನ್ನು ಗಳಿಸಿತ್ತು. ಈ ಮೂಲಕ ಇತಿಹಾಸವನ್ನು ಬರೆದಿತ್ತು. ಆದರೆ... ಸದ್ಯದ ಲೆಕ್ಕಾಚಾರವನ್ನು ನೋಡುತ್ತಿದ್ದರೆ ರಜಿನಿಕಾಂತ್ ಅಭಿನಯದ ವೆಟ್ಟೈಯಾನ್ 300 ಕೋಟಿಯ ಗಡಿಯನ್ನು ಕೂಡ ತಲುಪುವುದು ಕಷ್ಟವೆನ್ನುವ ಮಾತು ಕೇಳಿ ಬರುತ್ತಿದೆ. ಹಾಗಂಥ 300 ಕೋಟಿ ಅಸಾಧ್ಯ ಏನಿಲ್ಲ. ತಲುಪಿದರು ತಲುಪಬಹುದು. ಆದರೆ ಅದು ಸಾಧ್ಯವಾಗುವುದು ಚಿತ್ರದ ಪ್ರಚಾರವನ್ನು ಪ್ರೇಕ್ಷಕರೇ ಖುದ್ದು ಮಾಡಿದಾಗ, ಚಿತ್ರ ನೋಡಿಯೆಂದು ಬೇರೆಯವರಿಗೆ ಹೇಳಿದಾಗ. ಈ ಪವಾಡ ನಡೆಯುವುದು ಸದ್ಯಕ್ಕೆ ತುಸು ಕಷ್ಟ. ಈ ಕಾರಣಕ್ಕೆ ಹೆಚ್ಚೆಂದರೆ ಇನ್ನು ಇಪ್ಪತ್ತು ಕೋಟಿಯನ್ನು ಚಿತ್ರ ಗಳಿಸಬಹುದು ಎನ್ನುವ ಅಭಿಪ್ರಾಯವನ್ನು ಬಾಕ್ಸಾಫೀಸ್ ಪಂಡಿತರು ವ್ಯಕ್ತಪಡಿಸುತ್ತಿದ್ದಾರೆ. ☯

Vol. 40 No. 20 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com